ಉಳ್ಳಾಲ ವಾಣಿ
ವಾರ್ಷಿಕ ಚಂದಾದಾರಾಗಿರಿ
ಒಂದು ವರ್ಷ ಪೂರ್ತಿ ಪತ್ರಿಕೆ ಮನೆಗೆ ತಲುಪಿಸಲು
₹250 ಪಾವತಿಸಿರಿ

ಮಂಗಳೂರು ಜುಲೈ 09 – ಜುಲೈ 27: 2026 ಸಂಪುಟ 2, ಸಂಚಿಕೆ 21, ಪುಟಗಳು–8 RNI:KNKAN/26/A0422 www.ullalavani.com ullalavani@gmail.com ₹10

# ಉಳ್ಳಾಲ ವಾಣಿ

ಕನ್ನಡ ಪತ್ರಿಕೆ · ಕಡಲ ಮಗಳ್

ಸುದ್ದಿ, ಪತ್ರಿಕೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿರಿ
ಉಳ್ಳಾಲ ವಾಣಿ
ಅಪ್ಪಚ್ಚಿ ಕಾಂಪ್ಲೆಕ್ಸ್, ಯೆನೆಪೋಯ ಆಸ್ಪತ್ರೆ ಹತ್ತಿರ, ಕುತ್ತಾರುಪದವು
9972528110

ಪುಟ 2 ಸಚಿವ ಯು.ಟಿ.ಖಾದರ್‌ಗೆ AMEC ಗ್ಲೋಬಲ್ ಸಿಟಿಝುನ್ ಲೀಡರ್‌ಶಿಪ್ ಪ್ರಶಸ್ತಿ
ಪುಟ 3 ಯಕ್ಷಗಾನ ಪಠ್ಯಕ್ರಮದಿಂದ ಶೈಲಿಗೆ ಧಕ್ಕೆಯಿಲ್ಲ: ಪಟ್ಲ ಸತೀಶ್ ಶೆಟ್ಟಿ
ಪುಟ 4 ಯಮುನಾ ಹೊಳ್ಳರ ಸ್ಮರಣಾರ್ಥ 60 ಗಿಡಗಳ ನೆಡುವ ಮೂಲಕ ಚಾಲನೆ
ಪುಟ 7 ಕರ್ನಾಟಕ ಜಾನಪದ ಪರಿಷತ್ ಉಳ್ಳಾಲ ತಾಲೂಕು ಘಟಕದ ಪದಗ್ರಹಣ



## ರಾಶಿ ರಾಶಿ ಬೂತಾಯಿ ಮೀನು

ಉಳ್ಳಾಲ: ಒಂದೇ ಸಮನೆ ಬೂತಾಯಿ ಮೀನಿನ ಸಾಲುಗಳು ದಡಕ್ಕೆ ಅಪ್ಪಳಿಸಿದ್ದು, ಉಳ್ಳಾಲ ಸಮುದ್ರ ತೀರದ ಮಂದಿಗೆ ಬೂತಾಯಿ ಮೀನಿನ ಸುಗ್ಗಿಯಾಗಿದೆ. ದೋಣಿಯೊಂದು ಸಾಗುವ ಸಂದರ್ಭ ಅದರಿಂದ ಕೇಳಿಬಂದ ಸದ್ದಿನಿಂದ ಸಾಲುಸಾಲಾಗಿ ಸಾಗುವ ಬೂತಾಯಿ ಮೀನುಗಳು ಹಾದಿ ಬದಲಿಸಿದ್ದು, ಪರಿಣಾಮ ಸಮುದ್ರ ತೀರಕ್ಕೆ ಅಪ್ಪಳಿಸಿದೆ. ಮಧ್ಯಾಹ್ನ 11ರ ವೇಳೆಗೆ ಅಪ್ಪಳಿಸಿದ ಮೀನಿನ ರಾಶಿಯನ್ನು ಗಮನಿಸಿದ ಸ್ಥಳೀಯರು ನಾಮುಂದು ತಾ ಮುಂದು ಅನ್ನುತ್ತಾ ಅಲೆಗಳ ಅಬ್ಬರದ ನಡುವೆಯೂ ಮೀನನ್ನು ಸಂಗ್ರಹಿಸಿದರು. ಹಲವರು ವ್ಯವಹಾರವನ್ನು ನಡೆಸಿದರೆ, ಇನ್ನು ಕೆಲವರು ಮನೆಯಲ್ಲಿ ಸಾರು ಮಾಡಿದರು. ಅಪರೂಪಕ್ಕೊಮ್ಮೆ ಇಂತಹ ಮೀನಿನ ರಾಶಿ ಸಮುದ್ರ ತೀರಕ್ಕೆ ಅಪ್ಪಳಿಸುತ್ತದೆ. ಕೆಲ ತಿಂಗಳುಗಳ ಹಿಂದೆ ಮಲ್ಪೆಯಲ್ಲಿಯೂ ಮೀನಿನ ರಾಶಿ ಸಿಕ್ಕಿತ್ತು.

### ಪಾವೂರು ಸರ್ಕಾರಿ ಪ್ರೌಢಶಾಲೆಗೆ ಮೂವರೇ ಸರ್ಕಾರಿ ಶಿಕ್ಷಕರು

# ಶಿಕ್ಷಕರ ಕೊರತೆ, ನಿರ್ವಹಣೆಯ ಅಭಾವದಿಂದ ಸಮಸ್ಯೆಗಳ ಸರಮಾಲೆ

**ಮಂಗಳೂರು:** ಮಂಗಳೂರು ತಾಲೂಕಿನ ಪಾವೂರು ಗ್ರಾಮದ ಸರ್ಕಾರಿ ಪ್ರೌಢಶಾಲೆ ಉತ್ತಮ ಕಟ್ಟಡ, ಸಭಾಂಗಣ, ಗ್ರಂಥಾಲಯ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಹೊಂದಿದ್ದರೂ ಶಿಕ್ಷಕರ ಕೊರತೆ, ಗೇಟ್ ಇಲ್ಲದ ಆವರಣ ಹಾಗೂ ಸಮರ್ಪಕ ನಿರ್ವಹಣೆಯ ಅಭಾವದಿಂದ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. 2003ರಲ್ಲಿ ಆರಂಭಗೊಂಡ ಈ ಶಾಲೆಯ ಕಟ್ಟಡಕ್ಕೆ ಹಲವು ವರ್ಷಗಳಿಂದ ಬಣ್ಣ ಬಳಿಯದ ಕಾರಣ ಕಳೆಗುಂದಿದೆ.

ಪ್ರಸ್ತುತ ಶಾಲೆಯಲ್ಲಿ 115 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಮುಖ್ಯ ಶಿಕ್ಷಕಿ ಸೇರಿದಂತೆ ಕೇವಲ ಮೂವರು ಸರ್ಕಾರಿ ಶಿಕ್ಷಕರು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದ ಶಿಕ್ಷಕರನ್ನು ಎಸ್‌ಡಿಎಂಸಿ ನೇಮಿಸಿದ್ದು, ಅವರ ವೇತನವನ್ನು ಸರ್ಕಾರವೇ ಭರಿಸುತ್ತಿದೆ. ಆಂಗ್ಲ ಭಾಷಾ ಶಿಕ್ಷಕರ ಕೊರತೆಯಿಂದ ವಿಜ್ಞಾನ ಶಿಕ್ಷಕಿಯೇ 8, 9 ಹಾಗೂ 10ನೇ ತರಗತಿಗಳಿಗೆ ಇಂಗ್ಲಿಷ್ ಬೋಧಿಸುವ ಹೆಚ್ಚುವರಿ ಹೊಣೆ ಹೊತ್ತಿದ್ದಾರೆ.

ಮಳೆಗಾಲದಲ್ಲಿ ಶಾಲಾ ಕಟ್ಟಡದ ಚಾವಣಿಯಿಂದ ನೀರು ಸೋರಿಕೆಯಾಗುತ್ತಿದ್ದು, ಶೀಟ್ ಅಳವಡಿಸುವ ಅಗತ್ಯವಿದೆ. ಶಾಲೆಯ ಹಳೆಯ ಬೋರ್‌ವೆಲ್‌ನ ನೀರು ಗ್ರಾಮಸ್ಥರಿಗೆ ಉಪಯೋಗವಾಗುತ್ತಿದ್ದರೂ, ಶಾಲೆಯಲ್ಲಿಯೇ ಕುಡಿಯುವ ನೀರಿನ ಸಮಸ್ಯೆ ಇನ್ನೂ ಬಗೆಹರಿದಿಲ್ಲ.



**ಗೇಟ್ ಇಲ್ಲದ ಆವರಣ**

**ಶಾಲೆಗೆ ಆವರಣ ಗೋಡೆ ಇದ್ದರೂ ಪ್ರವೇಶ ದ್ವಾರ (ಗೇಟ್) ಇಲ್ಲದ ಕಾರಣ ನಾಯಿಗಳು ಸೇರಿದಂತೆ ಇತರ ಪ್ರಾಣಿಗಳು ಮುಕ್ತವಾಗಿ ಶಾಲಾ ಆವರಣ ಪ್ರವೇಶಿಸುತ್ತಿವೆ. ಇದರಿಂದ ಮೈದಾನದಲ್ಲಿ ಗಲೀಜು ಹೆಚ್ಚಾಗುತ್ತಿದ್ದು, ಪ್ರತಿದಿನ ಅಡುಗೆ ಸಹಾಯಕರು ಸ್ವಚ್ಛತೆಗೆ ಹೆಚ್ಚಿನ ಸಮಯ ಮೀಸಲಿಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.**

ಕಳೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಮಾಜ ವಿಜ್ಞಾನ ವಿಷಯದಲ್ಲೇ ಹೆಚ್ಚಿನ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದು, ಮರುಪರೀಕ್ಷೆಯಲ್ಲಿ ಬಹುತೇಕರು ಉತ್ತೀರ್ಣರಾಗಿದ್ದಾರೆ.

ಶಾಲೆಯ ಅಭಿವೃದ್ಧಿಗೆ ಶಿಕ್ಷಣ ಇಲಾಖೆ ಹಾಗೂ ಎಸ್‌ಡಿಎಂಸಿ ಹೆಚ್ಚಿನ ಗಮನಹರಿಸಿ, ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದು, ಶಾಲೆಗೆ ಗೇಟ್ ನಿರ್ಮಿಸುವುದು ಹಾಗೂ ಕಟ್ಟಡದ ಅಗತ್ಯ ನಿರ್ವಹಣಾ ಕಾಮಗಾರಿಗಳನ್ನು ಶೀಘ್ರ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ಕಾನೂನುಬದ್ಧ ವ್ಯಾಪಾರಿಗಳಿಗೆ ಸಂಕಷ್ಟ, ಸಂಚಾರಕ್ಕೂ ಅಡ್ಡಿ

### ತೊಕ್ಕೊಟ್ಟು ಫ್ಲೈಓವರ್ ಕೆಳಭಾಗದ ಅನಧಿಕೃತ ಮಾರುಕಟ್ಟೆ

**ತೊಕ್ಕೊಟ್ಟು:** ಕಾನೂನುಬದ್ಧವಾಗಿ ತೆರಿಗೆ ಪಾವತಿಸಿ ಅಂಗಡಿ ನಡೆಸುತ್ತಿರುವ ವ್ಯಾಪಾರಿಗಳು ಮಾತ್ರ ಅನಧಿಕೃತ ಮಾರುಕಟ್ಟೆಯಿಂದ ತಮ್ಮ ವ್ಯಾಪಾರಕ್ಕೆ ಹೊಡೆತ ಬಿದ್ದಿದೆ. ರಾಷ್ಟ್ರೀಯ ಹೆದ್ದಾರಿ 66ರ ತೊಕ್ಕೊಟ್ಟು ಫ್ಲೈ ಓವರ್ ಕೆಳಭಾಗದಲ್ಲಿ ಹಂತಹಂತವಾಗಿ ಬೆಳೆದಿರುವ ಅನಧಿ ಕೃತ ಮಾರುಕಟ್ಟೆ ಇದೀಗ ನಗರದ ಸೌಂದರ್ಯ, ಸಂಚಾರ ವ್ಯವಸ್ಥೆ ಹಾಗೂ ಸ್ವಚ್ಛತೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಒಂದು ಕಾಲದಲ್ಲಿ ಪಾದಚಾರಿಗಳು ರಸ್ತೆ ದಾಟಲು ಬಳಸುತ್ತಿದ್ದ ಜಾಗ ಇಂದು ಅಂಗಡಿ–ಮುಂಗಟ್ಟುಗಳಿಂದ ಆವೃತವಾಗಿದ್ದು, ಜನರು ನಡೆದಾಡುವುದಕ್ಕೂ ಪರದಾಡುವ ನಿರ್ಮಾಣವಾಗಿದೆ.

ಒಂದು ಕಾಲದಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಬಳಸುತ್ತಿದ್ದ ಜಾಗ ಇಂದು ಅನಧಿಕೃತ ಅಂಗಡಿ–ಮುಂಗಟ್ಟುಗಳಿಂದ ಆವೃತವಾಗಿದೆ. ಇದರಿಂದ ಸಾರ್ವಜನಿಕರು ನಡೆದಾಡುವುದಕ್ಕೂ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ವಾಹನ ಸಂಚಾರಕ್ಕೂ ಅಡಚಣೆ ಉಂಟಾಗುತ್ತಿದೆ.

ಇನ್ನೊಂದೆಡೆ, ಸರ್ಕಾರಕ್ಕೆ ನಿಯಮಿತವಾಗಿ ತೆರಿಗೆ ಪಾವತಿಸಿ ವ್ಯಾಪಾರ ನಡೆಸುತ್ತಿರುವ ಅಂಗಡಿ ಮಾಲೀಕರು ವ್ಯಾಪಾರದಲ್ಲಿ ನಷ್ಟ ಅನುಭವಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅನಧಿಕೃತವಾಗಿ ರಸ್ತೆ ಬದಿಯಲ್ಲಿ ವ್ಯಾಪಾರ ನಡೆಸುತ್ತಿರುವವರ ವಿರುದ್ಧ ಸಂಬಂಧಪಟ್ಟ ಇಲಾಖೆಗಳು ಕ್ರಮ ಕೈಗೊಂಡು ಸಾರ್ವಜನಿಕರಿಗೆ ಪಾದಚಾರಿ ಮಾರ್ಗವನ್ನು ಮುಕ್ತಗೊಳಿಸಬೇಕು ಹಾಗೂ ಕಾನೂನುಬದ್ಧ ವ್ಯಾಪಾರಿಗಳ ಹಿತವನ್ನು ಕಾಪಾಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. ಪದೇ ಪದೆ ತೆರವು ಕಾರ್ಯಾಚರಣೆ ನಡೆದರೂ ವ್ಯಾಪಾರ ಮತ್ತೆ ಆರಂಭವಾಗುತ್ತಿರುವುದರಿಂದ, ಕೆಲ ಸ್ಥಳೀಯ ಪ್ರಭಾವಿಗಳ ಬೆಂಬಲದಿಂದಲೇ ಇದು ಮುಂದುವರಿಯುತ್ತಿದೆ ಎಂಬ ಆರೋಪವನ್ನು ಸ್ಥಳೀಯರು ಮಾಡುತ್ತಿದ್ದಾರೆ.



**ವ್ಯಾಪಾರಿಗಳಿಗೆ ಹೊಡೆತ**

**ವ್ಯಾಪಾರಿಗಳಿಗೆ ಹೊಡೆತ ಎಂದು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಸಂಚಾರ, ಸ್ವಚ್ಛತೆ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಸಂಬಂಧಿ ಸಿದ ಇಲಾಖೆಗಳು ಸಮನ್ವಯದೊಂದಿಗೆ ಶಾಶ್ವತ ಕ್ರಮ ಕೈಗೊಳ್ಳಬೇಕೆಂಬುದು ಸಾರ್ವಜನಿಕರ ಆಗ್ರಹವಾಗಿದೆ.**

■ **ಒಂದು ಕಾಲದಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಬಳಸುತ್ತಿದ್ದ ಜಾಗ ಇಂದು ಅನಧಿಕೃತ ಅಂಗಡಿ– ಮುಂಗಟ್ಟುಗಳಿಂದ ಆವೃತವಾಗಿದೆ.**

ಆದರೆ ಈ ಆರೋಪಕ್ಕೆ ಅಧಿಕೃತ ದೃಢೀಕರಣ ಲಭ್ಯವಾಗಿಲ್ಲ.

**ಹಬ್ಬಗಳ ಸಾಲು ಸಮೀಪ**

ತೊಕ್ಕೊಟ್ಟಿನಲ್ಲಿ ವಾಹನ ದಟ್ಟಣೆ ಮತ್ತಷ್ಟು ಹೆಚ್ಚುವ ಆತಂಕ ಮುಂದಿನ ದಿನಗಳಲ್ಲಿ ಹಬ್ಬಗಳ ಸಾಲು ಆರಂಭವಾಗಲಿದ್ದು, ತೊಕ್ಕೊಟ್ಟು ಪ್ರದೇಶದಲ್ಲಿ ವಾಹನ ಸಂಚಾರ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಈಗಾಗಲೇ ರಾಷ್ಟ್ರೀಯ ಹೆದ್ದಾರಿ–66ರ ತೊಕ್ಕೊಟ್ಟು ಫ್ಲೈಓವರ್ ಕೆಳಭಾಗದಲ್ಲಿ ಅನಧಿಕೃತ ಮಾರುಕಟ್ಟೆಯಿಂದ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ, ಹಬ್ಬಗಳ ಸಂದರ್ಭದಲ್ಲಿ ವಾಹನ

↘ 5ನೇ ಪುಟಕ್ಕೆ

### ಮಂಜನಾಡಿ ದುರಂತ: ಗುಡ್ಡ ಕುಸಿದು ಮನೆ ಬೀಳಲು ಅಶ್ವಿನಿಯೇ ಕಾರಣವೇ?

# ಕೊಣಾಜೆ ಪೊಲೀಸರ ಹಿಂಬರಹದ ವಿರುದ್ಧ ತಾಯಿಯ ಕಾನೂನು ಸಮರ

**ಉಳ್ಳಾಲ:** ಮಂಜನಾಡಿಯಲ್ಲಿ ಸಂಭವಿಸಿದ ಭೀಕರ ಗುಡ್ಡ ಕುಸಿತದಲ್ಲಿ ಇಬ್ಬರು ಎಳೆಯ ಮಕ್ಕಳು ಹಾಗೂ ಅತ್ತೆಯನ್ನು ಕಳೆದುಕೊಂಡು, ತಾನೇ ಎರಡೂ ಕಾಲುಗಳನ್ನು ಕಳೆದುಕೊಂಡಿರುವ ಶ್ರೀಮತಿ ಅಶ್ವಿನಿ, ಕೊಣಾಜೆ ಪೊಲೀಸ್ ಠಾಣೆಯ ತನಿಖಾ ವರದಿ ಮತ್ತು ದಿನಾಂಕ 23–07–2026ರ ಹಿಂಬರಹದ ವಿರುದ್ಧ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

"ಮಂಜನಾಡಿ ದುರಂತಕ್ಕೆ ಗುಡ್ಡ ಕುಸಿತ ಮತ್ತು ಮಾನವ ಹಸ್ತಕ್ಷೇಪದ ನಿಜವಾದ ಕಾರಣಗಳನ್ನು ತನಿಖೆ ಮಾಡಬೇಕಾದ ಬದಲು, ತನಿಖೆಯ ದೋಷಗಳನ್ನೇ ಮುಚ್ಚಿಹಾಕುವ ರೀತಿಯಲ್ಲಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆಯೇ?" ಎಂಬ ಗಂಭೀರ ಪ್ರಶ್ನೆಯನ್ನು ಅಶ್ವಿನಿ ಎತ್ತಿದ್ದಾರೆ.

ಕೊಣಾಜೆ ಪೊಲೀಸ್ ಠಾಣೆಯ ಹಿಂಬರಹದಲ್ಲಿ ಮಂಜನಾಡಿ ಗ್ರಾ.ಪಂ., ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗ, ಎನ್‌ಐಟಿಕೆ ಸುರತ್ಕಲ್ ಹಾಗೂ ಜಲಸಂಪನ್ಮೂಲ ಇಲಾಖೆಯ ವರದಿಗಳನ್ನು ಉಲ್ಲೇಖಿಸಲಾಗಿದೆ. ಭೂಕುಸಿತವು ನೈಸರ್ಗಿಕ ಹಾಗೂ ಮಾನವಸೃಷ್ಟಿ ಅಂಶಗಳ ಸಂಯೋಜಿತ ಪರಿಣಾಮವಾಗಿರಬಹುದೆಂಬ ಅಂಶಗಳು ವರದಿಗಳಲ್ಲಿ ಕಂಡುಬರುತ್ತವೆ ಎಂದು ತಿಳಿಸಲಾಗಿದೆ.

ಆದರೆ, ಅಶ್ವಿನಿಯ ಪ್ರಶ್ನೆ ಸರಳವಾಗಿದೆ: ಮಾನವ ಹಸ್ತಕ್ಷೇಪದ ಸಾಧ್ಯತೆ ಇದ್ದರೆ, ಆ ಹಸ್ತಕ್ಷೇಪ ಮಾಡಿದವರು ಯಾರು?

ಸುಮಾರು 70 ಅಡಿ ಎತ್ತರದ ಗುಡ್ಡವನ್ನು ಕತ್ತರಿಸಿ ರಸ್ತೆ ನಿರ್ಮಿಸಲಾಗಿತ್ತೇ? ಮಣ್ಣು ತೆರವುಗೊಳಿಸಲಾಗಿತ್ತೇ? ಮಳೆನೀರು ಹರಿಯುವ ಸ್ವಾಭಾವಿಕ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿತ್ತೇ? ಈ ಕಾಮಗಾರಿಗಳನ್ನು ನಡೆಸಿದವರು ಯಾರು? ಗುತ್ತಿಗೆದಾರರು ಯಾರು? ಭೂಮಾಲೀಕರು ಯಾರು? ಯಂತ್ರೋಪಕರಣಗಳನ್ನು ಒದಗಿಸಿದವರು ಯಾರು? ಕಾಮಗಾರಿಗೆ ಅನುಮತಿ ಇತ್ತೇ? ವರ್ಕ್ ಆರ್ಡರ್, ಒಪ್ಪಂದ, ಬಿಲ್‌ಗಳು ಹಾಗೂ ಇತರ ದಾಖಲೆಗಳು ಎಲ್ಲಿವೆ? ಸಂಬಂಧಪಟ್ಟವರ ಹೇಳಿಕೆಗಳನ್ನು ದಾಖಲಿಸಲಾಗಿದೆಯೇ?

ಈ ಮೂಲಭೂತ ಪ್ರಶ್ನೆಗಳಿಗೆ ಉತ್ತರಿಸದೆ, "ವಿವಿಧ ಗುಂಪುಗಳು ರಸ್ತೆ ಕಾಮಗಾರಿ ನಡೆಸಿವೆ" ಎಂಬ ಸಾಮಾನ್ಯ ಹೇಳಿಕೆಯ ಆಧಾರದ ಮೇಲೆ ತನಿಖೆಯನ್ನು ಮುಕ್ತಾಯಗೊಳಿಸುವುದು ನಿಜವಾದ ತನಿಖೆಯೇ ಎಂಬ ಪ್ರಶ್ನೆಯನ್ನು ಅವರು ಮುಂದಿಟ್ಟಿದ್ದಾರೆ.



ಮಳೆ ಬಿದ್ದಿದೆ ಎಂಬ ಕಾರಣದಿಂದ ಮಾನವ ನಿರ್ಲಕ್ಷ್ಯವನ್ನು ಸಂಪೂರ್ಣವಾಗಿ ತಳ್ಳಿಹಾಕಲು ಸಾಧ್ಯವಿಲ್ಲ. ಮಳೆ ಒಂದು ನೈಸರ್ಗಿಕ ಕಾರಣವಾಗಿರಬಹುದು. ಆದರೆ, ಮಳೆಯ ಸಂದರ್ಭದಲ್ಲಿ ಗುಡ್ಡ ಕತ್ತರಿಸುವಿಕೆ, ರಸ್ತೆ ನಿರ್ಮಾಣ, ಮಳೆನೀರು ಹರಿವಿನ ಬದಲಾವಣೆ ಅಥವಾ ಅಸುರಕ್ಷಿತ ಕಾಮಗಾರಿ ಭೂಕುಸಿತದ ಅಪಾಯವನ್ನು ಹೆಚ್ಚಿಸಿತೇ? ಎಂಬ ಪ್ರಶ್ನೆಗೆ ವೈಜ್ಞಾನಿಕ ತನಿಖೆಯ ಮೂಲಕ ಉತ್ತರ ದೊರಕಬೇಕಾಗಿತ್ತು.

"ನನ್ನ ಇಬ್ಬರು ಮಕ್ಕಳು ಕೇವಲ ಸಂಖ್ಯೆಗಳಲ್ಲ. ಅವರು ಜೀವಂತ ವ್ಯಕ್ತಿಗಳಾಗಿದ್ದರು. ಅವರ ಸಾವಿನ ಹಿಂದೆ ಯಾವುದೇ ಮಾನವ ನಿರ್ಲಕ್ಷ್ಯ, ಅಸುರಕ್ಷಿತ ಕಾಮಗಾರಿ ಅಥವಾ ಕಾನೂನುಬಾಹಿರ ಹಸ್ತಕ್ಷೇಪ ಇದ್ದರೆ, ಆ ಸತ್ಯ ಹೊರಬರಬೇಕು" ಎಂದು ಅಶ್ವಿನಿ ತಮ್ಮ ಕಾನೂನು ನಿವೇದನೆಯಲ್ಲಿ ತಿಳಿಸಿದ್ದಾರೆ.

↘ 2ನೇ ಪುಟಕ್ಕೆ

# ಜಿಲ್ಲಾ ನೂತನ ಖಾಝಿಯಾಗಿ ಅಧಿಕಾರ ಸ್ವೀಕಾರ



**ಮಂಗಳೂರು:** ದ.ಕ.ಜಿಲ್ಲಾ ನೂತನ ಖಾಝಿಯಾಗಿ ಪಾಣಕ್ಕಾಡ್ ಸೈಯದ್ ನಾಸಿರ್ ಅಬ್ದುಲ್ ಹಯ್ಯಾ ಶಿಹಾಬುದ್ದೀನ್ ಬಾಅಲವಿ ನಗರದ ಬಂದರ್ ಅನ್ಸಾರಿ ರಸ್ತೆಯಲ್ಲಿರುವ ಝೀನತ್ ಬಕ್ಸ್ ಯತೀಂ ಖಾನಾ ಹಾಲ್‌ನಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಅಧಿಕಾರ ಸ್ವೀಕರಿಸಿದರು.

ಬಳಿಕ ಮಾತನಾಡಿದ ಅವರು, ಖಾಝಿ ಸ್ಥಾನದ ಜಬಾಬ್ದಾರಿ ವಹಿಸಿಕೊಳ್ಳುವಂತೆ ಮಂಗಳೂರಿನ ಪ್ರಮುಖರು ಕೇಳಿ ಕೊಂಡ ಬಳಿಕ ತಾನು ಸಮಸ್ತ ಅಧ್ಯಕ್ಷ ಜಿಫ್ರಿ ಮುತ್ತುಕೋಯ ತಂಬಳ್ ಬಳಿ ಸಮಾಲೋಚಿಸಿ ತಾವೇ ಈ ಹೊಣೆಗಾರಿಕೆ ವಹಿಸಿಕೊಳ್ಳಬೇಕು ಎಂದು ವಿನಂತಿಸಿದೆ. ಆದರೆ ಜಿಫ್ರಿ ತಂಙಳ್ ಅತ್ಯಂತ ಸಂತೋಷದಿಂದ ಸಮ್ಮತಿ ನೀಡಿ ತನ್ನಲ್ಲಿ ಜವಾಬ್ದಾರಿ ನಿರ್ವಹಿಸುವಂತೆ ಸೂಚಿಸಿದರು. ಅದರಂತೆ ಮತ್ತು ನಿಮ್ಮೆಲ್ಲರ ಅಪೇಕ್ಷೆಯಂತೆ ತಾನಿಂದು ಖಾಝಿಯ ಹೊಣೆಗಾರಿಕೆ ವಹಿಸಿಕೊಂಡಿರುವೆ. ಶಾಂತಿಯ ನೆಲೆ ಬೀಡಾದ ದ.ಕ. ಜಿಲ್ಲೆಯಲ್ಲಿ ನಾವೆಲ್ಲ ಸೌಹಾರ್ದದ ವಾತಾವರಣ ರೂಪಿಸೋಣ. ಪರಸ್ಪರ ಐಕ್ಯತೆ, ಸಹೋದರತೆಯಿಂದ ಮುನ್ನಡೆಯೋಣ ಎಂದರು.

> **ಪಾಣಕ್ಕಾಡ್ ಕುಟುಂಬದ ಸೈಯದ್ ನಾಸಿರ್ ಶಿಹಾಬುದ್ದೀನ್ ಬಾಅಲವಿ ದ.ಕ. ಜಿಲ್ಲೆಯ ಖಾಝಿಯಾಗಿ ಹೊಣೆಗಾರಿಕೆ ವಹಿಸಿಕೊಂಡಿರುವುದು ಸಂತೋಷದ ವಿಚಾರ.**
>
> ■ **ಡಾ.ಹಾಜಿ ಯೆನೆಪೋಯ ಅಬ್ದುಲ್ಲಾ ಕುಂಞಿ** ಅಧ್ಯಕ್ಷರು, ಮಸ್ಜಿದ್ ಝೀನತ್ ಬಕ್ಸ್ ಮತ್ತು ಈದ್ಗಾ ಜುಮಾ ಮಸ್ಜಿದ್

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಮಸ್ತ ವಿದ್ಯಾಭ್ಯಾಸ ಬೋರ್ಡ್ ಕೋಶಾಧಿಕಾರಿ, ಕೇರಳ ಮುಸ್ಲಿಂ ಲೀಗ್ ಅಧ್ಯಕ್ಷ, ಎಸ್‌ವೈಎಸ್ ಕೇಂದ್ರ ಸಮಿತಿಯ ಅಧ್ಯಕ್ಷ ಸೈಯದ್ ಸ್ವಾದಿಕ್ ಅಲಿ ಶಿಹಾಬ್ ತಂಬಳ್ ಮಂಗಳೂರು ತನ್ನದೇ ಆದ ಇಸ್ಲಾಮಿಕ್ ಚರಿತ್ರೆಯನ್ನು ಹೊಂದಿದೆ. ನಮ್ಮ ಹಿರಿಯರು ಧರ್ಮ ಪ್ರಚಾರಕ್ಕೆ ಇಲ್ಲಿಗೆ ಬಂದಾಗ ಇಲ್ಲಿನ ಸಹೋದರ ಧರ್ಮೀಯರು ಅತ್ಯಂತ ಆದರದಿಂದ ಸ್ವಾಗತಿಸಿದ್ದರು. ಅಂತಹ ಮಂಗಳೂರನ್ನು ಕೇಂದ್ರೀಕರಿಸಿಕೊಂಡು ದ.ಕ. ಜಿಲ್ಲೆಯ ಖಾಝಿಯಾಗಿ ಅಧಿಕಾರ ಸ್ವೀಕರಿಸಿರುವ ಸೈಯದ್ ನಾಸಿರ್ ಶಿಹಾಬುದ್ದೀನ್ ಬಾಅಲವಿ ಅವರಿಗೆ ಹೊಣೆಗಾರಿಕೆ ನಿರ್ವಹಿಸಲು ಅಲ್ಲಾಹನು ಅನುಗ್ರಹಿಸಲಿ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಮಸ್ತದ ಪ್ರಧಾನ ಕಾರ್ಯದರ್ಶಿ ಶೈಖುನಾ ಎಂ.ಟಿ. ಅಬ್ದುಲ್ಲಾ ಮುಸ್ಲಿಯಾರ್ ಮಾತನಾಡಿ ದ.ಕ. ಜಿಲ್ಲೆಯ ಖಾಝಿ ಸ್ವೀಕಾರಕ್ಕೆ ಸಂಬಂಧಿಸಿದಂತೆ ತಾನು ಸಮಸ್ತ ಅಧ್ಯಕ್ಷ ಜಿಫ್ರಿ ಮುತ್ತುಕೋಯ ತಂಙಳ್ ಜೊತೆ ಮಾತನಾಡಿದಾಗ ಅವರು ಸಂತಸ ವ್ಯಕ್ತಪಡಿಸಿದ್ದರು. ಆದಾಗ್ಯೂ ಕೆಲವು ಮಂದಿ ಅಪಸ್ವರ ಎತ್ತಿದ್ದಾರೆ. ಅದನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ. ದ.ಕ. ಜಿಲ್ಲೆಯಲ್ಲಿ ಸಮಸ್ತದ ಕಾರ್ಯಕರ್ತರು ಮತ್ತಷ್ಟು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬೇಕು. ಯಾವ ಕಾರಣಕ್ಕೂ ಭಿನ್ನತೆಗೆ ಅವಕಾಶ ಕಲ್ಪಿಸಬಾರದು ಎಂದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಮಸ್ತ

↘ 2ನೇ ಪುಟಕ್ಕೆ

### ಗರಿಷ್ಠ ಮೊತ್ತಕ್ಕೆ ಕಾಪಿಕಾಡಿನ ಸಾಯಿ ಪ್ರಸಾದ್ ಖರೀದಿ

# ಕಾಪಿಕಾಡು ಉಮಾಮಹೇಶ್ವರಿ ಕಬಡ್ಡಿ ಪ್ರತಿಭೆಗೆ ರಾಜ್ಯಮಟ್ಟದ ಮನ್ನಣೆ

**ಮಂಗಳೂರು:** ಕರ್ನಾಟಕ ಕಬಡ್ಡಿ ಪ್ರೀಮಿಯರ್ ಲೀಗ್ (ಕೆಕೆಪಿಎಲ್) ಚೊಚ್ಚಲ ಆವೃತ್ತಿಯ ಆಟಗಾರರ ಹರಾಜಿನಲ್ಲಿ ಮಂಗಳೂರಿನ ಕಾಪಿಕಾಡು ಉಮಾಮಹೇಶ್ವರಿ ಕಬಡ್ಡಿ ಅಕಾಡೆಮಿಯ ಪ್ರತಿಭೆ, ಗೋಪಿನಾಥ್ ಕಾಪಿಕಾಡ್ ಅವರ ಪುತ್ರ ಸಾಯಿ ಪ್ರಸಾದ್ ಗರಿಷ್ಠ ಮೊತ್ತಕ್ಕೆ ಬಿಕರಿಯಾಗುವ ಮೂಲಕ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಕಾಪಿಕಾಡಿನ ಗರಡಿಯಲ್ಲಿ ಪಳಗಿದ ಸಾಯಿ ಪ್ರಸಾದ್ ಅವರನ್ನು ಉತ್ತರ ಕನ್ನಡ ಸ್ಟಾಲಿಯನ್ಸ್ ತಂಡ ರೂ.3.60 ಲಕ್ಷಕ್ಕೆ ಖರೀದಿಸಿದ್ದು, ಲೀಗ್‌ನ ಚೊಚ್ಚಲ ಆವೃತ್ತಿಯಲ್ಲಿ ಆಟಗಾರನೊಬ್ಬ ಪಡೆದ ಅತ್ಯಧಿಕ ಮೊತ್ತ ಎಂಬ ದಾಖಲೆಯೂ ಅವರ ಹೆಸರಿಗೆ ಸೇರಿದೆ.

**ಉತ್ತರ ಕನ್ನಡ ಸ್ಟಾಲಿಯನ್ಸ್ ತಂಡ ರೂ.3.60 ಲಕ್ಷಕ್ಕೆ ಖರೀದಿ**

ನಗರದ ಕೋರಮಂಗಲ ಕ್ಲಬ್‌ನಲ್ಲಿ ನಡೆದ ಹರಾಜಿನಲ್ಲಿ ಎಂಟು ಫ್ರಾಂಚೈಸಿಗಳು ಭಾಗವಹಿಸಿದ್ದವು. ಸಾಯಿ ಪ್ರಸಾದ್ ಅವರನ್ನು ತಮ್ಮ ತಂಡಕ್ಕೆ ಸೇರಿಸಿಕೊಳ್ಳಲು ಬಹುತೇಕ ಎಲ್ಲಾ ಫ್ರಾಂಚೈಸಿಗಳು ಪೈಪೋಟಿ ನಡೆಸಿದರೂ, ಅಂತಿಮವಾಗಿ ಉತ್ತರ ಕನ್ನಡ ಸ್ಟಾಲಿಯನ್ಸ್ ತಂಡವೇ ಗರಿಷ್ಠ ಮೊತ್ತ ನೀಡಿ ತನ್ನ ತೆಕ್ಕೆಗೆ ಸೇರಿಸಿಕೊಂಡಿತು.





ಇದೇ ಹರಾಜಿನಲ್ಲಿ ಗಗನ್ ಗೌಡ ರೂ.3.20 ಲಕ್ಷಕ್ಕೆ ಹೊಯ್ಸಳ ಎಂಪೈರ್ ತಂಡಕ್ಕೆ ಬಿಕರಿಯಾಗುವ ಮೂಲಕ ಎರಡನೇ ಅತಿ ಹೆಚ್ಚು ಮೊತ್ತ ಪಡೆದ ಆಟಗಾರರಾದರು. ಸುಶೀಲ್ ಕಾಂಬ್ರೇಕರ್ (ರೂ.2.90 ಲಕ್ಷ), ವಿಶ್ವಾಸ್ ಎಸ್. (ರೂ.2.60 ಲಕ್ಷ), ವಿನೋದ್ ನಾಯಕ್ (ರೂ.2.20 ಲಕ್ಷ) ಸೇರಿದಂತೆ ಹಲವು ಆಟಗಾರರು ಉತ್ತಮ ಮೊತ್ತಕ್ಕೆ ವಿವಿಧ ಫ್ರಾಂಚೈಸಿಗಳ ಪಾಲಾದರು. ಐಪಿಎಲ್ ಹಾಗೂ ಪ್ರೊ ಕಬಡ್ಡಿ ಲೀಗ್ ಮಾದರಿಯಲ್ಲಿ ನಡೆದ ಈ ಹರಾಜಿನಲ್ಲಿ ಪ್ರತಿ ಫ್ರಾಂಚೈಸಿಗೆ ರೂ.10 ಲಕ್ಷ ಮಿತಿ ನಿಗದಿಪಡಿಸಲಾಗಿದ್ದು, ಗರಿಷ್ಠ 14 ಆಟಗಾರರನ್ನು ಖರೀದಿಸಿ ತಂಡಗಳನ್ನು ಕಟ್ಟಿಕೊಳ್ಳಲಾಯಿತು. ಗ್ರಾಮೀಣ ಭಾಗದ ಪ್ರತಿಭಾವಂತ ಕಬಡ್ಡಿ ಆಟಗಾರರಿಗೆ ರಾಜ್ಯಮಟ್ಟದ ವೇದಿಕೆ ಕಲ್ಪಿಸುವ ಉದ್ದೇಶದಿಂದ ಕರ್ನಾಟಕ ಅಮೆಚೂರ್ ಕಬಡ್ಡಿ ಸಂಸ್ಥೆ ಹಾಗೂ 5N Sports Pvt. Ltd. ಸಹಯೋಗದಲ್ಲಿ ಈ ಲೀಗ್ ಆಯೋಜಿಸಲಾಗುತ್ತಿದೆ.

www.ullalavani.com
ullalavani@gmail.com
ಉಳ್ಳಾಲ ವಾಣಿ

## ಸಂಪಾದಕೀಯ

# ಯುವ ಜನ ಆಯೋಗ ಯಾಕೆ ಬೇಕು?

ದೇಶದ ಅಭಿವೃದ್ಧಿ, ಸಮಾಜದ ಪ್ರಗತಿ ಹಾಗೂ ಸುಭದ್ರ ಭವಿಷ್ಯದ ಅಡಿಪಾಯ ಯುವಜನರೇ ಆಗಿದ್ದಾರೆ. ಇಂದಿನ ಯುವಜನರ ಕನಸು, ಸಾಮರ್ಥ್ಯ ಮತ್ತು ಪರಿಶ್ರಮವೇ ನಾಳಿನ ಭಾರತದ ಶಕ್ತಿಯಾಗಿದೆ. ಆದ್ದರಿಂದ ಯುವಜನರ ಸಮಸ್ಯೆಗಳು, ಆಶಯಗಳು, ಹಕ್ಕುಗಳು ಮತ್ತು ಭವಿಷ್ಯದ ಬಗ್ಗೆ ಸರ್ಕಾರ ವಿಶೇಷ ಗಮನ ಹರಿಸುವುದು ಅತ್ಯಗತ್ಯ. ಈ ಉದ್ದೇಶವನ್ನು ಸಾಕಾರಗೊಳಿಸಲು ಸ್ವತಂತ್ರ ಯುವ ಜನ ಆಯೋಗ ಸ್ಥಾಪನೆಯ ಅಗತ್ಯತೆ ಇಂದು ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಇಂದಿನ ಯುವಜನರು ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ನಿರುದ್ಯೋಗ, ಗುಣಮಟ್ಟದ ಶಿಕ್ಷಣದ ಕೊರತೆ, ಕೌಶಲ್ಯಾಭಿವೃದ್ಧಿಗೆ ಅವಕಾಶಗಳ ಅಭಾವ, ಮಾದಕ ವ್ಯಸನ, ಸೈಬರ್ ಅಪರಾಧ, ಸಾಮಾಜಿಕ ಜಾಲತಾಣಗಳ ದುಷ್ಪರಿಣಾಮ, ಮಾನಸಿಕ ಒತ್ತಡ, ಆತ್ಮಹತ್ಯೆಗಳ ಹೆಚ್ಚಳ, ಭ್ರಷ್ಟಾಚಾರ, ರಾಜಕೀಯ ದುರುಪಯೋಗ, ಪರಿಸರ ಸವಾಲುಗಳು ಹಾಗೂ ಆರ್ಥಿಕ ಅಸ್ಥಿರತೆ ಇವುಗಳೆಲ್ಲ ಯುವಜನರ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಇಂತಹ ಸಮಸ್ಯೆಗಳನ್ನು ಪರಿಹರಿಸಲು ಸಮಗ್ರ ಮತ್ತು ಶಾಶ್ವತ ನೀತಿಗಳ ಅಗತ್ಯವಿದೆ.

ಪ್ರಸ್ತುತ ದೇಶದಲ್ಲಿ ಮಹಿಳಾ ಆಯೋಗ, ಮಕ್ಕಳ ಹಕ್ಕುಗಳ ಆಯೋಗ, ಮಾನವ ಹಕ್ಕುಗಳ ಆಯೋಗ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗ ಸೇರಿದಂತೆ ವಿವಿಧ ಆಯೋಗಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ದೇಶದ ಅತಿದೊಡ್ಡ ಜನಸಂಖ್ಯೆಯನ್ನು ಹೊಂದಿರುವ ಯುವಜನರ ಸಮಸ್ಯೆಗಳ ಬಗ್ಗೆ ಮಾತ್ರ ಸಮಗ್ರವಾಗಿ ಗಮನ ಹರಿಸುವ ಸ್ವತಂತ್ರ ಆಯೋಗ ಇಲ್ಲದಿರುವುದು ವಿಷಾದನೀಯ ಸಂಗತಿಯಾಗಿದೆ.

**ಯುವ ಜನ ಆಯೋಗದ ಪ್ರಮುಖ ಉದ್ದೇಶಗಳು:**

ಯುವಜನರ ಸಮಸ್ಯೆಗಳ ಕುರಿತು ಅಧ್ಯಯನ ನಡೆಸಿ ಸರ್ಕಾರಕ್ಕೆ ಶಿಫಾರಸು ಸಲ್ಲಿಸುವುದು.

ಉದ್ಯೋಗ ಸೃಷ್ಟಿ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಬಲಪಡಿಸುವುದು.

ಗುಣಮಟ್ಟದ ಹಾಗೂ ಸಮಾನ ಶಿಕ್ಷಣಕ್ಕೆ ನೀತಿಗಳನ್ನು ರೂಪಿಸಲು ಸಲಹೆ ನೀಡುವುದು.

ಮಾನಸಿಕ ಆರೋಗ್ಯ, ವ್ಯಸನಮುಕ್ತಿ ಮತ್ತು ಆತ್ಮಹತ್ಯೆ ತಡೆಗೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸುವುದು.

ಕ್ರೀಡೆ, ಸಂಶೋಧನೆ, ಸ್ಟಾರ್ಟ್‌ಅಪ್, ಉದ್ಯಮಶೀಲತೆ ಹಾಗೂ ನವೋದ್ಯಮಗಳಿಗೆ ಉತ್ತೇಜನ ನೀಡುವುದು.

ಗ್ರಾಮೀಣ ಮತ್ತು ನಗರ ಯುವಜನರ ನಡುವೆ ಇರುವ ಅಸಮಾನತೆಯನ್ನು ಕಡಿಮೆ ಮಾಡಲು ಕ್ರಮಗಳನ್ನು ಸೂಚಿಸುವುದು.

ಯುವಜನರ ಅಭಿಪ್ರಾಯಗಳನ್ನು ಸರ್ಕಾರದ ಗಮನಕ್ಕೆ ತಂದು, ಅವರ ಧ್ವನಿಯಾಗಿ ಕಾರ್ಯನಿರ್ವಹಿಸುವುದು.

ಭ್ರಷ್ಟಾಚಾರ, ಹಿಂಸಾಚಾರ ಹಾಗೂ ಸಮಾಜ ವಿರೋಧಿ ಚಟುವಟಿಕೆಗಳಿಂದ ಯುವಜನರನ್ನು ರಕ್ಷಿಸುವ ಮಾರ್ಗಸೂಚಿಗಳನ್ನು ರೂಪಿಸುವುದು.

ಪರಿಸರ ಸಂರಕ್ಷಣೆ, ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಯುವಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು.

ಇಂದು ಭಾರತ ವಿಶ್ವದಲ್ಲೇ ಅತಿ ಹೆಚ್ಚು ಯುವಜನಸಂಖ್ಯೆ ಹೊಂದಿರುವ ರಾಷ್ಟ್ರಗಳಲ್ಲಿ ಒಂದಾಗಿದೆ. ಈ ಜನಸಂಖ್ಯೆ ದೇಶಕ್ಕೆ ದೊಡ್ಡ ಶಕ್ತಿಯಾಗಬೇಕಾದರೆ, ಅವರಿಗೆ ಸರಿಯಾದ ಮಾರ್ಗದರ್ಶನ, ಅವಕಾಶಗಳು ಮತ್ತು ಭದ್ರತೆ ಒದಗಿಸಬೇಕು. ಇಲ್ಲವಾದರೆ ಇದೇ ಶಕ್ತಿ ನಿರಾಶೆ, ನಿರುದ್ಯೋಗ ಮತ್ತು ಸಾಮಾಜಿಕ ಸಮಸ್ಯೆಗಳತ್ತ ತಿರುಗುವ ಅಪಾಯವೂ ಇದೆ.

ಯುವಜನರು ಕೇವಲ ಮತದಾರರು ಅಥವಾ ಉದ್ಯೋಗಾಕಾಂಕ್ಷಿಗಳು ಮಾತ್ರವಲ್ಲ; ಅವರು ದೇಶದ ನಿರ್ಮಾತೃಗಳು, ನವೋದ್ಯಮಿಗಳು, ವಿಜ್ಞಾನಿಗಳು, ಕ್ರೀಡಾಪಟುಗಳು, ಕೃಷಿಕರು, ಉದ್ಯಮಿಗಳು ಹಾಗೂ ಭವಿಷ್ಯದ ನಾಯಕರು. ಅವರ ಸಮಸ್ಯೆಗಳಿಗೆ ಸ್ಪಂದಿಸುವ, ಅವರ ಅಭಿಪ್ರಾಯಗಳನ್ನು ಆಲಿಸುವ ಮತ್ತು ಅವರ ಅಭಿವೃದ್ಧಿಗೆ ಮಾರ್ಗದರ್ಶನ ನೀಡುವ ವ್ಯವಸ್ಥೆ ಸರ್ಕಾರದ ಮಟ್ಟದಲ್ಲಿ ಇರಬೇಕು.

ದೇಶ ಅಂದರೆ ಕೇವಲ ಭೂಭಾಗವಲ್ಲ; ದೇಶ ಅಂದರೆ ಅದರ ಜನರು. ಆ ಜನರಲ್ಲಿ ಅತಿ ದೊಡ್ಡ ಶಕ್ತಿ ಯುವಜನರು. ಯುವಜನರನ್ನು ಬಲಪಡಿಸಿದರೆ ಕುಟುಂಬ ಬಲವಾಗುತ್ತದೆ, ಸಮಾಜ ಬಲವಾಗುತ್ತದೆ, ಆರ್ಥಿಕತೆ ಬಲವಾಗುತ್ತದೆ ಮತ್ತು ದೇಶ ವಿಶ್ವದ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮುತ್ತದೆ.

ಆದ್ದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಕ್ಷಣ ಸ್ವತಂತ್ರ ಯುವ ಜನ ಆಯೋಗವನ್ನು ಸ್ಥಾಪಿಸಿ, ಯುವಜನರ ಶಿಕ್ಷಣ, ಉದ್ಯೋಗ, ಆರೋಗ್ಯ, ಮಾನಸಿಕ ನೆಮ್ಮದಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಯುವಜನರ ಭವಿಷ್ಯವನ್ನು ರಕ್ಷಿಸುವುದೇ ದೇಶದ ಭವಿಷ್ಯವನ್ನು ರಕ್ಷಿಸುವುದು.

**ಸಂಪಾದಕ**

## ಅಪಾಯಕಾರಿ ನಾಟೆಕಲ್ ತಿರುವು



**ನಾಟೆಕಲ್ ತಿರುವು ಅಪಾಯಕಾರಿಯಾಘಿ ಪರಿಣಮಿಸಿದ್ದು, ತಿಂಗಳೊಂದರ ಅವಧಿಯಲ್ಲಿ ಎರಡು ಅಪಘಾತಗಳು ಸಂಭವಿಸಿ ಒಂದು ಸಾವು ಸಂಭವಿಸಿದೆ. ವಾಹನಗಳು ಅಮಿತ ವೇಗದಲ್ಲಿ ಬರುವುದರಿಂದ ತಿರುವು ಪ್ರದೇಶದಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಸುರಕ್ಷತಾ ಕ್ರಮಗಳನ್ನು ಈ ಭಾಗದಲ್ಲಿ ಅಳವಡಿಸಬೇಕೆಂಬ ಆಗ್ರಹ ಸಾರ್ವಜನಿಕ ವಲಯದಿಂದ ಕೇಳಿಬಂದಿದೆ.**

# ಸಚಿವ ಯು.ಟಿ.ಖಾದರ್‌ಗೆ AMEC ಗ್ಲೋಬಲ್ ಸಿಟಿಝನ್ ಲೀಡರ್ಶಿಪ್ ಪ್ರಶಸ್ತಿ; ಜು.25ರಂದು ಅಮೆರಿಕದ ಚಿಕಾಗೋದಲ್ಲಿ ಪ್ರದಾನ



**ಬೆಂಗಳೂರು:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರಿಗೆ ಅಮೆರಿಕದ ಇಲಿನಾಯ್ಸ್ ರಾಜ್ಯದ ನೇಪರ್ವಿಲ್ಲೆಯ ಯೆಲ್ಲೋ ಬಾಕ್ಸ್ ಸಭಾಂಗಣದಲ್ಲಿ ಜು. 25ರಂದು ಅಮೆರಿಕನ್ ಮಲ್ಟಿ ಎಥ್ನಿಕ್ ಕಮಿಷನ್ (AMEC)ಯ 15ನೇ ವಾರ್ಷಿಕ ಕಾಂಗ್ರೆಷನಲ್ ಗ್ಲೋಬಲ್ ಚಾಂಪಿಯನ್ಸ್ ಗಾಲಾ ಕಾರ್ಯಕ್ರಮದಲ್ಲಿ ಪ್ರತಿಷ್ಠಿತ ಗ್ಲೋಬಲ್ ಸಿಟಿಝನ್ ಲೀಡರ್ಶಿಪ್ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.

ಸಾರ್ವಜನಿಕ ಸೇವೆಯಲ್ಲಿ ಹಲವು ದಶಕಗಳಿಂದ ಸಲ್ಲಿಸಿರುವ ಸೇವೆ, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿನ ನಾಯಕತ್ವ, ಸಮಗ್ರ ಆಡಳಿತ ಹಾಗೂ ಸಮುದಾಯ–ಕೇಂದ್ರಿತ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಯು.ಟಿ. ಖಾದರ್ ಅವರನ್ನು AMEC ಗ್ಲೋಬಲ್ ಸಿಟಿಝನ್ ಲೀಡರ್ಶಿಪ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು AMEC ಸಂಸ್ಥಾಪಕ ಅಧ್ಯಕ್ಷ ಹಾಗೂ ಜಾಗತಿಕ ಕಾರ್ಯತಂತ್ರದ ಒಕ್ಕೂಟದ ಅಧ್ಯಕ್ಷ ಡಾ. ವಿಜಯ್ ಜಿ. ಪ್ರಭಾಕರ್ ತಿಳಿಸಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸುವುದರ ಜೊತೆ–ಗೆ ಆರೋಗ್ಯ, ಪೌಷ್ಟಿಕಾಂಶ, ಆಹಾರ ವಿಜ್ಞಾನ ಹಾಗೂ ವೈದ್ಯಕೀಯ ಸಂಶೋಧನಾ ಕ್ಷೇತ್ರಗಳಲ್ಲಿ ಭಾರತ ಅಮೆರಿಕ ಸಹಕಾರ ಬಲಪಡಿಸುವ ಉದ್ದೇಶದಿಂದ ಖಾದರ್ ಅಮೆರಿಕದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಜುಲೈ 24ರಂದು ಚಿಕಾಗೋದಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಕಚೇರಿಯಲ್ಲಿ ನಡೆಯಲಿರುವ 'ಆರೋಗ್ಯಕರ, ಸುಸ್ಥಿರ ಹಾಗೂ ಆಹಾರ ಸುರಕ್ಷಿತ ಭವಿಷ್ಯಕ್ಕಾಗಿ ಭಾರತ ಅಮೆರಿಕ ರಾಗಿ ಪಾಲುದಾರಿಕೆ' ವಿಷಯದ ದುಂಡುಮೇಜಿನ ಸಭೆಯಲ್ಲಿ ಅವರು ಮುಖ್ಯ ಭಾಷಣ ಮಾಡಲಿದ್ದಾರೆ.ಅದೇ ದಿನ ಚಿಕಾಗೋದ ಮಾಲ್ಕಮ್ ಎಕ್ಸ್ ಕಾಲೇಜಿಗೆ ಅಧ್ಯಯನ ಭೇಟಿ ನೀಡಲಿರುವ ಸಚಿವರು, ಬಳಿಕ ಇಲಿನಾಯ್ಸ್ ಚಿಕಾಗೋ ವಿಶ್ವವಿದ್ಯಾಲಯ (UIC), ರಶ್ ಯೂನಿವರ್ಸಿಟಿ ಸಿಸ್ಟಮ್ ಫಾರ್ ಹೆಲ್ತ್ ಹಾಗೂ ಇಲಿನಾಯ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (IIT Chicago) ಸೇರಿದಂತೆ ವಿವಿಧ ಸಂಸ್ಥೆಗಳ ಆರೋಗ್ಯ ಕ್ಷೇತ್ರದ ತಜ್ಞರು ಮತ್ತು ಪ್ರಾಧ್ಯಾಪಕರೊಂದಿಗೆ ಆರೋಗ್ಯ ಸೇವೆಯಲ್ಲಿನ ನಾವೀನ್ಯತೆ, ಡಿಜಿಟಲ್ ಮೆಡಿಸಿನ್, ಆರೋಗ್ಯ ಕ್ಷೇತ್ರದ ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಸುಧಾರಿತ ವೈದ್ಯಕೀಯ ತಂತ್ರಜ್ಞಾನ ಕುರಿತ ಸಹಕಾರದ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಜುಲೈ 27ರಂದು ಇಂಡಿಯಾನಾದ ವೆಸ್ಟ್ ಲಫಯೆಟ್ಟೆಯ ಪರ್ಡ್ಯೂ ವಿಶ್ವವಿದ್ಯಾಲಯದಲ್ಲಿ 'ಆರೋಗ್ಯಕರ ಮಕ್ಕಳು, ಆರೋಗ್ಯಕರ ಆಹಾರ ಮತ್ತು ಆರೋಗ್ಯಕರ ಭವಿಷ್ಯ' ವಿಷಯದ ಜಾಗತಿಕ ಕಾರ್ಯತಂತ್ರದ ಒಕ್ಕೂಟ (GSA) ಸಂವಾದದಲ್ಲಿ ಭಾಗವಹಿಸಲಿದ್ದಾರೆ. ಬಳಿಕ ವಾಷಿಂಗ್ಟನ್ ಡಿಸಿಗೆ ತೆರಳಿ ರಾಷ್ಟ್ರೀಯ ನಾಯಕರು ಹಾಗೂ ವಿವಿಧ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಲಿದ್ದು, ಜುಲೈ 30ರಂದು ಬೆಂಗಳೂರಿಗೆ ಮರಳಲಿದ್ದಾರೆ. ಈ ಪ್ರವಾಸವು ಸಾರ್ವಜನಿಕ ಆರೋಗ್ಯ, ವೈದ್ಯಕೀಯ ಶಿಕ್ಷಣ, ಕೃಷಿ ವಿಜ್ಞಾನ ಹಾಗೂ ಸಂಶೋಧನಾ ಕ್ಷೇತ್ರಗಳಲ್ಲಿ ಭಾರತ–ಅಮೆರಿಕ ಸಹಕಾರವನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ.2009ರಲ್ಲಿ ಸ್ಥಾಪನೆಯಾದ ಚಿಕಾಗೋ ಮೂಲದ ಲಾಭರಹಿತ ಸಂಸ್ಥೆಯಾದ ಂಒಇಅ ನಾಯಕತ್ವ, ಸಾರ್ವಜನಿಕ ಭಾಗವಹಿಸುವಿಕೆಗೆ ಉತ್ತೇಜನ, ಅಂತರರಾಷ್ಟ್ರೀಯ ಸಹಕಾರ ಹಾಗೂ ವಿವಿಧ ಸಂಸ್ಕೃತಿಗಳ ನಡುವೆ ಪರಸ್ಪರ ತಿಳಿವಳಿಕೆಯನ್ನು ಬೆಳೆಸುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿದೆ. ಅದರ ವಾರ್ಷಿಕ ಕಾಂಗ್ರೆಷನಲ್ ಗ್ಲೋಬಲ್ ಚಾಂಪಿಯನ್ಸ್ ಗಾಲಾ ಕಾರ್ಯಕ್ರಮದಲ್ಲಿ ಸರ್ಕಾರ, ಉದ್ಯಮ, ಶಿಕ್ಷಣ, ಆರೋಗ್ಯ, ಮಾಧ್ಯಮ ಹಾಗೂ ಸಮಾಜ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಕೊಡುಗೆ ನೀಡಿದ ಜಾಗತಿಕ ನಾಯಕರನ್ನು ಗುರುತಿಸಿ ಗೌರವಿಸಲಾಗುತ್ತದೆ.

# ಸೈಬರ್ ಅಪರಾಧದ ವಿರುದ್ಧ ಜಾಗೃತಿ ಮೂಡಿಸುವ 'ಅಚ್ಯುತ ಅವತಾರಂ' ಭಾವನಾತ್ಮಕ ಥ್ರಿಲ್ಲರ್‌ಗೆ ಪ್ರೇಕ್ಷಕರ ಮೆಚ್ಚುಗೆ




**ಮಂಗಳೂರು:** ಐದು ಭಾಷೆಗಳಲ್ಲಿ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆಯಾಗಿರುವ 'ಅಚ್ಯುತ ಅವತಾರಂ' ಚಿತ್ರವು ಮನರಂಜನೆಯೊಂದಿಗೆ ಸಮಾಜಕ್ಕೆ ಅಗತ್ಯವಾದ ಸೈಬರ್ ಜಾಗೃತಿಯ ಸಂದೇಶವನ್ನು ಪರಿಣಾಮಕಾರಿಯಾಗಿ ತಲುಪಿಸುವಲ್ಲಿ ಯಶಸ್ವಿಯಾಗಿದೆ.

ನಿರ್ದೇಶಕ ಪುನೀತ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರವು ಸೈಬರ್ ಅಪರಾಧವನ್ನು ಕೇವಲ ಕ್ರೈಂ ಕಥೆಯಾಗಿ ತೋರಿಸದೆ, ಅದರ ಹಿಂದೆ ಅಡಗಿರುವ ಮಾನವೀಯ ನೋವು, ಕುಟುಂಬದ ಬಾಂಧವ್ಯ ಮತ್ತು ನ್ಯಾಯಕ್ಕಾಗಿ ನಡೆಯುವ ಹೋರಾಟವನ್ನು ಭಾವನಾತ್ಮಕವಾಗಿ ತೆರೆಗೆ ತಂದಿದೆ.

ಚಿತ್ರದ ಕಥೆಯಲ್ಲಿ ಸಂಪ್ರದಾಯಬದ್ಧ ಕುಟುಂಬದಲ್ಲಿ ಬೆಳೆದ ಯುವತಿಯೊಬ್ಬಳು ಸೈಬರ್ ವಂಚನೆಯಿಂದ ತನ್ನ ಆತ್ಮೀಯ ವ್ಯಕ್ತಿಯನ್ನು ಕಳೆದುಕೊಳ್ಳುತ್ತಾಳೆ. ಆ ಬಳಿಕ ಆಕೆ ಕುಗ್ಗದೆ ಸೈಬರ್ ಅಪರಾಧಿಗಳ ವಿರುದ್ಧ ಹೋರಾಟ ನಡೆಸುವ ಕಥೆಯನ್ನು ಸಸ್ಪೆನ್ಸ್ ಹಾಗೂ ಭಾವನಾತ್ಮಕ ಅಂಶಗಳೊಂದಿಗೆ ಕಟ್ಟಿಕೊಡಲಾಗಿದೆ. ಆಧುನಿಕ ತಂತ್ರಜ್ಞಾನ, ಭಾರತೀಯ ಸಂಸ್ಕೃತಿ, ಕುಟುಂಬ ಮೌಲ್ಯಗಳು ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಸಮತೋಲನದಿಂದ ಬೆಸೆದಿರುವುದು ಚಿತ್ರದ ಪ್ರಮುಖ ವಿಶೇಷತೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಆನ್‌ಲೈನ್ ವಂಚನೆಗಳು, ಡಿಜಿಟಲ್ ಮೋಸಗಳು ಹಾಗೂ ಸೈಬರ್ ಅಪರಾಧಗಳ ಬಗ್ಗೆ ಪ್ರೇಕ್ಷಕರಲ್ಲಿ ಎಚ್ಚರಿಕೆಯ ಮನೋಭಾವವನ್ನು ಮೂಡಿಸುವಲ್ಲಿ ಚಿತ್ರ ಯಶಸ್ವಿಯಾಗಿದೆ. ವಿಶೇಷವಾಗಿ ಯುವಜನತೆ ಮತ್ತು ಕುಟುಂಬ ಸಮೇತರಾಗಿ ವೀಕ್ಷಿಸಬಹುದಾದ ಸಂದೇಶಾತ್ಮಕ ಚಿತ್ರವಾಗಿ ಇದು ಗಮನ ಸೆಳೆಯುತ್ತಿದೆ.

'ಕಾಂತಾರ' ಚಿತ್ರದ ಮೂಲಕ ಜನಪ್ರಿಯರಾದ ತುಳುನಾಡಿನ ಚಂದ್ರಕಲಾ ಮೇಡಂ ಅವರ ಅಭಿನಯ ಗಮನಾರ್ಹವಾಗಿದ್ದು, ಹಿರಿಯ ನಟ ಅವಿನಾಶ್ ತಮ್ಮ ಅನುಭವಸಂಪನ್ನ ಅಭಿನಯದ ಮೂಲಕ ಚಿತ್ರದ ಭಾವನಾತ್ಮಕ ಕ್ಷಣಗಳಿಗೆ ಮತ್ತಷ್ಟು ಬಲ ತುಂಬಿದ್ದಾರೆ. ಇತರ ಕಲಾವಿದರೂ ತಮ್ಮ ಪಾತ್ರಗಳಿಗೆ ಸಮರ್ಪಕ ನ್ಯಾಯ ಒದಗಿಸಿದ್ದಾರೆ.

ಚಿತ್ರದ ಹಿನ್ನೆಲೆ ಸಂಗೀತ, ಛಾಯಾಗ್ರಹಣ ಹಾಗೂ ತಾಂತ್ರಿಕ ನಿರ್ವಹಣೆ ಕಥೆಯ ಗಂಭೀರತೆಯನ್ನು ಪರಿಣಾಮಕಾರಿಯಾಗಿ ಬೆಂಬಲಿಸಿದ್ದು, ಪ್ರೇಕ್ಷಕರನ್ನು ಚಿತ್ರದೊಂದಿಗೆ ಭಾವನಾತ್ಮಕವಾಗಿ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದೆ.

ಕೆವಿಎನ್ (KVN) ಸಂಸ್ಥೆಯ ವಿತರಣೆಯಲ್ಲಿ ದೇಶದಾದ್ಯಂತ ಹಾಗೂ ವಿದೇಶಗಳಲ್ಲಿಯೂ ಬಿಡುಗಡೆಯಾಗಿರುವ 'ಅಚ್ಯುತ ಅವತಾರಂ' ಚಿತ್ರವು ಸೈಬರ್ ಅಪರಾಧದ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಉತ್ತಮ ಸಂದೇಶ ಸಾರುವ ಭಾವನಾತ್ಮಕ ಥ್ರಿಲ್ಲರ್ ಎಂಬ ಮೆಚ್ಚುಗೆಯನ್ನು ಗಳಿಸಿದೆ.

ಒಟ್ಟಾರೆ: ಮನರಂಜನೆ, ಭಾವನೆ, ಸಸ್ಪೆನ್ಸ್ ಮತ್ತು ಸಮಾಜಮುಖಿ ಸಂದೇಶವನ್ನು ಒಂದೇ ಕಥೆಯಲ್ಲಿ ಸಮರ್ಥವಾಗಿ ಕಟ್ಟಿಕೊಟ್ಟಿರುವ 'ಅಚ್ಯುತ ಅವತಾರಂ' ಚಿತ್ರವು ಕುಟುಂಬ ಸಮೇತ ವೀಕ್ಷಿಸಬಹುದಾದ ಉತ್ತಮ ಪ್ಯಾನ್ ಇಂಡಿಯಾ ಚಿತ್ರವಾಗಿ ಹೊರಹೊಮ್ಮಿದೆ.

# ಪಾವೂರು ಗ್ರಾಮಕ್ಕೆ ಸರಕಾರಿ ಬಸ್ ಸೌಲಭ್ಯ ಕಲ್ಪಿಸಲು ಸಚಿವರಿಗೆ ಮನವಿ



**ಮಂಗಳೂರು:** ಪಾವೂರು ಗ್ರಾಮಕ್ಕೆ ಸರಕಾರಿ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿ ಆರೋಗ್ಯ ಸಚಿವ ಯು.ಟಿ. ಖಾದರ್‌ಗೆ ಗ್ರಾಮಸ್ಥರು ಮನವಿ ಸಲ್ಲಿಸಿದ್ದಾರೆ.ರಾಜ್ಯ ಸರಕಾರದ ಶಕ್ತಿ ಯೋಜನೆಯಿಂದ ಗ್ರಾಮದ ಮಹಿಳೆಯರು ಮತ್ತು ವಿದ್ಯಾರ್ಥಿಗಳು ಉಚಿತ ಬಸ್ ಪ್ರಯಾಣದ ಸೌಲಭ್ಯದಿಂದ ವಂಚಿತರಾಗಿದ್ದಾರೆ.ಮಹಿಳೆಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಪ್ರತಿದಿನ ಓಡಾಡಲು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಹಾಗಾಗಿ ಆದಷ್ಟು ಬೇಗ ಪಾವೂರು ಗ್ರಾಮಕ್ಕೆ ಸರಕಾರಿ ಬಸ್ ಸಂಚಾರ ಪ್ರಾರಂಭಿಸಲು ಆರ್‌ಟಿಒ ಮತ್ತು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಸಚಿವರ ಬಳಿ ಒತ್ತಾಯಿಸಲಾಯಿತು. ಗ್ರಾಮಸ್ಥರ ಪರವಾಗಿ ಮನವಿ ಸಲ್ಲಿಸಿದ ನಿಯೋಗದಲ್ಲಿ ಪಾವೂರು ಗುತ್ತಿನ ನಿವೃತ್ತ ಸೈನಿಕ ಪಾರ್ಶ್ವನಾಥ ಶೆಟ್ಟಿ, ನಾಟಿ ವೈದ್ಯ ಬಿ.ಉಗ್ಗಪ್ಪ ಪೂಜಾರಿ, ಸಮಾಜ ಸೇವಕ ಇಸ್ಮಾಯಿಲ್, ಕೃಷಿಕಲ ಲಾರೆನ್ಸ್ ಲೋಬೊ ಕೊಪ್ಪಳ ಮತ್ತಿತರರಿದ್ದರು.

# ಸಮಸ್ತ ಕೇರಳ ಜಂಇಯ್ಯತುಲ್ ಉಲಮಾ ಪ್ರಧಾನ ಕಾರ್ಯದರ್ಶಿ ಪ್ರೊ.ಕೆ.ಅಲಿಕುಟ್ಟಿ ಮುಸ್ಲಿಯಾರ್ ನಿಧನ



**ಮಲಪ್ಪುರಂ:** ಸಮಸ್ತ ಕೇರಳ ಜಂಇಯ್ಯತುಲ್ ಉಲಮಾ ಪ್ರಧಾನ ಕಾರ್ಯದರ್ಶಿ ಶೈಖುಲ್ ಜಾಮಿಅ ಶೈಖುನಾ ಪ್ರೊ.ಕೆ.ಅಲಿಕುಟ್ಟಿ ಮುಸ್ಲಿಯಾರ್ (81) ಪೆರಿಂದಲ್ಮಣ್ಣ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ನಿಧನರಾಗಿದ್ದಾರೆ. 1945ರಲ್ಲಿ ಮಲಪ್ಪುರಂ ಜಿಲ್ಲೆಯ ಇರುಂಬುಝಿ ತೆಕ್ಕುಮ್ಮುರ್ರಿಯ ತಿರುಕ್ಕಾಡ್ ನ ಕುನ್ನತ್ ಮೂಸಾ ಹಾಜಿ ಮತ್ತು ಮಡಂಬಿ ಇಯ್ಯತುಟ್ಟಿ ದಂಪತಿಯ ಪುತ್ರರಾಗಿ ಜನಿಸಿದ ಪ್ರೊ.ಅಲಿಕುಟ್ಟಿ ಮುಸ್ಲಿಯಾರ್, ಚೆರುಶ್ಶೇರಿ ಝೈನುದ್ದೀನ್ ಮುಸ್ಲಿಯಾರ್ ಅವರ ನಿಧನದ ನಂತರ 2016ರಲ್ಲಿ ಸಮಸ್ತದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದರು. 2013ರಿಂದ ಕಾಸರಗೋಡು ಜಿಲ್ಲಾ ಖಾಝಿಯಾಗಿದ್ದ ಅವರು, 2003ರಿಂದ ಪಟ್ಟಿಕ್ಕಾಡ್ ಜಾಮಿಯಾ ನೂರಿಯಾ ಅರಬಿಕ್ ಕಾಲೇಜಿನ ಪ್ರಾಂಶುಪಾಲರಾಗಿಯೂ ಸೇವೆ ಸಲ್ಲಿಸಿದ್ದರು. 16 ನೇ ವಯಸ್ಸಿನಲ್ಲಿ ತಿರುರ್ ಕಾಡ್ ಮಹಲ್ ಮಸೀದಿಯ ಖತೀಬರಾಗಿ ಮತ್ತು 20ನೇ ವಯಸ್ಸಿನಲ್ಲಿ ಮಹಲ್ ಖಾಝಿಯಾಗಿ ನೇಮಕಗೊಂಡ ಅಲಿಕುಟ್ಟಿ ಮುಸ್ಲಿಯಾರ್, ಚಿಕ್ಕ ವಯಸ್ಸಿನಲ್ಲಿಯೇ ನಾಯಕತ್ವ ಕೌಶಲ್ಯವನ್ನು ಪ್ರದರ್ಶಿಸಿದ ವ್ಯಕ್ತಿತ್ವವಾಗಿದ್ದರು. 1968ರಲ್ಲಿ ಪಟ್ಟಿಕ್ಕಾಡ್ನ ಜಾಮಿಯಾ ನೂರಿಯಾ ಅರಬಿಕ್ ಕಾಲೇಜಿನಿಂದ ಫೈಝಿ ಪದವಿ ಪಡೆದ ನಂತರ, ಅವರು ಮೊದಲು ಮೀನಾರ್ಕುಳಿ ದರ್ಸ್ ನಲ್ಲಿ ಸೇವೆ ಸಲ್ಲಿಸಿದರು. 1978ರಲ್ಲಿ ಅವರು ಚೆಮ್ಮಂಕಡವು ದರ್ಸ್ ಗೆ ಸ್ಥಳಾಂತರಗೊಂಡರು. 1979ರಲ್ಲಿ ಪಟ್ಟಿಕ್ಕಾಡ್ನ ಜಾಮಿಯಾ ನೂರಿಯಾದಲ್ಲಿ ಶಂಸುಲ್ ಉಲಮಾ ಹುದ್ದೆಯಿಂದ ತೆರವಾದ ಸ್ಥಾನಕ್ಕೆ ಅಧ್ಯಾಪಕರಾಗಿ ನೇಮಕಗೊಂಡು ಅವರು, 2003ರಿಂದ ಅಲ್ಲಿ ಪ್ರಾಂಶುಪಾಲರಾಗಿ ಹುದ್ದೆ ವಹಿಸಿಕೊಂಡಿದ್ದರು. 1976ರಲ್ಲಿ ಸಮಸ್ತ ಮಲಪ್ಪುರಂ ಜಿಲ್ಲಾ ಉಪಾಧ್ಯಕ್ಷರಾಗಿ ಆಯ್ಕೆಯಾದ ಪ್ರೊ.ಕೆ.ಅಲಿಕುಟ್ಟಿ ಮುಸ್ಲಿಯಾರ್, 1978ರಿಂದ ಜಾಮಿಯಾ ಹಳೆಯ ವಿದ್ಯಾರ್ಥಿಗಳ ಸಂಘಟನೆ 'ಓಸ್ಫೋಝಾನಾ'ದ ಪ್ರಧಾನ ಕಾರ್ಯದರ್ಶಿಯಾಗಿದ್ದರು. 1986ರಲ್ಲಿ ಸಮಸ್ತ ಮುಶಾವರದ ಸದಸ್ಯರಾಗಿ ಮತ್ತು 1992 ರಲ್ಲಿ ಎಸ್ವೈಎಸ್ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. 2010ರಲ್ಲಿ ಅವರು ಸಮಸ್ತ ಜಂಟಿ ಕಾರ್ಯದರ್ಶಿಯಾದರು. 2009ರಿಂದ ಅವರು ಸಮಸ್ತ ಶಿಕ್ಷಣ ಮಂಡಳಿಯ ಉಪಾಧ್ಯಕ್ಷರಾಗಿದ್ದರು. ಭಾರತದ ಒಳಗೆ ಮತ್ತು ಹೊರಗೆ ಅನೇಕ ವಿಷಯಗಳ ಕುರಿತು ಪ್ರಬಂಧಗಳನ್ನು ಮಂಡಿಸಿರುವ ಮತ್ತು ಭಾರತೀಯ ಮುಸ್ಲಿಮರ ಪರವಾಗಿ ಅನೇಕ ದೇಶಗಳಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿರುವ ಅಲಿಕುಟ್ಟಿ ಮುಸ್ಲಿಯಾರ್, ಪ್ರಸಕ್ತ ಮುಸ್ಲಿಮ್ ವರ್ಲ್ಡ್ ಲೀಗ್‌ನ ಇಸ್ಲಾಮಿಕ್ ಫಿಖ್ಹ್ ಕೌನ್ಸಿಲ್‌ನ ಸದಸ್ಯರಾಗಿದ್ದರು.

1978ರಲ್ಲಿ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ಅಧೀನದಲ್ಲಿ ಹೈದರಾಬಾದ್ ನಲ್ಲಿ ಇಂಗ್ಲಿಷ್ ಆಂಡ್ ಫಾರಿನ್ ಲಾಂಗ್ವೇಜ್ ಯುನಿವರ್ಸಿಸಿಯ ಪಠ್ಯಪದ್ಧತಿ ರಚನಾ ಸಮಿತಿಯ ಸದಸ್ಯರಾಗಿದ್ದರು. ಈಜಿಪ್ಟ್ ನ ಅಲ್–ಅಝರ್ ವಿಶ್ವವಿದ್ಯಾನಿಲಯದಲ್ಲಿ ಶಿಹಾಬ್ ತಂಙಳ್ ಅವರ ಬದಲಿಯಾಗಿ 'ಅಝರ್' ಹಳೆಯ ವಿದ್ಯಾರ್ಥಿಗಳ ಸಭೆಯಲ್ಲಿ ಭಾಗವಹಿಸಿದ್ದರು.

2011ರಲ್ಲಿ ಅಧ್ಯಕ್ಷ ಮುಅಮ್ಮರ್ ಗಡಾಫಿ ನೇತೃತ್ವದಲ್ಲಿ ಲಿಬಿಯಾದಲ್ಲಿ ನಡೆದ ಅಂತಾರಾಷ್ಟ್ರೀಯ ಸೂಫಿ ಸಮ್ಮೇಳನ, 2012ರಲ್ಲಿ ಮೊರಾಕ್ಕೊದಲ್ಲಿ ನಡೆದ ಸೂಫಿ ಸಮ್ಮೇಳನ ಮತ್ತು ನಂತರದ ಎರಡು ವರ್ಷಗಳಲ್ಲಿ ಆಫ್ರಿಕನ್ ದೇಶವಾದ ಸೆನೆಗಲ್ ನಲ್ಲಿ ನಡೆದ ಸಮ್ಮೇಳನಗಳಲ್ಲಿ ಅವರು ಸೂಫಿಸಂ ಕುರಿತು ಪ್ರಬಂಧಗಳನ್ನು ಮಂಡಿಸಿದ್ದರು.

ಅವರು 2014ರಿಂದ ಸುಪ್ರಭಾತಂ ಪತ್ರಿಕೆಯ ಅಧ್ಯಕ್ಷರಾಗಿದ್ದರು. 2003ರಿಂದ 2006ರವರೆಗೆ ಕೇರಳ ಹಜ್ ಸಮಿತಿಯ ಅಧ್ಯಕ್ಷರಾಗಿ ಮತ್ತು 2006ರಿಂದ 2009ರವರೆಗೆ ಭಾರತ ಹಜ್ ಸಮಿತಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಅಲಿಕುಟ್ಟಿ ಮುಸ್ಲಿಯಾರ್ ಹಜ್ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಮೊದಲ ಸಚಿವರಲ್ಲದ ವ್ಯಕ್ತಿ ಎಂಬುದು ವಿಶೇಷ. 1992 ರಿಂದ 2016 ರವರೆಗೆ ಅವರು ಖಜಖ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. 2004ರಿಂದ ಅವರು ರಾಜ್ಯ ಮುಸ್ಲಿಮ್ ಅನಾಥಾಶ್ರಮ ಸಮನ್ವಯ ಸಮಿತಿಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಅಲ್ ಮುಅಲ್ಲಿಮ್, ಅಲ್ ನೂರ್ ನಿಯತಕಾಲಿಕೆಗಳು ಮತ್ತು ಸುನ್ನಿ ಅಫ್ಕರ್ನ ಮುಖ್ಯ ಸಂಪಾದಕರಾಗಿದ್ದರು.

# ಪೊಲೀಸರ ಹಿಂಬರಹದ ವಿರುದ್ಧ ಕಾನೂನು ಸಮರ

↗1ನೇ ಪುಟದಿಂದ

ಈ ಪ್ರಕರಣದಲ್ಲಿ ಪೊಲೀಸರು ಘಟನಾ ಸ್ಥಳದ ಸಂಪೂರ್ಣ ವೈಜ್ಞಾನಿಕ ಪರಿಶೀಲನೆ ನಡೆಸಿದ್ದಾರೆಯೇ, ಸ್ಥಳ ಮಹಜರು ಅಥವಾ ಪಂಚನಾಮೆ ನಡೆಸಲಾಗಿದೆಯೇ, ದುರಂತದ ಮೊದಲು ಮತ್ತು ನಂತರದ ಛಾಯಾಚಿತ್ರಗಳು ಹಾಗೂ ವೀಡಿಯೊಗಳನ್ನು ಪರಿಶೀಲಿಸಲಾಗಿದೆಯೇ, ಗುಡ್ಡ ಕತ್ತರಿಸುವಿಕೆ ಮತ್ತು ರಸ್ತೆ ಕಾಮಗಾರಿಯ ಹಿಂದಿನ ದಾಖಲೆಗಳನ್ನು ಸಂಗ್ರಹಿಸಲಾಗಿದೆಯೇ ಎಂಬುದನ್ನು ಅವರು ಪ್ರಶ್ನಿಸಿದ್ದಾರೆ.

ಅದರ ಜೊತೆಗೆ, ಸಂಬಂಧಪಟ್ಟ ಭೂಮಾಲೀಕರು, ಗುತ್ತಿಗೆದಾರರು, ಕಾಮಗಾರಿ ನಿರ್ವಹಿಸಿದ ವ್ಯಕ್ತಿಗಳು ಅಥವಾ ಸಂಸ್ಥೆಗಳು ಮತ್ತು ಯಂತ್ರೋಪಕರಣಗಳ ಮಾಲೀಕರನ್ನು ಗುರುತಿಸಿ ವಿಚಾರಣೆ ನಡೆಸಲಾಗಿದೆಯೇ ಎಂಬುದಕ್ಕೂ ದಾಖಲೆ ಆಧಾರಿತ ಉತ್ತರವನ್ನು ಅವರು ಕೇಳಿದ್ದಾರೆ.

"ನಾಲ್ಕು ಜನರ ಜೀವಹಾನಿ ಮತ್ತು ಇಬ್ಬರು ವ್ಯಕ್ತಿಗಳ ಶಾಶ್ವತ ಅಂಗವೈಕಲ್ಯಕ್ಕೆ ಕಾರಣವಾದ ದುರಂತವನ್ನು ಕೇವಲ 'ನೈಸರ್ಗಿಕ ವಿಕೋಪ' ಎಂದು ಹೇಳಿ ಮುಕ್ತಾಯಗೊಳಿಸಲಾಗದು. ನೈಸರ್ಗಿಕ ಕಾರಣ ಮತ್ತು ಮಾನವ ಹಸ್ತಕ್ಷೇಪದ ಪ್ರತ್ಯೇಕ ಪಾತ್ರವನ್ನು ವೈಜ್ಞಾನಿಕವಾಗಿ ಪರಿಶೀಲಿಸಬೇಕು" ಎಂಬುದು ಅಶ್ವಿನಿಯ ಪ್ರಮುಖ ಒತ್ತಾಯವಾಗಿದೆ.

ಕೋಣಾಜೆ ಪೊಲೀಸರ ಹಿಂಬರಹದಲ್ಲಿ ಉಲ್ಲೇಖಿಸಿರುವ ಮಂಜನಾಡಿ ಗ್ರಾಮ ಪಂಚಾಯತ್, ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗ, ಎನ್‌ಐಟಿಕೆ ಸುರತ್ಕಲ್ ಮತ್ತು ಜಲಸಂಪನ್ಮೂಲ ಇಲಾಖೆಯ ವರದಿಗಳ ಪ್ರಮಾಣೀಕೃತ ಪ್ರತಿಗಳನ್ನು ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ. ಸ್ಥಳ ಪರಿಶೀಲನಾ ವರದಿ, ಸ್ಥಳ ಮಹಜರು, ಛಾಯಾಚಿತ್ರಗಳು, ವೀಡಿಯೊ ದಾಖಲೆಗಳು ಹಾಗೂ ಇತರ ತನಿಖಾ ದಾಖಲೆಗಳನ್ನೂ ಒದಗಿಸುವಂತೆ ಮನವಿ ಮಾಡಿದ್ದಾರೆ.

ಅಲ್ಲದೆ, ತನಿಖೆಯನ್ನು ಸಂಬಂಧಪಟ್ಟ ಹಿರಿಯ ಪೊಲೀಸ್ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಮರುಪರಿಶೀಲಿಸಿ, ತನಿಖೆಯಲ್ಲಿ ಉಳಿದಿರುವ ಎಲ್ಲಾ ಪ್ರಮುಖ ಅಂಶಗಳನ್ನು ಪೂರ್ಣಗೊಳಿಸಬೇಕು. ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ಅಧಿಕಾರಿಯ ನಿರ್ಲಕ್ಷ್ಯ, ಕಾನೂನುಬಾಹಿರ ಕೃತ್ಯ ಅಥವಾ ಅಪರಾಧಾತ್ಮಕ ಹೊಣೆಗಾರಿಕೆ ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಒಬ್ಬ ತಾಯಿ ತನ್ನ ಇಬ್ಬರು ಮಕ್ಕಳ ಸಾವಿನ ನಿಜವಾದ ಕಾರಣವನ್ನು ತಿಳಿದುಕೊಳ್ಳಲು ಕೇಳುತ್ತಿರುವುದು ಪ್ರತೀಕಾರವಲ್ಲ; ಅದು ನ್ಯಾಯದ ಮೂಲಭೂತ ಹಕ್ಕು.

ಮಂಜನಾಡಿ ದುರಂತದ ತನಿಖೆ ನಿಜವಾಗಿಯೂ ಸಂಪೂರ್ಣವಾಗಿದೆಯೇ? ಅಥವಾ ನೈಸರ್ಗಿಕ ವಿಕೋಪದ ಹೆಸರಿನಲ್ಲಿ ಸಂಭವನೀಯ ಮಾನವ ಹೊಣೆಗಾರಿಕೆಯನ್ನು ತನಿಖೆಯ ಹೊರಗೆ ಇಡಲಾಗಿದೆಯೇ?

ಈಗ ಈ ಪ್ರಶ್ನೆ ಕೇವಲ ಅಶ್ವಿನಿಯದ್ದಲ್ಲ. ನಾಲ್ಕು ಜೀವಗಳನ್ನು ಕಳೆದುಕೊಂಡ ಮಂಜನಾಡಿ ದುರಂತದ ಸತ್ಯವನ್ನು ತಿಳಿದುಕೊಳ್ಳಬೇಕೆಂದು ಬಯಸುವ ಪ್ರತಿಯೊಬ್ಬ ನಾಗರಿಕನ ಪ್ರಶ್ನೆಯಾಗಿದೆ.

# ನೂತನ ಖಾಝಿಯಾಗಿ ಅಧಿಕಾರ ಸ್ವೀಕಾರ

↗1ನೇ ಪುಟದಿಂದ

ಕೋಶಾಧಿಕಾರಿ ಶೈಖುನಾ ಕೊಯ್ಯೋಡ್ ಉಮರ್ ಮುಸ್ಲಿಯಾರ್, ಸೈಯದ್ ಆಟಕೋಯ ತಂಬಳ್ ಕುಂಬೋಳ್, ಎಸ್‌ವೈಎಸ್ ಕೇಂದ್ರ ಕಾರ್ಯದರ್ಶಿ ಅಬ್ದುಸ್ಸಮದ್ ಪುಕೋಟೂರು, ಆರೋಗ್ಯ ಸಚಿವ ಯು.ಟಿ.ಖಾದರ್, ಕಾಸರಗೋಡು ಶಾಸಕ ಮಾಹಿನ್ ಹಾಜಿ ಶುಭಹಾರೈಸಿದರು. ವೇದಿಕೆಯಲ್ಲಿ ಕವರತ್ತಿ (ಲಕ್ಷದ್ವೀಪ) ಖಾಝಿ ಸೈಯದ್ ಇ.ಪಿ. ಸೈದಾಲಿ ತಂಬಳ್, ಕರ್ನಾಟಕ ಹಜ್ ಸಮಿತಿಯ ಸದಸ್ಯ ಸೈಯದ್ ಅಶ್ರಫ್ ತಂಬಳ್ ಆದೂರು, ಸೈಯದ್ ಝುನುಲ್ ಆಬಿದಿನ್ ತಂಙಳ್ ದುಗ್ಗಲಡ್ಕ ಕಾಂಞಂಗಾಡ್ ಸಂಯುಕ್ತ ಜಮಾಅತ್ ಕಾರ್ಯದರ್ಶಿ ಬಶೀರ್ ವೆಳ್ಳಿಕೋತ್, ಮರ್ಹೂಂ ಸಿ.ಎಂ. ಉಸ್ತಾದ್‌ರ ಪುತ್ರ ಶಾಫಿ ತಳಂಗರೆ, ಮರ್ಹೂಂ ತ್ವಾಖಾ ಉಸ್ತಾದರ ಪುತ್ರ ಹುಸೈನ್ ರಹ್ಮಾನಿ, ಸಹೋದರ ಯೂಸುಫ್ ಹಾಜಿ, ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ.ಗಫೂರ್, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಅಧ್ಯಕ್ಷ ಟಿ.ಎಂ. ಶಹೀದ್ ತೆಕ್ಕಿಲ್, ಉಳ್ಳಾಲ ದರ್ಗಾ ಸಮಿತಿಯ ಅಧ್ಯಕ್ಷ ಹನೀಫ್ ಹಾಜಿ, ಮಾಜಿ ಅಧ್ಯಕ್ಷ ರಶೀದ್ ಹಾಜಿ ಉಳ್ಳಾಲ, ಝೀನತ್ ಬಕ್ಸ್ ಕೇಂದ್ರ ಜುಮಾ ಮಸೀದಿಯ ಖತೀಬ್ ಶರೀಫ್ ಅಶ್ರಫಿ, ದ.ಕ.ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಮಾಜಿ ಅಧ್ಯಕ್ಷ ಅಬ್ದುಲ್ ನಾಸಿರ್ ಲಕ್ಕಿಸ್ಟಾರ್, ದ.ಕ. ಜಿಲ್ಲಾ ಮದ್ರಸ ಮ್ಯಾನೇಜ್‌ಮೆಂಟ್ ಅಧ್ಯಕ್ಷ ಎಂ.ಎಚ್. ಮೊಯ್ದಿನ್ ಹಾಜಿ ಅದ್ದೂರು, ಎಸ್.ಬಿ. ಮುಹಮ್ಮದ್ ದಾರಿಮಿ, ಕೇಂದ್ರ ಜುಮಾ ಮಸೀದಿಯ ಆಡಳಿತ ಸಮಿತಿಯ ಸದಸ್ಯರಾದ ಹಾಜಿ ಅಬ್ದುಲ್ ಸಮದ್, ಮುಹಮ್ಮದ್ ಅಶ್ರಫ್ ಹಳೆಮನೆ, ಮಕ್ಬೂಲ್ ಅಹ್ಮದ್, ಅನಿವಾಸಿ ಉದ್ಯಮಿ ಝಕರಿಯಾ ಜೋಕಟ್ಟೆ ಮತ್ತಿತರರು ಉಪಸ್ಥಿತರಿದ್ದರು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ಯಕ್ಷಗಾನ ಪಠ್ಯರೂಪೀಕರಣ ಕಾರ್ಯಾಗಾರ' ಉದ್ಘಾಟನೆ

# ಯಕ್ಷಗಾನ ಪಠ್ಯಕ್ರಮದಿಂದ ಶೈಲಿಗೆ ಧಕ್ಕೆಯಿಲ್ಲ: ಪಟ್ಲ ಸತೀಶ್ ಶೆಟ್ಟಿ



**ಕೊಣಾಜೆ:** ಯಕ್ಷಗಾನದಲ್ಲಿ ಹಲವು ಪರಂಪರೆಗಳಿದ್ದು ಪಠ್ಯಕ್ರಮ ಒಂದು ಮಾರ್ಗರೂಪಣೆಯೇ ಹೊರತು ಶೈಲಿಯ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಲಾರದು. ನೂರಾರು ವರ್ಷಗಳ ಇತಿಹಾಸವಿರುವ ಯಕ್ಷಗಾನ ಶೈಕ್ಷಣಿಕ ಅವರಣಕ್ಕೆ ಬರುತ್ತಿರುವುದನ್ನು ನಾವು ಸ್ವಾಗತಿಸಬೇಕು ಎಂದು ಖ್ಯಾತ ಯಕ್ಷಗಾನ ಭಾಗವತರಾದ ಪಟ್ಲ ಸತೀಶ್ ಶೆಟ್ಟಿ ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ವತಿಯಿಂದ ಸೋಮವಾರ ಎಸ್ ವಿ ಪಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಡೆದ ಯಕ್ಷಗಾನ ಪಠ್ಯ ರೂಪಿಕರಣ ಕಾರ್ಯಾ ಗಾರವನ್ನು ಉದ್ಘಾಟಿಸಿ ಮಾತನಾಡಿದರು.

> ಬಯಲು ವಿಶ್ವವಿದ್ಯಾಲಯದಿಂದ ಬಂದಿರುವ ಯಕ್ಷಗಾನವು ಮಂಗಳೂರು ವಿಶ್ವವಿದ್ಯಾನಿಲಯದ ಮೂಲಕ ಶೈಕ್ಷಣಿಕ ಆಯಾಮವನ್ನು ಪಡೆದುಕೊಳ್ಳುತ್ತಿರುವುದು ಮಹತ್ವದ ವಿಷಯವಾಗಿದೆ. ಯಕ್ಷಗಾನದ ವಿವಿಧ ಶಿಕ್ಷಣ ಮಾದರಿಗಳ ಸೂಕ್ಷ್ಮಗಳನ್ನು ಗಮನಿಸಿ ನೂತನ ಪಠ್ಯ ರಚನೆಯನ್ನು ಮಾಡಿಕೊಳ್ಳಲಾಗುವುದು.
>
> ■ **ಡಾ.ಧನಂಜಯ ಕುಂಬ್ಳೆ**
> ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕ

ನಮ್ಮ ನಾಡಿನ ಶ್ರೀಮಂತ ಹಾಗೂ ಆರಾಧನಾ ಕಲೆಯಾಗಿ ಗುರುತಿಸಿಕೊಂಡಿರುವ ಯಕ್ಷಗಾನವು ವಿಶ್ವವಿದ್ಯಾನಿಲಯದ ಮೂಲಕ ಶೈಕ್ಷಣಿಕವಾಗಿ ಗುರುತಿಸಿಕೊಂಡರೆ ಜಗತ್ತಿನಾದ್ಯಂತ ವಿಸ್ತಾರವಾಗಿ ಬೆಳೆಯಲು ಸಾಧ್ಯ. ಈ ಕಲೆಯನ್ನು ಸಂಪ್ರದಾಯ ಬದ್ಧವಾಗಿ ಮುಂದಿನ ತಲೆಮಾರಿಗೆ ದಾಟಿಸುವುದು ನಮ್ಮೆಲ್ಲರ ಜವಬ್ಧಾರಿಯಾಗಿದೆ ಹಾಗೂ ಯಕ್ಷಗಾನದ ಉನ್ನತೀಕರಣಕ್ಕೆ ನಾವೆಲ್ಲರೂ ಶ್ರಮಿಸೋಣ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಪಿ.ಎಲ್.ಧರ್ಮ ಅವರು, ಯಕ್ಷಗಾನದಲ್ಲಿ ಯಾವುದೇ ಹೊಸ ಪ್ರಯೋಗಗಳು ನಡೆದರೂ ಅದರ ಮೂಲಭೂತ ಮೌಲ್ಯಗಳಿಗೆ ಧಕ್ಕೆಯಾಗ ಬಾರದು. ಮೌಲ್ಯಗಳೇ ನಮ್ಮ ಪರಂಪರೆಯ ಬದುಕಾಗಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಮಂಗಳೂರು ವಿವಿ ಯಲ್ಲಿ ಶ್ರೀಮಂತ ಕಲೆಯಾದ ಯಕ್ಷಗಾನಕ್ಕೆ ವಿಶೇಷ ಪರೀಕ್ಷೆಯ ಮೂಲಕ ಶೈಕ್ಷಣಿಕ ಆಯಾಮ ಒದಗಿ ಬರುತ್ತಿರುವುದು ಬಹಳ ಮಹತ್ವದ ಸಂಗತಿಯಾಗಿದೆ ಎಂದರು.

ಯಕ್ಷಗಾನ ಬಯಲಾಟ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಪ್ರೊ.ಎಂ.ಎಲ್.ಸಾಮಗ ಯಕ್ಷಗಾನ ತಜ್ಞರುಗಳಾದ ಪದ್ಮನಾಭ ಉಪಾಧ್ಯಾಯ,ಗುಂಡ್ಮಿ ಸದಾನಂದ ಐತಾಳ ಎ.ಪಿ ಪಾಠಕ್, ಪ್ರಕಾಶ್ ಮೂಡಿತ್ತಾಯ, ಪಣಂಬೂರು ವಾಸುದೇವ ಐತಾಳ, ಸುಜಯೀಂದ್ರ ಹಂದೆ, ಎನ್ ಜಿ ಹೆಗಡೆ ಸುಬ್ರಹ್ಮಣ್ಯ ಪ್ರಸಾದ್ ಮುದ್ರಾಡಿ, ರಾಜಾರಾಮ ಹೊಳ್ಳ ಕೈರಂಗಳ, ಕೃಷ್ಣಪ್ರಕಾಶ ಉಳಿತ್ತಾಯ, ಕೌಶಿಕ್ ರಾವ್ ಪುತ್ತಿಗೆ ಮಯೂರ ನಾಯ್ಗ, ಶೈಲೇಶ್ ತೀರ್ಥಹಳ್ಳಿ ಮೊದಲಾದವರು ಉಪಸ್ಥಿತರಿದ್ದರು.

ಯಕ್ಷಗಾನ ಗುರುಗಳಾದ ದೀವಿತ್ ಕೋಟ್ಯಾನ್ ಅವರು ಸ್ವಾಗತಿಸಿದರು. ಯಕ್ಷಗಾನ ಕೇಂದ್ರದ ಸಂಶೋಧನಾ ಅಧಿಕಾರಿ ಡಾ.ಸತೀಶ್ ಕೊಣಾಜೆ ವಂದಿಸಿದರು. ಸಂಶೋಧನಾ ವಿದ್ಯಾರ್ಥಿನಿ ಸಾಯಿಸುಮ ನಾವಡ ಅವರು ಕಾರ್ಯಕ್ರಮ ನಿರೂಪಿಸಿದರು.




# ಅಸೈಗೋಳಿ : ಕೊಣಾಜೆ ವಿವಿದೋದ್ದೇಶ ಸಹಕಾರ ಸಂಘ ವತಿಯಿಂದ ಆರೋಗ್ಯ ಸಚಿವರಿಗೆ ಅಭಿನಂದನೆ



**ಕೊಣಾಜೆ:** ಕೊಣಾಜೆ ವಿವಿದೋದ್ದೇಶ ಸಹಕಾರ ಸಂಘ ಅಸೈಗೋಳಿ ಇದರ ವತಿಯಿಂದ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾಗಿ ಆಯ್ಕೆಗೊಂಡಿರುವ ಯು ಟಿ ಖಾದರ್ ಅವರ ಅಭಿನಂದನಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಣಾಜೆ ವಿವಿಧೋದ್ದೇಶ ಸಹಕಾರ ಸಂಘ ಇದರ ಅಧ್ಯಕ್ಷರಾದ ಸಂತೋಷ್ ಕುಮಾರ್ ಶೆಟ್ಟಿ ಪುಲ್ಲು ಅವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಗಡಿಪ್ರದಾನರಾದ ದಿವಾಕರ್ ಭಂಡಾರಿ, ಅಯ್ಯಪ್ಪ ಸ್ವಾಮಿ ಸೇವಾ ಟ್ರಸ್ಟ್ ಇದರ ಅಧ್ಯಕ್ಷರಾದ ಶ್ರೀನಿವಾಸ್ ಶೆಟ್ಟಿ ಪುಲ್ಲು , ಮೂಡ ಅಧ್ಯಕ್ಷರು ಸದಾಶಿವ ಉಳ್ಳಾಲ್, ಮುಡಿಪು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಪ್ರಶಾಂತ್ ಕಾಜವ , ಪ್ರಸಾದ್ ರೈ ಕಲ್ಲಿಮಾರ್ , ಸೊಸೈಟಿ ಉಪಾಧ್ಯಕ್ಷರಾದ ಕರುಣಾಕರ್ ಕಾನ, ಫಜೀರು ಪಂಚಾಯತ್ ಮಾಜಿ ಅಧ್ಯಕ್ಷರುಗಳಾದ ಭರತ್ ರಾಜ್ ಶೆಟ್ಟಿ ಪಜೀರುಗುತ್ತು, , ಪ್ರಗತಿಪರ ಕೃಷಿಕರಾದ ರಮಾನಾಥ ಶೆಟ್ಟಿ ಕಕ್ಕೆಮಜಲು ,ನಾರಾಯಣ ರೈ ಕಕ್ಕೆಮಜಲು, ಉದ್ಯಮಿ ಪುರುಷೋತ್ತಮ ಅಂಚನ್, ಕೊಣಾಜೆ ಪಂಚಾಯತ್ ಮಾಜಿ ಅಧ್ಯಕ್ಷರಾದ ರಾಜಾರಾಮ್ ರೈ ಕಲ್ಲಿಮಾರು, ಉದ್ಯಮಿ ಇಕ್ಬಾಲ್ ಸಾಮಾನಿಗೆ, ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷರು ಮಹಮ್ಮದ್ ಮೋನು, ಮಾಜಿ ಸದಸ್ಯರು ಮುಸ್ತಫಾ ಮಲಾರ್ ,ಪದ್ಮಾವತಿ, ಅಬ್ದುಲ್ ರಹಿಮಾನ್ ಕೋಡಿಜಾಲ್ ರವಿರಾಜ್ ಶೆಟ್ಟಿ ದೇರಳಕಟ್ಟೆ , ಮೇಘ ಸಲೀಂ, ಹಮೀದ್ ಕಿನ್ಯಾ, ಎಂಎಂ ಇಸ್ಮೈಲ್ ಮದ್ವಾಡಿ, ಸುರೇಖಾ ಚಂದ್ರಹಾಸ್, ಚಂದ್ರಿಕಾ ರೈ ,ಮಾಜಿ ಪಂಚಾಯತ್ ಅಧ್ಯಕ್ಷರುಗಳಾದ ನಾಸಿರ್ ಮೊಯ್ದೀನ್, ನಝೀರ್ ಶಾ ಪಟ್ಟೋರಿ , ಚಂಚಲಾಕ್ಷಿ , ಕೋಟೆಕಾರು ಪಟ್ಟಣ ಪಂಚಾಯತ್ ಸದಸ್ಯರಾದ ಹರೀಶ್ ಮಡ್ಯಾರ್, ಇಸ್ಮಾಯಿಲ್ ಕೊಣಾಜೆ ಮಾಜಿ ಪಂಚಾಯತ್ ಸದಸ್ಯರುಗಳಾದ ಮಹಮ್ಮದ್, ಸಿದ್ದಾರ್ಥ್ ಶೆಟ್ಟಿ, ಅಮೀರ್ ಕೋಡಿಜಾಲ್ ಹ್ಯಾರೀಸ್ ಹಾಗೂ ಕೊಣಾಜೆ ವಿವಿದ್ದೋದ್ದೇಶ ಸಹಕಾರ ಸಂಘದ ನಿರ್ದೇಶಕರು, ಸದಸ್ಯರು, ಸಿಬ್ಬಂದಿಗಳು, ಅಭಿಮಾನಿ ಬಳಗದವರು ಉಪಸ್ಥಿತರಿದ್ದರು.

ನಿವೃತ್ತ ಮುಖ್ಯೋಪಾಧ್ಯಾಯರಾದ ರವೀಂದ್ರ ರೈ ಕಲ್ಲಿಮಾರ್ ಅಭಿನಂದನಾ ಭಾಷಣಗೈದರು. ಕೊಣಾಜೆ ವಿವಿದ್ದೋದ್ದೇಶ ಸಹಕಾರ ಸಂಘದ ಅಧ್ಯಕ್ಷರು ಸಂತೋಷ್ ಶೆಟ್ಟಿ ಪುಲ್ಲು ಪ್ರಸ್ತಾವನೆಗೈದರು, ದೈಹಿಕ ಶಿಕ್ಷಣ ಶಿಕ್ಷಕರಾದ ತ್ಯಾಗಮ್ ಹರೇಕಳ ಸ್ವಾಗತಿಸಿದರು.




# ಕೋಟೆಕಾರಿನಲ್ಲಿ ಆರ್.ಬಿ. ಕಾಂಪ್ಲೆಕ್ಸ್ ಶುಭಾರಂಭ



**ಕೋಟೆಕಾರು:** ರಾಘವ ಗಟ್ಟಿ ಹಾಗೂ ಭಾರತಿ ಗಟ್ಟಿ ಮಾಲಕತ್ವದಲ್ಲಿ ಕೋಟೆಕಾರಿನಲ್ಲಿ ಆರ್‌ಬಿ ಕಾಂಪ್ಲೆಕ್ಸ್ ಶುಭಾರಂಭಗೊಂಡಿದೆ. ಕಾರ್ಯಕ್ರಮಕ್ಕೆ ಮಾಡೂರು ಶಿವಗಿರಿ ದುರ್ಗಾಂಭ ಮಠದ ಯತಿವರ್ಯರಾದ ದುರ್ಗಾನಂದ ಸ್ವಾಮೀಜಿ ಅವರು ದೀಪ ಬೆಳಗಿಸಿ ಚಾಲನೆಯನ್ನು ನೀಡಿದರು.

ಬಳಿಕ ಆಶೀರ್ವಚನ ನೀಡಿ, ನಮ್ಮನ್ನ ಸಾಕಿ ಸಲಹಿದ ತಂದೆ–ತಾಯಿಯನ್ನು ಮುಂದಿನ ದಿನಗಳಲ್ಲಿ ಉತ್ತಮ ರೀತಿಯಲ್ಲಿ ನೋಡಿಕೊಂಡರೆ ಅದುವೇ ಸಂಸ್ಕೃತಿ. ಹಾಗು ಅವರುಗಳು ಉನ್ನತ ಮಟ್ಟಕ್ಕೇರಲು ಸಾಧ್ಯವಾಗುತ್ತದೆ. ಸಂಘ ಸಂಸ್ಥೆಗಳಲ್ಲಿ ಬೆಳೆದ ಮಕ್ಕಳಿಗೆ ಸಂಸ್ಕಾರ ತಾನಾಗಿಯೇ ಒಲಿಯುತ್ತದೆ. ಇದಕ್ಕೆ ರಾಘವ ಗಟ್ಟಿ ನಿದರ್ಶನ ಅಂತ ಹೇಳಿದ್ದಾರೆ.

ಬಿಜೆಪಿ ಜಿಲ್ಲಾಧ್ಯಕ್ಷರಾದ ಸತೀಶ್ ಕುಂಪಲ ಅವರು ಮಾತನಾಡಿ, ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿ ರುವ ರಾಘವ ಗಟ್ಟಿ ಅವರು ರಾಜಕೀಯ ಕ್ಷೇತ್ರದಲ್ಲೂ ಗುರುತಿಸಿಕೊಂಡಿದ್ದಾರೆ. ಅವರ ಉದ್ಯಮ ಇನ್ನಷ್ಟು ಉತ್ತುಂಗಕ್ಕೇರಲಿ ಎಂದು ಶುಭಹಾರೈಸಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಚಂದ್ರಶೇಖರ್ ಉಚ್ಚಿಲ, ತುಳುನಾಡ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಯೋಗೀಶ್ ಶೆಟ್ಟಿ ಜೆಪ್ಪು, ಬಿಜೆಪಿ ಮಂಗಳೂರು ಮಂಡಲದ ಅಧ್ಯಕ್ಷರಾದ ಜಗದೀಶ್ ಆಳ್ವ ಕುವೆತ್ತಬೈಲ್ ಉಪಸ್ಥಿತರಿದ್ದರು.

ಕೋಟೆಕಾರು ಶೃಂಗೇರಿ ಮಠದ ಸತ್ಯ ಶಂಕರ ಬೊಳ್ಳಾವ, ಕೋಟೆಕಾರ್ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ದಿವ್ಯ ಸತೀಶ್ ಶೆಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.




ಉಳ್ಳಾಲ ತಾಲೂಕಿನ ದೈನಂದಿನ ಸುದ್ದಿಗಳಿಗಾಗಿ ullalavani.comನ್ನು ವೀಕ್ಷಿಸಿರಿ. ದೈನಂದಿನ ವೀಡಿಯೋ ಸುದ್ದಿಗಳಿಗಾಗಿ ullalavani youtube ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿರಿ.



# ನರಿಂಗಾನ: ಹೆಚ್ಚಾದ ಬೀದಿ ನಾಯಿಗಳ ಹಾವಳಿ ಕ್ರಮಕ್ಕೆ ಸಾರ್ವಜನಿಕರ ಆಗ್ರಹ



**ನರಿಂಗಾನ:** ಇಲ್ಲಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಲ್ಲರಕೋಡಿ ಪ್ರದೇಶದಲ್ಲಿ ಬೀದಿ ನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಸಾರ್ವಜನಿಕರು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ.

ರಸ್ತೆಗಳು, ವಸತಿ ಪ್ರದೇಶಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗುಂಪುಗುಂಪಾಗಿ ಸಂಚರಿಸುವ ನಾಯಿಗಳಿಂದ ಸ್ಥಳೀಯರು, ವಿಶೇಷವಾಗಿ ಮಕ್ಕಳು ಹಾಗು ವೃದ್ಧರು ಭಯಭೀತರಾಗಿದ್ದಾರೆ. ಸ್ಥಳೀಯ ನಿವಾಸಿಗಳ ಪ್ರಕಾರ ಬೆಳಿಗ್ಗೆ ಹಾಗೂ ಸಂಜೆ ವೇಳೆಯಲ್ಲಿ ಶಾಲೆ ಹಾಗು ಮದರಸಕ್ಕೆ ತೆರಳುವ ಮಕ್ಕಳು ಮತ್ತು ಕೆಲಸಕ್ಕೆ ಹೋಗುವ ಜನರು ಭಯಗೊಂಡಿದ್ದಾರೆ. ಅಲ್ಲದೇ ಜನರು ಸುರಕ್ಷಿತವಾಗಿ ಓಡಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದ್ದಾರೆ.

ಈ ಪ್ರದೇಶದಲ್ಲಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಅವುಗಳನ್ನು ನಿಯಂತ್ರಿಸಲು ಸಂಬಂಧಪಟ್ಟ ಇಲಾಖೆ ಹಾಗು ಗ್ರಾಮ ಪಂಚಾಯಿತಿ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ನಾಯಿಗಳ ಸಂತಾನೋತ್ಪತ್ತಿ ನಿಯಂತ್ರಣ, ಲಸಿಕೆ ಹಾಗೂ ಸುರಕ್ಷಿತ ಸ್ಥಳಾಂತರ ಸೇರಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಅವರು ಮಕನವಿ ಮಾಡಿದ್ದಾರೆ.

ಬೀದಿ ನಾಯಿಗಳ ಹಾವಳಿಯಿಂದ ಸಾರ್ವಜನಿಕರ ಆರೋಗ್ಯ ಮತ್ತು ಸುರಕ್ಷತೆಗೆ ಧಕ್ಕೆಯಾಗುವ ಸಾಧ್ಯತೆ ಇರುವುದರಿಂದ, ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಶಾಶ್ವತ ಪರಿಹಾರ ಕಂಡುಹಿಡಿಯಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ದಿನೇಶ್ ಹೊಳ್ಳರ 60ನೇ ಜನ್ಮದಿನ: ಯಮುನಾ ಹೊಳ್ಳರ ಸ್ಮರಣಾರ್ಥ 60 ಗಿಡಗಳ ನೆಡುವ ಮೂಲಕ



**ಉಳ್ಳಾಲ;** ಗಿಡ ನೆಡುವುದಷ್ಟೇ ಸಾಕಾಗುವುದಿಲ್ಲ, ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿಯೂ ಪ್ರತಿಯೊಬ್ಬರ ಮೇಲಿದೆ. ಇತ್ತೀಚಿನ ದಿನಗಳಲ್ಲಿ ಗಿಡ–ಮರಗಳ ನಾಶದಿಂದ ಮಳೆ ಸರಿಯಾದ ಸಮಯಕ್ಕೆ ಆಗುತ್ತಿಲ್ಲ. ಪ್ರಕೃತಿ ವಿಕೋಪಗಳು ಹೆಚ್ಚಾಗುತ್ತಿದ್ದು, ಪರಿಸರದ ಸಮತೋಲನ ಕಾಪಾಡಲು ಪ್ರತಿಯೊಬ್ಬರೂ ತಮ್ಮ ಹುಟ್ಟುಹಬ್ಬದಂತಹ ವಿಶೇಷ ದಿನಗಳಲ್ಲಿ ಕನಿಷ್ಠ ಒಂದು ಗಿಡವನ್ನು ನೆಟ್ಟು ಬೆಳೆಸುವ ಸಂಕಲ್ಪ ಮಾಡಬೇಕು ಎಂದು ಭಾರತ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಯಶವಂತ್ ಅಮೀನ್ ಅಭಿಪ್ರಾಯಪಟ್ಟರು.

ಇವರು ಭಾರತ್ ಸಮೂಹ ಶಿಕ್ಷಣ ಸಂಸ್ಥೆ, ಸಹ್ಯಾದ್ರಿ ಸಂಚಯ, ಗ್ಲೋಬಲ್ ಗ್ರೀನ್ ಟ್ರೈಸ್ಸ್ ಮಂಗಳೂರು ಹಾಗೂ ರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಮಾಸ್ತಿಕಟ್ಟೆಯಲ್ಲಿ ನಡೆದ ದಿನೇಶ್ ಹೊಳ್ಳ ಅವರ 60ನೇ ಜನ್ಮದಿನದ ಅಂಗವಾಗಿ, ಅವರ ತಾಯಿ ಯಮುನಾ ಹೊಳ್ಳ ಅವರ ಸ್ಮರಣಾರ್ಥ 60 ಗಿಡಗಳನ್ನು ನೆಡುವ ವಿಶೇಷ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಭಾರತ್ ಶಿಕ್ಷಣ ಸಮೂಹ ಸಂಸ್ಥೆಯ ಸಂಚಾಲಕ ರೋಹಿದಾಸ್ ಬಂಗೇರ ಮಾತನಾಡಿ, ತಾಯಿಯ ಸ್ಮರಣಾರ್ಥ 60 ಗಿಡಗಳನ್ನು ನೆಡುವ ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣವಾಗಿದೆ. ಅರಣ್ಯ ನಾಶ ಮತ್ತು ಮರಗಳ ಕಡಿತದಿಂದ ಪ್ರಕೃತಿ ಸಮತೋಲನ ಹದಗೆಡುತ್ತಿದ್ದು, ಮಳೆ ಕೊರತೆ ಹಾಗೂ ಪರಿಸರ ಸಮಸ್ಯೆಗಳು ಹೆಚ್ಚಾಗುತ್ತಿವೆ. ಶುದ್ಧ ಆಮ್ಲಜನಕ ಮತ್ತು ಆರೋಗ್ಯಕರ ಬದುಕಿಗಾಗಿ ಗಿಡಮರಗಳ ಸಂರಕ್ಷಣೆ ಅತ್ಯಗತ್ಯ. ತಮ್ಮ ಸಂಸ್ಥೆ ಮೂಲಕ ಇನ್ನಷ್ಟು ಪರಿಸರ ಕಾಳಜಿಯ ಕಾರ್ಯಕ್ರಮಗಳು ನಡೆಯಲಿ ಎಂದು ಹಾರೈಸಿದರು.ದಿನೇಶ್ ಹೊಳ್ಳ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ಹುಟ್ಟುಹಬ್ಬದಂದು ಒಂದು ಗಿಡವನ್ನು ನೆಟ್ಟು ಅದನ್ನು ಸಾಕಿ ಬೆಳೆಸಿದರೆ ದೇಶವೇ ಹಸಿರಿನಿಂದ ಕಂಗೊಳಿಸಲಿದೆ. ಇದರಿಂದ ಬರಗಾಲ, ಅಧಿಕ ತಾಪಮಾನ ಹಾಗೂ ಪ್ರಕೃತಿ ವಿಕೋಪಗಳನ್ನು ತಗ್ಗಿಸಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗಿರಿಧರ್ ಕಾಮತ್, ಹರೀಶ್ ಅಡ್ಯಾರ್, ರಾಕೇಶ್ ಬೋಳಾರ್, ರಾಜೇಶ್ ದೇವಾಡಿಗ, ಸಪ್ನಾ ನೊರೋನ್ಹಾ, ದಿನೇಶ್ ಕೊಡ್ಯಾಲ್‌ಬೈಲ್, ಸ್ನೇಕ್ ಕಿರಣ್, ಹರೀಶ್ ರಾಜ್, ರಾಜಮಣಿ ರಾಮಕುಂಜ, ಪರಿಸರ ಪ್ರೇಮಿ ಮಾಧವ ಉಳ್ಳಾಲ್, ದಿವ್ಯಾ ರೈ, ಸುನಿಲ್ ಅತ್ತಾವರ, ಅನಂತ ಪದ್ಮನಾಭ ರಾವ್ ಸೇರಿದಂತೆ ಹಲವಾರು ಗಣ್ಯರು, ಪರಿಸರ ಪ್ರೇಮಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

> “ಉತ್ತರ ಕನ್ನಡ ಜಿಲ್ಲೆಯಲ್ಲಿ ತಮ್ಮ ನೇತೃತ್ವದಲ್ಲಿ ನಡೆಯುತ್ತಿರುವ ‘ವನಚೇತನಾ’ ಕಾರ್ಯಕ್ರಮದಡಿ 60 ಬುಡಕಟ್ಟು ಶಾಲೆಗಳಿಗೆ ಸಾಮಾನ್ಯ ಜ್ಞಾನ, ಇತಿಹಾಸ, ಸ್ವಾತಂತ್ರ್ಯ ಹೋರಾಟ, ವೀರಪುರುಷರು ಹಾಗೂ ನೀತಿಕಥೆಗಳ ಪುಸ್ತಕಗಳನ್ನು ವಿತರಿಸಿ ಮಕ್ಕಳಲ್ಲಿ ಓದುವ ಆಸಕ್ತಿ ಬೆಳೆಸುವ ಕಾರ್ಯವನ್ನೂ ತಮ್ಮ 60ನೇ ಜನ್ಮದಿನದ ಅಂಗವಾಗಿ ಕೈಗೊಳ್ಳಲಾಗುತ್ತಿದೆ.
>
> ■ ದಿನೇಶ್ ಹೊಳ್ಳ

# ಸರ್ವೋದಯ ಯುವಕ ಮಂಡಲದ ಅಧ್ಯಕ್ಷರಾಗಿ ಲೋಹಿತ್ ಪಜೀರು

**ಪಜೀರು:** ಸರ್ವೋದಯ ಯುವಕ ಮಂಡಲ (ರಿ.) ಸುದರ್ಶನ ನಗರ ಇದರ 2026–27 ನೇ ಸಾಲಿನ ಅಧ್ಯಕ್ಷರಾಗಿ ಲೋಹಿತ್ ಪಜೀರು ಸರ್ವಾನುಮತದಿಂದ ಆಯ್ಕೆಗೊಂಡರು.



ವಾರ್ಷಿಕ ಮಹಾಸಭೆಯು ನಿರ್ಮಲ್ ಭಟ್ ಇವರ ಅಧ್ಯಕ್ಷತೆಯಲ್ಲಿ ಮಂಡಲದಲ್ಲಿ ಜರುಗಿತು. ಇದೇ ವೇಳೆ ಉಪಾಧ್ಯಕ್ಷರು – ಉದಯ ಕುಮಾರ್ ಸುದರ್ಶನ್ ನಗರ ಕಾರ್ಯದರ್ಶಿ – ರಮೇಶ್ ಪಜೀರು, ಜೊತೆ ಕಾರ್ಯದರ್ಶಿ – ಮೋಹನ್ ಕಾಪಿಕಾಡ್, ಕೋಶಾಧಿಕಾರಿ – ಭವಾನಿ ಶಂಕರ್ ಕಂಬಳಪದವು, ಲೆಕ್ಕ ಪರಿಶೋಧಕರು – ಯಶೋಧರ್ ಜೋಗಿ ಬೆಟ್ಟು ಸಾಂಸ್ಕೃತಿಕ ಕಾರ್ಯದರ್ಶಿ – ಸತೀಶ್ ಪಜೀರು, ಕ್ರೀಡಾ ಕಾರ್ಯದರ್ಶಿ – ಗುಣಪಾಲ್, ಸಂಘಟನಾ ಕಾರ್ಯದರ್ಶಿ – ಮಿಥುನ್ ಪಜೀರು , ಮನೋಜ್ ಜೋಗಿಬೆಟ್ಟು ಆಯ್ಕೆಗೊಂಡರು,.

ಗೌರವ ಸಲಹೆಗಾರರಾಗಿ – ಸೇಸಪ್ಪ ಟೈಲರ್, ವಸಂತ ಜಿ, ತಾರಾನಾಥ ವರ್ಮಾ, ಜಯಾನಂದ ಶೆಟ್ಟಿ, ಮತ್ತು ನಿರ್ಮಲ್ ಭಟ್ ಇದ್ದರು.

# ಉಳ್ಳಾಲದಲ್ಲಿ ಬುರ್ಖಾ ಧರಿಸಿಕೊಂಡು ತಲೆಮರೆಸುತ್ತಿದ್ದ ಕುಖ್ಯಾತ ಸುರ್ಮಾ ಇಮ್ರಾನ್ ಕೊನೆಗೂ ಪೊಲೀಸ್ ಬಲೆಗೆ



**ಉಳ್ಳಾಲ:** ಬುರ್ಖಾ ಧರಿಸಿಕೊಂಡು ಪೊಲೀಸರ ಕಣ್ತಪ್ಪಿಸಿ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡು ಓಡಾಡುತ್ತಿದ್ದ ಕುಖ್ಯಾತ ರೌಡಿ ಇಮ್ರಾನ್ ಯಾನೆ ಸುರ್ಮೋ ಇಮ್ರಾನ್ ಎಂಬಾತನನ್ನು ಉಳ್ಳಾಲದ ಪೊಲೀಸರ ತಂಡ ಬಂಧಿಸಿದೆ.

ದರ್ಗಾ ರಸ್ತೆಯ ಮೇಲಂಗಡಿ ನಿವಾಸಿ ಸುರ್ಮಾ ಇಮ್ರಾನ್ ನನ್ನು ಪೊಲೀಸರು ಬಂಧಿಸಿದ್ದಾರೆ. ಮಂಗಳೂರು ನಗರ ಮತ್ತು ಉಡುಪಿ ಜಿಲ್ಲೆಯ ಒಟ್ಟು 23 ಪ್ರಕರಣಗಳಲ್ಲಿ ಭಾಗಿಯಾಗಿ, ಹಲವು ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯದಿಂದ ವಾರಂಟ್‌ಗಳಿದ್ದರೂ ಹಾಜರಾಗದೆ ಪೊಲೀಸರಿಂದ ತಪ್ಪಿಸಿಕೊಳ್ಳುತ್ತಿದ್ದ ಈತ ಬುರ್ಖಾ ಹಾಕಿಕೊಂಡು ತಲೆಮರೆಸಿಕೊಳ್ಳುತ್ತಿದ್ದ. ಪೊಲೀಸರು ಹುಡುಕಾಡುತ್ತಿದ್ದರೂ ಪತ್ತೆಯಾಗದ ಈತನ ಕುರಿತು ಮಾಹಿತಿ ಸಂಗ್ರಹಿಸಿದಾಗ ಬುರ್ಖಾ ಧರಿಸಿಕೊಂಡು ತಲೆಮರೆಸಿಕೊಳ್ಳುತ್ತಿರುವುದು ಬೆಳಕಿಗೆ ಬಂದಿತ್ತು. ಅದರಂತೆ ಮಂಗಳೂರಿನಿಂದ ಮನೆಯತ್ತ ಬರುವ ಸಂದರ್ಭ ಉಳ್ಳಾಲದ 12 ಮಂದಿ ಪೊಲೀಸ್ ತಂಡ ಸಿನಿಮೀಯ ಶೈಲಿಯಲ್ಲಿ ಬೇಧಿಸಿ ಬಂಧಿಸಿದೆ. ಈತನ ವಿರುದ್ಧ ಮಂಗಳೂರು ಗ್ರಾಮಾಂತರ, ಉಡುಪಿ, ಬರ್ಕೆ ಹಾಗೂ ಉಳ್ಳಾಲ ಪೊಲೀಸ್ ಠಾಣೆಗಲ್ಲಿ 23 ಕ್ಕೂ ಅಧಿಕ ಪ್ರಕರಣಗಳು ಇವೆ.

# ಕಲ್ಲಾಪು ಬುರ್ದುಗೋಳಿ ಕ್ಷೇತ್ರದಲ್ಲಿ ಹರಕೆ ಕೋಲ ತೀರಿಸಿದ ಮಾಜಿ ಸಚಿವ ಸುನಿಲ್ ಕುಮಾರ್

**ಉಳ್ಳಾಲ:** ಕಲ್ಲಾಪು ಬುರ್ದುಗೋಳಿಯ ಶ್ರೀ ಗುಳಿಗ ಕೊರಗಜ್ಜ ಉದ್ಭವ ಶಿಲೆಯ ಆದಿಸ್ಥಳಕ್ಕೆ ಮಾಜಿ ಸಚಿವ, ಕಾರ್ಕಳ ಶಾಸಕ ವಿ.ಸುನಿಲ್ ಕುಮಾರ್ ಕುಟುಂಬ ಸಮೇತರಾಗಿ ಸೋಮವಾರ ಭೇಟಿ ನೀಡಿ ತಮ್ಮ ಹರಕೆಯ ಕೋಲದಲ್ಲಿ ಭಾಗವಹಿಸಿದರು.



■ ಬುರ್ದು ಗೋಳಿಯ ಶ್ರೀ ಗುಳಿಗ ಕೊರಗಜ್ಜ ಉದ್ಭವ ಶಿಲೆಯ ಆದಿಸ್ಥಳಕ್ಕೆ ಮಾಜಿ ಸಚಿವ, ಕಾರ್ಕಳ ಶಾಸಕ ವಿ.ಸುನಿಲ್ ಕುಮಾರ್ ಕುಟುಂಬ ಸಮೇತರಾಗಿ ಭೇಟಿ

ಈ ಸಂದರ್ಭ ವಿಧಾನಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ, ಕೊಲ್ಯ ಮೂಕಾಂಬಿಕಾ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಚಂದ್ರಹಾಸ್ ಪಂಡಿತ್‌ಹೌಸ್, ಬಿಲ್ಲವ ಬ್ರಿಗೇಡ್ ಸಂಚಾಲಕ ಸದಾನಂದ ಪೂಜಾರಿ, ಬಿಜೆಪಿ ಕ್ಷೇತ್ರ ಅಧ್ಯಕ್ಷ ಜಗದೀಶ್ ಕುವೆತ್ತಬೈಲ್, ಹಿಂದುಳಿದ ವರ್ಗಗಳ ಆಯೋಗದ ಮಾಜಿ ನಿರ್ದೇಶಕ ಕೆ.ಟಿ.ಸುವರ್ಣ, ಮುಖಂಡರುಗಳಾದ ಚಂದ್ರಹಾಸ್ ಉಳ್ಳಾಲ್, ಚಂದ್ರಹಾಸ್ ಅಡ್ಯಂತಾಯ, ಚಂದ್ರಶೇಖರ್ ಉಚ್ಚಿಲ್, ಶ್ರೀ ಬುರ್ದುಗೋಳಿ ಟ್ರಸ್ಟ್ ಅಧ್ಯಕ್ಷ ವಿಶ್ವನಾಥ ನಾಯಕ್, ಕ್ಷೇತ್ರದ ಮಧ್ಯಸ್ಥರಾದ ದೇವದಾಸ್ ಕಾಯಂಗಳ, ವಿ.ಹಿಂ.ಪ ಮುಖಂಡ ಶರಣ್ ಪಂಪ್ವೆಲ್, ಬಜರಂಗದಳದ ಪುನೀತ್ ಅತ್ತಾವರ್, ಬಿಜೆಪಿ ಕ್ಷೇತ್ರ ಪ್ರ. ಕಾ. ದಯಾನಂದ ತೊಕ್ಕೊಟ್ಟು, ಕಾರ್ಕಳದ ಮುಖಂಡರುಗಳಾದ ಉದಯ ಪೂಜಾರಿ ನಗ್ರಿಕಾಂಜಿಲ, ಸಂದೀಪ್ ಪೂಜಾರಿ, ಸೂರಜ್ ಕುಮಾರ್ ಕಲ್ಯ, ಯಶವಂತ್ ಕಡೇಶ್ವಾಲ್ಯ, ನಿಶಾಂತ್ ಪೂಜಾರಿ ಉಳ್ಳಾಲ, ಯಶವಂತ್ ದೇರಾಜೆ, ವಿವೇಕ್ ಎಲಿಗ್ಯಾಂಟ್, ರಕ್ಷಿತ್ ಕೆ.ಪೂಜಾರಿ, ಸೂರಜ್ ಕಲ್ಯ ಉಪಸ್ಥಿತರಿದ್ದರು.

# ಬಿಲ್ಲವ ಸೇವಾ ಸಮಾಜ ಟ್ರಸ್ಟ್‌ಗೆ ಶೇಷಪ್ಪ ಬೈದ್ಯಮನೆ ಅಧ್ಯಕ್ಷರಾಗಿ ಆಯ್ಕೆ

**ಉಳ್ಳಾಲ:** ಬಿಲ್ಲವ ಸೇವಾ ಸಮಾಜ ಟ್ರಸ್ಟ್ , ಕೊಲ್ಯ ಸೋಮೇಶ್ವರ (ಕೋಟೆಕಾರ್, ಕಿನ್ಯಾ, ತಲಪಾಡಿ, ಪೆರ್ಮನ್ನೂರು, ಮುನ್ನೂರು, ಉಳ್ಳಾಲ ಹಾಗೂ ಸೋಮೇಶ್ವರ ವ್ಯಾಪ್ತಿಯ) ಇದರ 2026–27ನೇ ಸಾಲಿನ ನೂತನ ಅಧ್ಯಕ್ಷರಾಗಿ ಶೇಷಪ್ಪ ಬೈದ್ಯಮನೆ, ಕೋಟೆಕಾರ್ ಅವರು ಆಯ್ಕೆಯಾಗಿದ್ದಾರೆ.



ಜೂನ್ 5ರಂದು ಸಂಜೆ 4 ಗಂಟೆಗೆ ನಡೆದ ಟ್ರಸ್ಟ್‌ನ ಸಭೆಯಲ್ಲಿ ನಿಕಟಪೂರ್ವ ಅಧ್ಯಕ್ಷ ವೇಣುಗೋಪಾಲ ಕೊಲ್ಯ ಅವರ ಉಪಸ್ಥಿತಿಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು.

ಈ ಸಂದರ್ಭದಲ್ಲಿ ಈಶ್ವರ ಸುವರ್ಣ ಅವರನ್ನು ಗೌರವಾಧ್ಯಕ್ಷರಾಗಿ, ವೇಣುಗೋಪಾಲ ಕೊಲ್ಯ ಅವರನ್ನು ಕಾರ್ಯಾಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಆನಂದ ಕೊಂಡಾಣ, ತಿಮ್ಮಪ್ಪ ಅಂಚನ್ ತೊಕ್ಕೊಟ್ಟು ಹಾಗೂ ಪುರುಷೋತ್ತಮ ಅಡ್ಕ ಅವರು ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ತುಕಾರಾಮ ಎನ್., ಜೊತೆ ಕಾರ್ಯದರ್ಶಿಯಾಗಿ ಗಣೇಶ್ ಎಸ್.ಜಿ.ಕೆ. ಕನೀರುತೋಟ ಹಾಗೂ ಕೋಶಾಧಿಕಾರಿಯಾಗಿ ಮುತ್ತಪ್ಪ ಪೂಜಾರಿ ಕುಂಪಲ ಅವರನ್ನು ಆಯ್ಕೆ ಮಾಡಲಾಗಿದೆ.

ಟ್ರಸ್ಟಿಗಳಾಗಿ ಚಂದ್ರಹಾಸ ಬಿ., ಡಿ.ಎನ್. ರಾಘವ, ಮಾಧವ ಕುಂದರ್, ಬಾಳಪ್ಪ ಪೂಜಾರಿ, ಸೀತಾರಾಮ ಎಸ್. ಕರ್ಕೇರ, ಕೆ.ಪಿ. ಸುರೇಶ್, ಪದ್ಮನಾಭ ಕೊಲ್ಯ, ಜಯರಾಮ ಪಿ. ಅಕೂರು ಹಾಗೂ ಹರೀಶ್ ಮುಂಡೋಳಿ ಅವರು ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ಶೇಷಪ್ಪ ಬೈದ್ಯಮನೆ ಅವರು ಟ್ರಸ್ಟ್‌ನ ಸಾಮಾಜಿಕ, ಶೈಕ್ಷಣಿಕ ಹಾಗೂ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಸಲು ಎಲ್ಲರ ಸಹಕಾರದೊಂದಿಗೆ ಕಾರ್ಯನಿರ್ವಹಿಸುವುದಾಗಿ ತಿಳಿಸಿದರು. ನೂತನ ಪದಾಧಿಕಾರಿಗಳಿಗೆ ಸದಸ್ಯರು ಅಭಿನಂದನೆ ಸಲ್ಲಿಸಿ ಶುಭ ಹಾರೈಸಿದರು.

# ಒಂದು ದಿನ ಚರ್ಚಿಸಿ ಸೌಹಾರ್ದಯುತವಾಗಿ ಮುಂದುವರಿಯುವ: ಸಚಿವ ಯು.ಟಿ.ಖಾದರ್

## ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ ಮನವಿ



**ಉಳ್ಳಾಲ:** ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿಯ ಸದಸ್ಯರು ವಿವಿಧ ಬೇಡಿಕೆಗಳ ಈಡೇರಿಕೆಯ ಕುರಿತಂತೆ ಮನವಿ ನೀಡಿದ್ದು, ಈ ಬೇಡಿಕೆಗಳ ಈಡೇರಿಕೆಗೆಗಾಗಿ ಒಂದು ದಿನ ಸಭೆ ನಡೆಸಿ ಚರ್ಚಿಸಿ,ಸೌಹಾರ್ದಯುತವಾಗಿ ಮುಂದುವರೆಯೋಣವೆಂದು ಅಬ್ಬಕ್ಕ ಉತ್ಸವ ಸಮಿತಿಯ ಗೌರವಾಧ್ಯಕ್ಷರು,ಆರೋಗ್ಯ ಸಚಿವರಾದ ಯು.ಟಿ.ಖಾದರ್ ಹೇಳಿದರು.

ಆರೋಗ್ಯ ಸಚಿವರಾಗಿ ಅಧಿಕಾರ ವಹಿಸಿದ ಬಳಿಕ ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ,ಉಳ್ಳಾಲ ವಲಯ ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ ,ಲಯನ್ಸ್ ಕ್ಲಬ್ ಪೆರ್ಮನ್ನೂರು ಇದರ ಸಂಯುಕ್ತ ಆಶ್ರಯದಲ್ಲಿ ಕುತ್ತಾರಿನ ಖಾಸಗಿ ಸಭಾಂಗಣದಲ್ಲಿ ಸೋಮವಾರದಂದು ನಡೆದ ಗೌರವ ಸನ್ಮಾನವನ್ನು ಸ್ವೀಕರಿಸಿ ಅವರು ಮಾತನಾಡಿದರು.

ಮಾಜಿ ಶಾಸಕರಾದ ಕೆ.ಜಯರಾಮ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿದರು. ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ ಅಧ್ಯಕ್ಷರಾದ ದಿನಕರ್ ಉಳ್ಳಾಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.ಉಳ್ಳಾಲ ವಲಯ ಸೌತ್ ಕೆನರಾ ಫೋಟೋ ಗ್ರಾಫರ್ಸ್ ಅಸೋಸಿಯೇಶನ್ ಅಧ್ಯಕ್ಷರಾದ ರಾಜೇಶ್ ಉಳ್ಳಾಲ,ಪೆರ್ಮನ್ನೂರು ಲಯನ್ಸ್ ಕ್ಲಬ್ ಅಧ್ಯಕ್ಷರಾದ ಸಿಸಿಲಿಯಾ ಮೊಂತೇರೊ,ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಸದಸ್ಯರಾದ ಆನಂದ. ಕೆ ಅಸೈಗೋಳಿ,ಉಳ್ಳಾಲ ತಾಲೂಕು ಮಹಿಳಾ ಮಂಡಲಗಳ ಒಕ್ಕೂಟದ ಅಧ್ಯಕ್ಷರಾದ ದೇವಕಿ.ಆರ್ ಉಳ್ಳಾಲ,ಉಳ್ಳಾಲ ಮೊಗವೀರ ಸಂಘದ ಮಾಜಿ ಅಧ್ಯಕ್ಷರಾದ ಸದಾನಂದ ಬಂಗೇರ,ಅಬ್ಬಕ್ಕ ಉತ್ಸವ ಸಮಿತಿಯ ಉಪಾಧ್ಯಕ್ಷರಾದ ಯು.ಪಿ.ಆಲಿಯಬ್ಬ ಮೊದಲಾದವರು ಉಪಸ್ಥಿತರಿದ್ದರು. ಅಬ್ಬಕ್ಕ ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಧನಲಕ್ಷ್ಮಿ ಗಟ್ಟಿ ಸ್ವಾಗತಿಸಿದರು.ಕೆಎಮ್ ಕೆ ಮಂಜನಾಡಿ ಕಾರ್ಯಕ್ರಮ ನಿರೂಪಿಸಿದರು.

ಕರ್ನಾಟಕ ಸರ್ಕಾರದಿಂದ ರೂ. 50 ಲಕ್ಷ ವಿಶೇಷ ಅನುದಾನ ಬಿಡುಗಡೆಗೆ ಶಿಫಾರಸ್ಸು ನಡೆಸಿ 1997ರಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಆರಂಭಗೊಂಡ ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿಯು 2027ರಲ್ಲಿ 30ನೇ ವರ್ಷವನ್ನು ಪೂರ್ಣಗೊಳಿಸುತ್ತಿದ್ದು, ಈ ಅಂಗವಾಗಿ ರಾಜ್ಯಮಟ್ಟದಲ್ಲಿ ಸಾಹಿತ್ಯ, ಸಾಂಸ್ಕೃತಿಕ, ಕ್ರೀಡಾ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ. ಕಳೆದ ಆರು ವರ್ಷಗಳಿಂದ ಯಾವುದೇ ಸರ್ಕಾರಿ ಅನುದಾನವಿಲ್ಲದೆ ಸಾರ್ವಜನಿಕರ ದೇಣಿಗೆಯ ಮೂಲಕ ಅಬ್ಬಕ್ಕ ಉತ್ಸವವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದು, ದೇಣಿಗೆ ಸಂಗ್ರಹಿಸುವುದು ಕಷ್ಟಕರವಾಗಿರುವ ಹಿನ್ನೆಲೆಯಲ್ಲಿ 30ನೇ ವರ್ಷದ ಉತ್ಸವದ ಯಶಸ್ವಿ ಆಯೋಜನೆಗಾಗಿ ಕರ್ನಾಟಕ ಸರ್ಕಾರದಿಂದ ₹50 ಲಕ್ಷ ವಿಶೇಷ ಅನುದಾನ ಬಿಡುಗಡೆ ಮಾಡಲು ಶಿಫಾರಸು ನಡೆಸಬೇಕು. ಅಬ್ಬಕ್ಕಳ ಇತಿಹಾಸ ಮತ್ತು ಕೊಡುಗೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ , ಮಂಗಳೂರು ಸೆಂಟ್ರಲ್ ಅಥವಾ ಮಂಗಳೂರು ಜಂಕ್ಷನ್ ರೈಲ್ವೆ ನಿಲ್ದಾಣಕ್ಕೆ ಅ, ಮಂಗಳೂರು–ಬೆಂಗಳೂರು ರೈಲಿಗೆ , ಮಂಗಳೂರು ಹಾಗೂ ಬೆಂಗಳೂರಿನಲ್ಲಿ ತಲಾ ಒಂದು ರಸ್ತೆಗೆ , ರಾಷ್ಟ್ರೀಯ ಹೆದ್ದಾರಿ–66ರ ತೊಕ್ಕೊಟ್ಟು ಫ್ಲೈಓವರ್‌ಗೆ, ರಾಷ್ಟ್ರೀಯ ಹೆದ್ದಾರಿ–66ರ ಉಳ್ಳಾಲ ಓವರ್‌ಬ್ರಿಡ್ಜ್ ಹೊಸ ಜಂಕ್ಷನ್‌ಗೆ, ರಾಜ್ಯ ಹೆದ್ದಾರಿಯ ತೊಕ್ಕೊಟ್ಟು ಓವರ್‌ಬ್ರಿಡ್ಜ್‌ನಿಂದ ಉಳ್ಳಾಲ ಅಬ್ಬಕ್ಕ ಸರ್ಕಲ್‌ವರೆಗಿನ ರಸ್ತೆಗೆ ವೀರರಾಣಿ ಅಬ್ಬಕ್ಕಳ

# ಸೇಂಟ್ ಅಲೋಶಿಯಸ್ ಗೊಂಜಾಗಾ ಶಾಲೆ ವಿದ್ಯಾರ್ಥಿ ನಟಿಸಿದ 'ಮಿಥ್ಯ' ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ

**ಮಂಗಳೂರು:** ರಾಷ್ಟ್ರಪ್ರಶಸ್ತಿ ಪಡೆದ ಮಿಥ್ಯ ಚಲನಚಿತ್ರದಲ್ಲಿ ಸೇಂಟ್ ಅಲೋಶಿಯಸ್ ಗೊಂಜಾಗಾ ಶಾಲೆಯ 3ನೇ ತರಗತಿ ವಿದ್ಯಾರ್ಥಿ ಮಾಸ್ಟರ್ ಅವಿಶ್ ಶೆಟ್ಟಿ ನಟಿಸಿದ್ದು, ಈತನ ಸಹೋದರ ಆತೀಶ್ ಶೆಟ್ಟಿ ಅದೇ ಚಿತ್ರದಲ್ಲಿ ನಟಿಸಿ ಉತ್ತಮ ಬಾಲನಟ ರಾಷ್ಟ್ರಪ್ರಶಸ್ತಿಯನ್ನು ಪಡೆದುಕೊಂಡಿದ್ದು, ಆತನ ಜತೆಗೆ ಅವಿಶ್ ನಟಿಸಿರುವುದು ಸಂಸ್ಥೆಗೆ ಹೆಮ್ಮೆಯನ್ನು ತಂದುಕೊಟ್ಟಿದೆ.

'ಮಿಥ್ಯ' ಚಿತ್ರವು ಅತ್ಯುತ್ತಮ ಕನ್ನಡ ಚಲನಚಿತ್ರ, ಅತ್ಯುತ್ತಮ ಬಾಲನಟ, ಹಾಗೂ ಅತ್ಯುತ್ತಮ ಪೋಷಕ ನಟಿ ವಿಭಾಗಗಳಲ್ಲಿ ಒಟ್ಟು ಮೂರು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ. ಚಿತ್ರದಲ್ಲಿ ಅವಿಶ್ ಶೆಟ್ಟಿ ನಾಯಕ ಪಾತ್ರದ ಕಿರಿಯ ಸಹೋದರನಾಗಿ ಅಭಿನಯಿಸಿದ್ದರು. ಆದರೆ ನಿಜ ಜೀವನದಲ್ಲಿಯೂ ಅತೀಶ್ ಮತ್ತು ಅವೀಶ್ ಶೆಟ್ಟಿ ಸಹೋದರರಾಗಿದ್ದಾರೆ. ಇಬ್ಬರು ಸಹೋದರರು ಒಂದೇ ಚಿತ್ರದಲ್ಲಿ ಅಭಿನಯಿಸಿರುವುದು ವಿಶೇಷ ಆಕರ್ಷಣೆಯಾಗಿದೆ.




ಈ ಸಾಧನೆಗೆ ಸೇಂಟ್ ಅಲೋಶಿಯಸ್ ಗೊಂಜಾಗಾ ಶಾಲೆಯ ಪ್ರಾಂಶುಪಾಲರು, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಅವಿಶ್ ಶೆಟ್ಟಿ, ಅವರ ಪೋಷಕರು, ಖ್ಯಾತ ನಿರ್ದೇಶಕ ಸುಮಂತ್ ಭಟ್, ನಿರ್ಮಾಪಕ ರಕ್ಷಿತ್ ಶೆಟ್ಟಿ, 'ಮಿಥ್ಯ' ಚಿತ್ರದ ಕಲಾವಿದರು ಹಾಗೂ ತಾಂತ್ರಿಕ ವರ್ಗದ ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ.

# ಮಂಗಳೂರು ಟ್ರಾಲ್ ಬೋಟ್ ಮೀನುಗಾರರ ಸಂಘದ ಅಧ್ಯಕ್ಷರಾಗಿ ರಾಜೇಶ್ ಪುತ್ರನ್ ಉಳ್ಳಾಲ ಆಯ್ಕೆ

**ಮಂಗಳೂರು:** ದ. ಕ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬ್ರದರ್ಸ್ ಯುವಕ ಮಂಡಲದ ಅಧ್ಯಕ್ಷರು, ಉಳ್ಳಾಲ ಮೊಗವೀರ ಸಂಘದ ಮಾಜಿ ಜೊತೆ ಕಾರ್ಯದರ್ಶಿ, ಮೊಗವೀರ ಸಮುದಾಯದ ಯುವ ನಾಯಕರಾಗಿ ಮೂಡಿಬರುತ್ತಿರುವ ರಾಜೇಶ್ ಪುತ್ರನ್ ಉಳ್ಳಾಲ ಇವರು ಮಂಗಳೂರು ಟ್ರಾಲ್ ಬೋಟ್ ಮೀನುಗಾರರ ಸಂಘ (ರಿ) ದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



ಈ ಹಿಂದೆ ಉಳ್ಳಾಲ ಬ್ರದರ್ಸ್ ಯುವಕ ಮಂಡಲದ ಅಧ್ಯಕ್ಷರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಸಮಾಜಮುಖಿ ಚಟು ವಟಿಕೆಗಳ ಮೂಲಕ ಉತ್ತಮ ನಾಯಕತ್ವವನ್ನು ಪ್ರದರ್ಶಿಸಿದ್ದಾರೆ. ಸಂಘದ ಅಭಿವೃದ್ಧಿ, ಮೀನುಗಾರರ ಹಿತಾಸಕ್ತಿ ಹಾಗೂ ಸಮಸ್ಯೆಗಳ ಪರಿಹಾರಕ್ಕೆ ಸದಾ ಶ್ರಮಿಸುತ್ತಿರುವ ಅವರು ಇದೀಗ ಟ್ರಾಲ್ ಬೋಟ್ ಮೀನುಗಾರರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಮೀನುಗಾರ ಸಮುದಾಯಕ್ಕೆ ಸಂತಸದ ವಿಚಾರವಾಗಿದೆ.

ಅವರ ಅಧಿಕಾರಾವಧಿಯಲ್ಲಿ ಮೀನುಗಾರರಿಗೆ ಇನ್ನಷ್ಟು ಸೌಲಭ್ಯಗಳು, ಸರ್ಕಾರಿ ಯೋಜನೆಗಳ ಸಮರ್ಪಕ ಅನುಷ್ಠಾನ ಹಾಗೂ ಸಂಘದ ಅಭಿವೃದ್ಧಿಗೆ ಹೊಸ ಆಯಾಮಗಳು ದೊರೆಯಲಿ ಎಂದು ಸದಸ್ಯರು ಆಶಯ ವ್ಯಕ್ತಪಡಿಸಿದ್ದಾರೆ.

# ಕೆ.ಎಸ್.ಹೆಗ್ಡೆಯಲ್ಲಿ ಯಶಸ್ವಿ ರೋಬೋಟಿಕ್ ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್ ಶಸ್ತ್ರಚಿಕಿತ್ಸೆ

**ಉಳ್ಳಾಲ:** ಕೆ.ಎಸ್ ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ತಜ್ಞ ವೈದ್ಯರು ಮೇದೋಜ್ಜೀರಕ ಗ್ರಂಥಿ (ಪ್ಯಾಂಕ್ರಿಯಾಟಿಕ್) ಕ್ಯಾನ್ಸರ್‌ನಿಂದ ಬಳಲುತ್ತಿದ್ದ 57 ವರ್ಷದ ರೋಗಿಗೆ ಅತ್ಯಾಧುನಿಕ ರೋಬೋಟಿಕ್ ವಿಪ್ಪಲ್ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆಸುವ ಮೂಲಕ ಮತ್ತೊಂದು ಮಹತ್ವದ ವೈದ್ಯಕೀಯ ಸಾಧನೆ ಮಾಡಿದ್ದಾರೆ.




ಹೊಟ್ಟೆನೋವು, ಕಾಮಾಲೆ ಹಾಗೂ ತೂಕ ಇಳಿಕೆಯ ಸಮಸ್ಯೆಯಿಂದ ಬಳಲುತ್ತಿದ್ದ ರೋಗಿಯು ಕೆ. ಎಸ್. ಹೆಗ್ಡೆ ಆಸ್ಪತ್ರೆಗೆ ದಾಖಲಾಗಿದ್ದರು. ವೈದ್ಯಕೀಯ ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಚಂದ್ರಶೇಖರ್ ಸೊರಕೆ ಅವರು ಪರೀಕ್ಷಿಸಿದ ಬಳಿಕ ಸಿಟಿ ಸ್ಕ್ಯಾನ್, ಎಂಡೋಸ್ಕೋಪಿಕ್ ಅಲ್ಟ್ರಾಸೌಂಡ್ ಹಾಗೂ ಬಯಾಪ್ಸಿ ಪರೀಕ್ಷೆಗಳನ್ನು ನಡೆಸಲಾಯಿತು. ಈ ಪರೀಕ್ಷೆಗಳಲ್ಲಿ ರೋಗಿಗೆ ಮುಂದುವರಿದ ಹಂತದ ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್ ಇರುವುದು ದೃಢಪಟ್ಟಿತು.

ಕ್ಯಾನ್ಸರ್ ಮುಂದುವರಿದ ಹಂತದಲ್ಲಿದ್ದ ಕಾರಣ, ಶಸ್ತ್ರಚಿಕಿತ್ಸೆಗೆ ಮುನ್ನ ಗಡ್ಡೆಯ ಗಾತ್ರವನ್ನು ಕಡಿಮೆಗೊಳಿಸಲು ಕೀಮೋಥೆರಪಿ ನೀಡಲು ನಿರ್ಧರಿಸಲಾಯಿತು.

ವೈದ್ಯಕೀಯ ಆಂಕಾಲಜಿಸ್ಟ್ ಡಾ. ವಿಜಿತ್ ಶೆಟ್ಟಿ ಅವರ ಮಾರ್ಗದರ್ಶನದಲ್ಲಿ ನಾಲ್ಕು ಸುತ್ತಿನ ಕೀಮೋಥೆರಪಿ ನೀಡಲಾಯಿತು. ನಂತರ ನಡೆಸಿದ ಪಿಇಟಿ ಸ್ಕ್ಯಾನ್ ಪರೀಕ್ಷೆಯಲ್ಲಿ ಗಡ್ಡೆಯ ಗಾತ್ರ ಗಮನಾರ್ಹವಾಗಿ ಕುಗ್ಗಿರುವುದು ಕಂಡುಬಂದಿದ್ದು, ಚಿಕಿತ್ಸೆಗೆ ಉತ್ತಮ ಪ್ರತಿಕ್ರಿಯೆ ದೊರೆತಿತ್ತು.

ಕೆ. ಎಸ್. ಹೆಗ್ಡೆ ಆಸ್ಪತ್ರೆಯಲ್ಲಿ ಲಭ್ಯವಿರುವ ಅತ್ಯಾಧುನಿಕ ಡಾವಿಂಚಿ ರೋಬೋಟಿಕ್ ಶಸ್ತ್ರಚಿಕಿತ್ಸಾ ವ್ಯವಸ್ಥೆ ಬಳಸಿ ರೋಗಿಗೆ ರೋಬೋಟಿಕ್ ಸಹಾಯದೊಂದಿಗೆ ವಿಪ್ಪಲ್ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಶಸ್ತ್ರಚಿಕಿತ್ಸೆಯನ್ನು ಶಸ್ತ್ರಚಿಕಿತ್ಸಾ ಗ್ಯಾಸ್ಟ್ರೋಎಂಟರಾಲಜಿ ಹಾಗೂ ಆಂಕೋಸರ್ಜರಿ ವಿಭಾಗದ ಡಾ. ಸಂತೋಷ್ ಕುಮಾರ್ ಕೆ. ವೈ. ಮತ್ತು ಡಾ. ಪ್ರವೀಣ್ ಕುಮಾರ್ ಆರ್. ಭಟ್ ನೇತೃತ್ವದಲ್ಲಿ ನುರಿತ ನರ್ಸ್‌ಗಳು ಹಾಗೂ ಸಹಾಯಕ ಸಿಬ್ಬಂದಿ ತಂಡ ಯಶಸ್ವಿಯಾಗಿ ನೆರವೇರಿಸಿತು. ಸುಮಾರು ಒಂಬತ್ತು ಗಂಟೆಗಳ ಕಾಲ ನಡೆದ ಈ ಕ್ಲಿಷ್ಟಕರ ಶಸ್ತ್ರಚಿಕಿತ್ಸೆಯಲ್ಲಿ ಅತ್ಯಂತ ಕಡಿಮೆ ರಕ್ತಸ್ರಾವವಾಗಿದ್ದು, ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು.

ಅರಿವಳಿಕೆ ಮತ್ತು ತೀವ್ರ ನಿಗಾ ವಿಭಾಗದ ಮುಖ್ಯಸ್ಥ ಡಾ. ಅವಿನಾಶ್ ಭಂಡಾರಿ, ಡಾ. ಗೋವಿಂದರಾಜ್ ಭಟ್, ಡಾ. ಜಾಯ್ಲೀನ್ ಡಿ'ಸೋಜಾ ಹಾಗೂ ಡಾ. ರಂಜನ್ ನಾಯಕ್ ಅವರ ತಂಡ ಯಶಸ್ವಿಯಾಗಿ ನಿರ್ವಹಿಸಿದರು.

ಈ ಕುರಿತು ಮಾತನಾಡಿದ ಡಾ. ಸಂತೋಷ್ ಕುಮಾರ್ ಅವರು, "ರೋಬೋಟಿಕ್ ಶಸ್ತ್ರಚಿಕಿತ್ಸೆಯಲ್ಲಿ ಶಸ್ತ್ರಚಿಕಿತ್ಸಕರಿಗೆ ಅತ್ಯಂತ ಸ್ಪಷ್ಟ ಹಾಗೂ ವಿಸ್ತೃತ ದೃಶ್ಯಾವಳಿ ದೊರೆಯುತ್ತದೆ. ಅತ್ಯಾಧುನಿಕ ಉಪಕರಣಗಳ ನೆರವಿನಿಂದ ಅತ್ಯಂತ ನಿಖರವಾಗಿ ಶಸ್ತ್ರಚಿಕಿತ್ಸೆ ನಡೆಸಲು ಸಾಧ್ಯವಾಗುತ್ತದೆ. ಇದರಿಂದ ರಕ್ತಸ್ರಾವ ಕಡಿಮೆ ಯಾಗುವುದರೊಂದಿಗೆ ರೋಗಿಯ ಚೇತರಿಕೆಯೂ ವೇಗವಾಗುತ್ತದೆ," ಎಂದು ತಿಳಿಸಿದರು.

## ಮದ್ರಸ ಅಧ್ಯಾಪಕರ ಮೇಲಿನ ಹಲ್ಲೆ ಖಂಡನೀಯ: ಉಳ್ಳಾಲದರ್ಗಾ ಸಮಿತಿ

**ಉಳ್ಳಾಲ:** ಮದ್ರಸ ಅಧ್ಯಾಪಕರ ಮೇಲೆ ನಡೆದಿರುವ ಹಲ್ಲೆಯ ಘಟನೆಯು ಅತ್ಯಂತ ಖಂಡನೀಯ ಹಾಗೂ ನಾಗರಿಕ ಸಮಾಜ ತಲೆತಗ್ಗಿಸುವಂತಹ ಕೃತ್ಯವಾಗಿದೆ. ಈ ಘಟನೆಯನ್ನು ಉಳ್ಳಾಲ ಜುಮಾ ಮಸ್ಜಿದ್ ಮತ್ತು ಸಯ್ಯಿದ್ ಮದನಿ ದರ್ಗಾ ಸಮಿತಿ ತೀವ್ರವಾಗಿ ಖಂಡಿಸುತ್ತದೆ.

ಶಿಕ್ಷಕರು ಸಮಾಜದ ನೈತಿಕತೆ, ಜ್ಞಾನ ಮತ್ತು ಸಂಸ್ಕಾರದ ಶಿಲ್ಪಿಗಳಾಗಿದ್ದಾರೆ. ಅಂತಹ ಶಿಕ್ಷಕರ ಮೇಲೆ ಹಲ್ಲೆ ನಡೆಸುವುದು ಕೇವಲ ಒಬ್ಬ ವ್ಯಕ್ತಿಯ ಮೇಲಿನ ದಾಳಿಯಲ್ಲ; ಅದು ಶಿಕ್ಷಣ ವ್ಯವಸ್ಥೆ, ಸಾಮಾಜಿಕ ಮೌಲ್ಯಗಳು ಹಾಗೂ ಶಾಂತಿಯುತ ಸಹಬಾಳ್ವೆಯ ಮೇಲಿನ ನೇರ ದಾಳಿಯಾಗಿದೆ.

ಪ್ರಸಕ್ತ ಘಟನೆಯ ಆರೋಪಿಯನ್ನು ಕೂಡಲೇ ಬಂಧಿಸಿ, ಆತನ ಮೇಲೆ ಕಾನೂನಿನ ಪ್ರಕಾರ ಯಾವುದೇ ಒತ್ತಡ ಅಥವಾ ಪ್ರಭಾವಕ್ಕೆ ಒಳಗಾಗದೆ ಕಠಿಣ ಕ್ರಮ ಕೈಗೊಳ್ಳಬೇಕು. ಸಂತ್ರಸ್ತ ಶಿಕ್ಷಕರಿಗೆ ಶೀಘ್ರ ನ್ಯಾಯ ದೊರಕುವಂತೆ ಸಂಬಂಧಿಸಿದ ಅಧಿಕಾರಿಗಳು ಕ್ರಮವಹಿಸಬೇಕು ಎಂದು ದರ್ಗಾ ಸಮಿತಿ ಆಗ್ರಹಿಸಿದೆ.

ಶಿಕ್ಷಕರ ಗೌರವವನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಹೊಣೆಗಾರಿಕೆ. ಶಿಕ್ಷಕರ ಮೇಲಿನ ಯಾವುದೇ ರೀತಿಯ ಹಿಂಸೆ ಅಥವಾ ದೌರ್ಜನ್ಯವನ್ನು ಸಮಾಜವು ಸಹಿಸುವುದಿಲ್ಲ.

ಇಂತಹ ಅಹಿತಕರ ಘಟನೆಗಳು ಸಮಾಜದಲ್ಲಿ ಮರುಕಳಿಸದಂತೆ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ಜಾರಿಗೊಳಿಸಿ, ಶಿಕ್ಷಕರು ತಮ್ಮ ಕರ್ತವ್ಯವನ್ನು ನಿರ್ಭಯವಾಗಿ ನಿರ್ವಹಿಸಲು ಸುರಕ್ಷಿತ ವಾತಾವರಣವನ್ನು ಕಲ್ಪಿಸಬೇಕು ಎಂದು ಉಳ್ಳಾಲ ಜುಮಾ ಮಸ್ಜಿದ್ ಮತ್ತು ಸಯ್ಯಿದ್ ಮದನಿ ದರ್ಗಾ ಸಮಿತಿ ಸರ್ಕಾರ ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ಒತ್ತಾಯಿಸುತ್ತದೆ.

## ಅಸ್ಸೈಗೋಳಿಯಲ್ಲಿ ಎ. ಕೆ. ರೆಹಮಾನ್ ಕೋಡಿಜಾಲ್‌ಗೆ ಸನ್ಮಾನ

**ಕೊಣಾಜೆ:** ಮಂಗಳ ಗ್ರಾಮೀಣ ಯುವಕ ಸಂಘ (ರಿ.)ಕೊಣಾಜೆ ಪದವು ಇದರ ಅಧ್ಯಕ್ಷರಾದ ಎ. ಕೆ. ರೆಹಮಾನ್ ಕೋಡಿಜಾಲ್ ಅವರನ್ನು ಅಸ್ಸೈಗೋಳಿಯಲ್ಲಿ ಅಭಿನಂದಿಸಲಾಯಿತು. ಅಸ್ಸೈಗೋಳಿಯಲ್ಲಿರುವ ಸಂವಿಧಾನ ಶಿಲ್ಪಿ



ಡಾ. ಬಿ. ಆರ್. ಅಂಬೇಡ್ಕರ್ ವಿದ್ಯಾನಿಧಿ ಟ್ರಸ್ಟ್‌ನ ಕಚೇರಿಯಲ್ಲಿ ಅಂಬೇಡ್ಕರ್ ವಿದ್ಯಾನಿಧಿ ಟ್ರಸ್ಟಿನ ಎಲ್ಲಾ ಕಾರ್ಯಕ್ರಮಗಳಿಗೆ ಸಹಕಾರವನ್ನು ನೀಡಿದ ಹಿನ್ನೆಲೆಯಲ್ಲಿ ಅಭಿನಂದಿಸಲಾಯಿತು.

ಈ ಸಂದರ್ಭ ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಯಾದವ್ ಉಪಸ್ಥಿತರಿದ್ದರು.

## ಮುಖ್ಯಮಂತ್ರಿ ಡಿಕೆಶಿಗೆ ದರ್ಗಾ ಅಧ್ಯಕ್ಷರಿಂದ ಅಭಿನಂದನೆ




ಉಳ್ಳಾಲ: ರಾಜ್ಯದ ನೂತನ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ರವರನ್ನು ಉಳ್ಳಾಲ ದರ್ಗಾ ಅಧ್ಯಕ್ಷ ಹನೀಫ್ ಹಾಜಿ ವಿಧಾನಸೌಧದಲ್ಲಿ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಉಳ್ಳಾಲ ದರ್ಗಾ ಕ್ಕೆ ಭೇಟಿ ನೀಡುವಂತೆ ಅವರಿಗೆ ಆಹ್ವಾನ ನೀಡಲಾಯಿತು. ದರ್ಗಾದ ಅಭಿವೃದ್ಧಿ ಗೆ ಸಹಕಾರ ನೀಡುವಂತೆ ಇದೇ ವೇಳೆ ಆಗ್ರಹಿಸಿದರು. ಈ ಸಂದರ್ಭದಲ್ಲಿ ದರ್ಗಾ ಉಪಾಧ್ಯಕ್ಷ ಯು.ಎಂ ಅಶ್ರಫ್ ಅಹ್ಮದ್, ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ಶಿಹಾಬುದ್ದೀನ್ ಸಖಾಫಿ , ಕೋಶಾಧಿಕಾರಿ ನಾಝಿಂ ರಹ್ಮಾನ್ ಉಪಸ್ಥಿತರಿದ್ದರು.

## ಹಾಡುಗಳಿಂದ ಕ್ಷೇತ್ರದ ಮಹಿಮೆ, ಸ್ಥಳೀಯ ಪರಿಸರ ಪಸರಿಸಲು ಸಾಧ್ಯ: ಹರೀಶ್ ರಾವ್

**ಸಾಯಿನಗರ:** ಹಾಡುಗಳ ಮೂಲಕ ಶ್ರೀ ಕ್ಷೇತ್ರದ ಮಹಿಮೆ ಸ್ಥಳೀಯ ಪರಿಸರ ಮಾತ್ರವಲ್ಲದೆ ಇತರ ಊರಿಗೂ ಪಸರಿಸಲು ಸಾಧ್ಯ ಎಂದು ಕೋಟೆಕಾರ್ ಪ. ಪಂ. ಸದಸ್ಯ ಹರೀಶ್ ರಾವ್ ಹೇಳಿದರು.

ಕೋಟೆಕಾರ್ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸಾಯಿನಗರ ನಡಾರ್ ಸ್ವಾಮಿ ಕೊರಗಜ್ಜ ಸೇವಾ ಸಮಿತಿಯಿಂದ ಶ್ರೀ ಕೊರಗಜ್ಜ ಸಾನಿಧ್ಯದ ತುಳು ಭಕ್ತಿಗೀತೆಗಳ ಧ್ವನಿ ಸುರುಳಿ ಬಿಡುಗಡೆ ಮತ್ತು ವನಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೋಟೆಕಾರ್ ಪಟ್ಟಣ ಪಂಚಾಯಿತಿ ಸದಸ್ಯ ಸುಜಿತ್ ಮಾಡೂರು ಮಾತನಾಡಿ, ಮುಂದಿನ ದಿನಗಳಲ್ಲಿ ನಸುಕಿನ ಜಾವ ಶ್ರೀ ಕ್ಷೇತ್ರದಿಂದ ಭಕ್ತಿ ಗೀತೆಗಳು ಕೇಳಿ ಬರುವಂತಾಗಲಿ ಎಂದು ಆಶಿಸಿದರು.

ಸ್ವಾಮಿ ಕೊರಗಜ್ಜ ಸೇವಾ ಸಮಿತಿ ಅಧ್ಯಕ್ಷ ಕೃಷ್ಣಕಾಂತ್ ಸಾಯಿನಗರ




ಮಾತನಾಡಿ, ಹಿಂದೆ ಎರಡು ಧ್ವನಿ ಸುರುಳಿಗಳನ್ನು ಬಿಡುಗಡೆ ಮಾಡಲಾಗಿದೆ. ಕೊರಗಜ್ಜ ಗುಳಿಗ ಹಾಗೂ ನಾಗಬನದ ಸಾನಿಧ್ಯವಿರುವ 30 ಸೆಂಟ್ಸ್ ಸರ್ಕಾರಿ ಜಮೀನು ಸಾನಿಧ್ಯದ ಹೆಸರಿಗೆ ಮಂಜೂರು ಮಾಡುವಂತೆ ಈಗಾಗಲೇ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದು ಸುಮಾರು 10 ಲಕ್ಷ ರೂ.ಗಳ ಅವಶ್ಯಕತೆ ಇದೆ ಎಂದರು.

ಮಡ್ಯಾರ್ ಶ್ರೀ ವನದುರ್ಗ ಮತ್ತು ಕಲ್ಲುರ್ಟಿ ಪಂಜುರ್ಲಿ ದೈವಸ್ಥಾನದ ಪ್ರಧಾನ ಕಾರ್ಯದರ್ಶಿ ಹರೀಶ್ ಕುಮಾರ್, ಗೌರವ ಸಲಹೆಗಾರ ವಿಜಯ ಕುಮಾರ್ ಬೇಕಲ್, ಕೋಶಾಧಿಕಾರಿ ರಾಘವೇಂದ್ರ, ಶಾಸ್ತಾರ ಬಳಗದ ಗುರುಸ್ವಾಮಿ ಯೋಗೀಶ್ ಕೊಂಡಾಣ, ಸಾಯಿನಗರ ಸ್ವಾಮಿ ಕೊರಗಜ್ಜ ಸೇವಾ ಸಮಿತಿಯ ಉಪಾಧ್ಯಕ್ಷ ಕೃಷ್ಣ ಶೆಟ್ಟಿ ಸಾಯಿನಗರ, ಕೋಶಾಧಿಕಾರಿಗಳಾದ ರುಕ್ಮಿಣಿ, ಹರಿಣಾಕ್ಷಿ, ಸಂಘಟನಾ ಕಾರ್ಯದರ್ಶಿಗಳಾದ ಪ್ರಕಾಶ್ ಸಾಯಿನಗರ, ಯಶವಂತ್ ಸಾಯಿನಗರ, ಪ್ರಧಾನ ಅರ್ಚಕ ಕೃಷ್ಣ ಶೆಟ್ಟಿ ಸಾಯಿನಗರ, ಸಾಯಿ ಫ್ರೆಂಡ್ಸ್ ಸರ್ಕಲ್ ಕಾರ್ಯದರ್ಶಿ ಪ್ರಕಾಶ್ ಜೋಗಿ ಸಾಯಿನಗರ, ರಾಮಣ್ಣ ಸಾಯಿನಗರ,

### ಬಿ.ಸಿ.ರೋಡಿನಲ್ಲಿ ಹತ್ಯೆಯಾದ ಲಾವಣ್ಯಳ ಶೌಮಹಜರಿಗೆ ಕೆ.ಎಸ್ ಹೆಗ್ಡೆ ಆಸ್ಪತ್ರೆಗೆ ಭೇಟಿ ನೀಡಿ ಸತೀಶ್ ಕುಂಪಲ

# ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ಯುವತಿಯರು ಠಾಣೆಗೆ ಹೋಗಲು ಹೆದರುತ್ತಿದ್ದಾರೆ

**ಉಳ್ಳಾಲ:** ಒಂದು ತಿಂಗಳಿನಿಂದ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ಪುತ್ತೂರಿನ ಯುವತಿ ಪ್ರಕರಣದಲ್ಲಿ ಮನೆಯವರ ಮೇಲೆಯೇ ಪ್ರಕರಣ ದಾಖಲಿಸಲಾಗಿದೆ. ಯುವತಿಯರು ಪೊಲೀಸ್ ಠಾಣೆಗೆ ಹೋಗುವ ಧೈರ್ಯವನ್ನೇ ಕಳೆದುಕೊಂಡಿದ್ದಾರೆ. ಪ್ರಿಯಾಂಕ್ ಖರ್ಗೆ ರಾಜ್ಯದ ಗೃಹಖಾತೆಯನ್ನು ಸರಿಯಾಗಿ ನಿಭಾಯಿಸುವ ಅವಶ್ಯಕತೆಯಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದ್ದಾರೆ.

ಬಂಟ್ವಾಳದ ಬಿ.ಸಿ.ರೋಡಿನಲ್ಲಿ ಹತ್ಯೆಯಾದ ಲಾವಣ್ಯಳ ಶೌಮಹಜರು ನಡೆಯುತ್ತಿದ್ದ ದೇರಳಕಟ್ಟೆಯ ಕೆ.ಎಸ್ ಹೆಗ್ಡೆ ಆಸ್ಪತ್ರೆಗೆ ಭೇಟಿ ನೀಡಿ ಮಾಧ್ಯಮದ ಜತೆಗೆ ಮಾತನಾಡಿದರು.

ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಉಂಟಾ ಅನ್ನುವ ಅನುಮಾನ ವ್ಯಕ್ತವಾಗುತ್ತಿದೆ. ತಿಂಗಳ ಹಿಂದಿನಿಂದ ನೋಡುತ್ತಾ ಬಂದ–ರೆ ಚೂರಿಯನ್ನು ಹಿಡಿದುಕೊಂಡು ಹತ್ಯೆ ಮಾಡಲು ಬರುವುದು , ಹಾಡಹಗಲೇ ಯುವತಿಯ ಕೊಲೆ ನಡೆಯುತ್ತಿದೆ., ರಾಜ್ಯದಲ್ಲಿ ಪ್ರಿಯಾಂಕ ಖರ್ಗೆ ರಾಜ್ಯದ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ರೀತಿಯಲ್ಲಿ ಯೋಚನೆ ಮಾಡುತ್ತಿಲ್ಲ .ರಾಜ್ಯದಲ್ಲಿ ಡಿಕೆಶಿ ಸರಕಾರ ಬಂದ ನಂತರ ಜಿಲ್ಲೆಯ ಉಸ್ತುವಾರಿ ಸಚಿವ ಯು.ಟಿ.ಖಾದರ್ ಸಭೆಗಳನ್ನು ನಡೆಸಿದ ಬಳಿಕವೂ ಕೃತ್ಯಗಳು ಆಗುತ್ತಿವೆ ಎಂದರೆ ಅರ್ಥವಿಲ್ಲದಾಗಿದೆ. ಬಿಜೆಪಿ ಅಧಿಕಾರಿಗಳ ಜೊತೆಗೆ ಸಹಕಾರವನ್ನು ನೀಡುತ್ತಾ ಬಂದಿದೆ. ಆದರೆ ಎಸ್.ಪಿ



ಅಧೀನದ ಪ್ರದೇಶದಲ್ಲಿ ನಿರಂತರ ಘಟನೆಗಳು ಆಗುತ್ತಿವೆ, ರಾಜಾರೋಷವಾಗಿ ಹಾಡಹಗಲೇ ಬಸ್ ನಿಲ್ದಾಣದಲ್ಲಿ ಯುವತಿಯನ್ನು ಹತ್ಯೆ ಮಾಡುತ್ತಾರೆಂದಾದಲ್ಲಿ ಏನರ್ಥ?. ಹುಡುಗಿಯರು ಸ್ಟೇಷನ್ನಿಗೆ ಹೋಗದ ಪರಿಸ್ಥಿತಿ ನಿರ್ಮಾಣವಾಗಿದೆ. ಕಾನೂನು ವ್ಯವಸ್ಥೆ ಸಂಪೂರ್ಣವಾಗಿ ಕುಸಿತವಾಗಿದೆ. ಕ್ಷುಲ್ಲಕ ಕಾರಣಕ್ಕೆ ಹತ್ಯೆಯನ್ನೇ ನಡೆಸಿದ್ದಾನೆ, ಹಾಡಹಗಲೇ ಕೊಲೆ ನಡೆಯುವುದು ಎಂದಲ್ಲಿ ಪೊಲೀಸ್ ಇಲಾಖೆ ದೌರ್ಬಲ್ಯ ಎಂಬರ್ಥ. ಜಿಲ್ಲೆಯ ಮೂಲೆ ಮೂಲೆಗಳಲ್ಲಿಯೂ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಮನೆಯವರ ಮೇಲೆ ಕೇಸು ದಾಖಲು ಮಾಡುವುದು, ಕೆಲಸಕ್ಕೆ ಹೋಗುವ ಪರಿಸ್ಥಿತಿಯಿಲ್ಲ, ಜಿಲ್ಲೆಯಲ್ಲಿ ಆತಂಕದ ವಾತಾವರಣವಿದೆ, ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದ ಷಡ್ಯಂತ್ರ ನಡೆಯುತ್ತಿದೆ, ಡ್ರಗ್ಸ್ ಮಾಫಿಯಾ ಎಲ್ಲೆಡೆ ವಿಸ್ತಾರವಾಗುತ್ತಿದೆ. ಜನ ನಡೆದಾಡುವ ಸ್ಥಿತಿ ಇಲ್ಲದಾಗಿದೆ, ಗೃಹಸಚಿವರೇ ಹುಚ್ಚಾಟವನ್ನು ಬಿಟ್ಟು ಸರಿಯಾದ ಆಡಳಿತ ನಡೆಸಿರಿ. ಜಿಲ್ಲೆಯಲ್ಲಿ ನಡೆಯುವ ವಾತಾವರಣ ಎಂದು ಎಚ್ಚರಿಸಿದ್ದಾರೆ.

**ಗಲ್ಲು ಶಿಕ್ಷೆಗೆ ಒಳಪಡಿಸಿರಿ: ಶರಣ್ ಪಂಪ್ವೆಲ್**

ಲಾವಣ್ಯ ಹತ್ಯೆ ನಡೆಸಿದ ಚೇತನ್ ಪ್ರಕರಣವನ್ನು ಫಾಸ್ಟ್ ಟ್ರ್ಯಾಕ್ ನ್ಯಾಯಾಲಯದಲ್ಲಿ ತಕ್ಷಣವೇ ವಿಚಾರಣೆ ನಡೆಸಿ ಗಲ್ಲು ಶಿಕ್ಷೆಗೆ ಗುರಿಪಡಿಸಿರಿ, ಆತನನ್ನು ಬಜರಂಗದಳದ ಕಾರ್ಯಕರ್ತ ಅನ್ನುವ ಫೋಟೊವನ್ನು ಸೃಷ್ಟಿಸಿ, ಸಂಘಟನೆಗೆ ಅಪಪ್ರಚಾರ ನಡೆಸುವ ಕಾಂಗ್ರೆಸ್ ಮುಖಂಡೆ ಶೈಲಜಾ ಅಮರನಾಥ್ ಸೇರಿದಂತೆ ತಮ್ಮದೇ ಪಕ್ಷದ ಕಾರ್ಯಕರ್ತರನ್ನು ತಕ್ಷಣವೇ ಬಂಧಿಸಿ, ಇಲಾಖೆಗೆ ಗೌರವಿಸುತ್ತಾ ಜಿಲ್ಲೆಯಲ್ಲಿ ಶಾಂತಿ ನೆಲೆಯೂರಲು ಪೊಲೀಸರ ಜೊತೆಗೆ ಸಂಘಟನೆ ನಿಂತಿದೆ, ಅದನ್ನು ಪ್ರಚೋದಿಸಿ ಕೋಮು ಸಂಘರ್ಷಣೆಗಳಿಗೆ ದಾರಿ ಮಾಡಿಕೊಡದಿರಿ ಎಂದು ವಿಶ್ವ ಹಿಂದೂ ಪರಿಷತ್‌ನ ಶರಣ್ ಪಂಪ್ ವೆಲ್ ತಿಳಿಸಿದ್ದಾರೆ.

ಹಿಂದೂ ಯುವತಿಯ ಭೀಕರ ಹತ್ಯೆ ಅತ್ಯಂತ ನೋವಿನ ಹಾಗೂ ಖಂಡನೀಯ ಘಟನೆ. ಹಾಡಹಗಲೇ ತಲವಾರಿನಿಂದ ಯುವತಿಯನ್ನು ಹತ್ಯೆ ಮಾಡಿರುವುದು ಇಡೀ ಕರಾವಳಿ ಜಿಲ್ಲೆಗೆ ಕಪ್ಪು ಚುಕ್ಕೆಯಾಗಿದ್ದು, ನಾಗರಿಕ ಸಮಾಜ ತಲೆತಗ್ಗಿಸುವಂತಹ ಕೃತ್ಯವಾಗಿದೆ. ಹತ್ಯೆ ನಡೆಸಿದ ಆರೋಪಿ ಚೇತನ್ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು, ಗಲ್ಲು ಶಿಕ್ಷೆಯಾಗುವಂತೆ ಗೃಹ ಇಲಾಖೆ ಹಾಗೂ ಪೊಲೀಸ್ ಇಲಾಖೆ ಪರಿಣಾಮಕಾರಿ ತನಿಖೆ ನಡೆಸಬೇಕು . ಪ್ರಕರಣಕ್ಕೆ ಸಾಕಷ್ಟು ಪ್ರತ್ಯಕ್ಷದರ್ಶಿಗಳಿದ್ದು, ಸಾಕ್ಷ್ಯಗಳ ಕೊರತೆಯಿಲ್ಲ. ಆದ್ದರಿಂದ ಪ್ರಕರಣವನ್ನು ಫಾಸ್ಟ್ ಟ್ರ್ಯಾಕ್ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಶೀಘ್ರ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಬಜರಂಗದಳವು ವಿಶ್ವಹಿಂದೂ ಪರಿಷತ್ತಿನ ಯುವ ವಿಭಾಗವಾಗಿದ್ದು, ಯುವಕರಲ್ಲಿ ದೇಶಭಕ್ತಿ ಹಾಗೂ ಸಾಮಾಜಿಕ ಸೇವೆಯ ಮನೋಭಾವ ಬೆಳೆಸುವ ಉದ್ದೇಶದಿಂದ ದೇಶಾದ್ಯಂತ ಕಾರ್ಯನಿರ್ವಹಿಸುತ್ತಿದೆ. ಇಂತಹ ಸಂಘಟನೆಯ ಹೆಸರಿಗೆ ಧಕ್ಕೆ ತರುವ ಉದ್ದೇಶದಿಂದ ಕೆಲವರು ಅಪಪ್ರಚಾರ ನಡೆಸುತ್ತಿದ್ದಾರೆ. ಅದರಲ್ಲೂ ಕೆಲವರು ಬಜರಂಗದಳದ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡುತ್ತಿರುವುದು ಖಂಡನೀಯ ಎಂದು ತಿಳಿಸಿದರು.ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚೋದನಾತ್ಮಕ ಸಂದೇಶಗಳನ್ನು ಹರಡಿ ಕೋಮು ಅಶಾಂತಿ ಸೃಷ್ಟಿಸಲು ಕೆಲ ವ್ಯಕ್ತಿಗಳು ಪ್ರಯತ್ನಿಸುತ್ತಿದ್ದಾರೆ. ಇಂತಹವರ ವಿರುದ್ಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕು. ಕಾನೂನು ಉಲ್ಲಂಘಿಸುವವರ ವಿರುದ್ಧ ಯಾವುದೇ ತಾರತಮ್ಯವಿಲ್ಲದೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.ಭಾರತವು ತಾಯಂದಿರು ಹಾಗೂ ಮಹಿಳೆಯರಿಗೆ ಗೌರವ ನೀಡುವ ಸಂಸ್ಕೃತಿ ಹೊಂದಿದ ದೇಶವಾಗಿದ್ದು, ಮಹಿಳೆಯರ ಸುರಕ್ಷತೆಗೆ ಧಕ್ಕೆ ತರುವ ಇಂತಹ ಅಮಾನವೀಯ ಕೃತ್ಯಗಳಿಗೆ ಸಮಾಜ ಒಗ್ಗಟ್ಟಿನಿಂದ ವಿರೋಧ–ವ್ಯಕ್ತಪಡಿಸಬೇಕು. ಸಂಘಪರಿವಾರದ ವಿರುದ್ಧ ಅಪಪ್ರಚಾರ ಮುಂದುವರಿಸಿದಲ್ಲಿ ಜಿಲ್ಲೆಯಾದ್ಯಂತ ರಸ್ತೆಗಿಳಿದು ಹೋರಾಟ ನಡೆಸುವುದು ಅನಿವಾರ್ಯವಾದೀತು ಎಂದು ಎಚ್ಚರಿಸಿದರು.

ಈ ವೇಳೆ ವಿಹಿಂಪ ಮುಖಂಡ ಪ್ರದೀಪ್ ಸರಿಪಲ್ಲ, ಕೋಟೆಕಾರು ಪಟ್ಟಣ ಪಂಚಾಯತ್ ಅಧ್ಯಕ್ಷೆ ದಿವ್ಯಾ ಸತೀಶ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಮೋಹನ್‌ರಾಜ್ ಕೆ.ಆರ್, ಬಿಜೆಪಿ ಯುವಮೋರ್ಚಾ ಜಿಲ್ಲಾಧ್ಯಕ್ಷ ನಂದನ್ ಮಲ್ಯ ಉಪಸ್ಥಿತರಿದ್ದರು.

## ಕಾನೂನುಬದ್ಧ ವ್ಯಾಪಾರಿಗಳಿಗೆ ಸಂಕಷ್ಟ

↗1ನೇ ಪುಟದಿಂದ

ದಟ್ಟಣೆ ಹಾಗೂ ಟ್ರಾಫಿಕ್ ಸಮಸ್ಯೆ ಮತ್ತಷ್ಟು ತೀವ್ರಗೊಳ್ಳುವ ಆತಂಕ ವ್ಯಕ್ತವಾಗಿದೆ.

ಅನಧಿಕೃತ ಅಂಗಡಿ–ಮುಂಗಟ್ಟುಗಳಿಂದ ರಸ್ತೆ ಬದಿಯ ಜಾಗ ಕಿರಿದಾಗಿದ್ದು, ಪಾದಚಾರಿಗಳಿಗೂ ಸುರಕ್ಷಿತವಾಗಿ ಸಂಚರಿಸಲು ತೊಂದರೆ–ಯಾಗುತ್ತಿದೆ. ಹೀಗಾಗಿ ಹಬ್ಬಗಳ ಮುನ್ನವೇ ಸಂಬಂಧಪಟ್ಟ ಇಲಾಖೆಗಳು ಅನಧಿಕೃತ ಮಾರುಕಟ್ಟೆ ತೆರವುಗೊಳಿಸಿ, ಸಂಚಾರ ಸುಗಮಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

## ಉಚ್ಚಿಲ: ಸೋಮೇಶ್ವರ ಪೆಟ್ರೋಲ್‌ಪಂಪ್‌ನಲ್ಲಿ ಸ್ಪೀಡ್–100 ಮಾರುಕಟ್ಟೆಗೆ

**ಉಚ್ಚಿಲ:** ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಪರಿಚಯಿಸಿರುವ ಅತಿ ಉನ್ನತ ಮಟ್ಟದ ಅಲ್ಟ್ರಾ ಪ್ರೀಮಿಯಮ್ ಪೆಟ್ರೋಲ್ ಸ್ಪೀಡ್–100 ಎಂಬ ಹೊಸ ಉತ್ಪನ್ನವನ್ನು ರಾ.ಹೆ. 66ರ ಸೋಮೇಶ್ವರ ಉಚ್ಚಿಲದ ಸೋಮೇಶ್ವರ ಪೆಟ್ರೋಲ್ ಪಂಪ್‌ನಲ್ಲಿ ಶನಿವಾರ ಮಾರುಕಟ್ಟೆಗೆ ಬಿಡುಗಡೆಗೊಳಿಸಲಾಯಿತು.

ಭಾರತ್ ಪೆಟ್ರೋಲಿಯಂ ಸಂಸ್ಥೆಯ ಕರ್ನಾಟಕ ರಾಜ್ಯ ವಿಭಾಗ ಮುಖ್ಯಸ್ಥ ಪ್ರಕಾಶ್ ಬಿ. ನೂತನ ಉತ್ಪನ್ನವನ್ನು ಪ್ರೀಮಿಯಂ ವಾಹನಗಳ ಟ್ಯಾಂಕರ್‌ಗೆ ತುಂಬಿಸುವ ಮೂಲಕ ಉದ್ಘಾಟಿಸಿ ಮಾತನಾಡಿ ಸೋಮೇಶ್ವರ ಫ್ಯೂಯೆಲ್ಸ್‌ನಲ್ಲಿ ನೂತನ ಉತ್ಪನ್ನ ಬಿಡುಗಡೆಗೊಳಿಸುತ್ತಿದ್ದು ಈ ಪಂಪ್ ಕಳೆದ ಕೆಲವು ವರ್ಷಗಳಿಂದ ಸಾರ್ವಜನಿಕರಿಗೆ ಕೇವಲ ಫ್ಯೂಯೆಲ್ ಮಾತ್ರವಲ್ಲದೆ ವಿವಿಧ ರೀತಿಯಲ್ಲಿ ಸೇವೆ ನೀಡುತ್ತಾ ಬಂದಿದೆ. ಇಲ್ಲಿ ಬಿಕೆಫೆ ಮೂಲಕ




> ಇದು 100ಆಕ್ಟೇನ್ ರೇಟಿಂಗ್ ಹೊಂದಿರುವ ಇಂಧನವಾಗಿದೆ. ಆಕ್ಟೇನ್ ರೇಟಿಂಗ್ ಎಷ್ಟಿರುತ್ತದೆಯೋ, ಅಷ್ಟು ಹೆಚ್ಚು ಸಮರ್ಥವಾಗಿ ಎಂಜಿನ್‌ನಲ್ಲಿ ಇಂಧನವು ಉರಿಯುತ್ತದೆ ಮತ್ತು ಶಕ್ತಿಯನ್ನು ನೀಡುತ್ತದೆ. ಇದನ್ನು ಮುಖ್ಯವಾಗಿ ಹೈ-ಪರ್ಫಾರ್ಮೆನ್ಸ್ ಕಾರುಗಳು ಮತ್ತು ಪ್ರೀಮಿಯಂ ಮೋಟಾರ್ ಸೈಕಲ್‌ಗಳಿಗಾಗಿ ವಿನ್ಯಾಸಗೊಳಿಸಲಾಗಿದೆ. ಆಧುನಿಕ, ಹೈ-ಕಂಪ್ರೆಶನ್ ಎಂಜಿನ್‌ಗಳಿಗೆ ಇದು ಅತ್ಯುತ್ತಮವಾಗಿದೆ. ಇತರ ಸಾಮಾನ್ಯ ಪೆಟ್ರೋಲ್ ಆಯ್ಕೆಗಳಿಗಿಂತ ಭಿನ್ನವಾಗಿದೆ. ಅನೇಕ ವರದಿಗಳ ಪ್ರಕಾರ, ಇದು ಹೆಚ್ಚಿನ ಎಥೆನಾಲ್ ಮಿಶ್ರಣವಿಲ್ಲದ ಶುದ್ಧ ಇಂಧನವಾಗಿದೆ, ಆದ್ದರಿಂದ ಹಳೆಯ ವಾಹನಗಳ ಮಾಲೀಕರು ಎಥೆನಾಲ್‌ನಿಂದ ಆಗುವ ಸಮಸ್ಯೆಗಳನ್ನು ತಪ್ಪಿಸಲು ಇದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಸಾಮಾನ್ಯ ಪೆಟ್ರೋಲ್‌ಗೆ ಹೋಲಿಸಿದರೆ ಇದರ ಬೆಲೆ ಹೆಚ್ಚಿರುತ್ತದೆ. ಇದು ಎಲ್ಲ ಪೆಟ್ರೋಲ್ ಬಂಕ್‌ಗಳಲ್ಲಿ ಸಿಗುವುದಿಲ್ಲ, ಆಯ್ದ ಪ್ರಮುಖ ಬಂಕ್‌ಗಳಲ್ಲಿ ಮಾತ್ರ ಲಭ್ಯವಿದ್ದು ಮಂಗಳೂರಿನಲ್ಲಿ ಹಾಗೂ ಉಚ್ಚಿಲದಲ್ಲಿ ಮಾತ್ರ ಈ ಉತ್ಪನ್ನ ಲಭ್ಯವಿದೆ.
>
> ■ ರಾಜೇಶ್ ಶೆಟ್ಟಿ, ಮಾಲೀಕರು, ಸೋಮೇಶ್ವರ ಫ್ಯೂಯೆಲ್ಸ್

ಕಾಫೀ ಜೊತೆಗೆ ಸಮಯ ಕಳೆಯುವ ಅವಕಾಶ, ಸಂಸ್ಥೆಯ ವತಿಯಿಂದ ಡ್ರೈ ಫ್ರೆಶ್, ಅತ್ಯುತ್ತಮ ಶೌಚಾಲಯ, ಹೈಡ್ರೋಜನ್ ಗಾಳಿ ಸೇರಿದಂತೆ ಉತ್ತಮ ಸೇವೆ ಕೊಡುತ್ತಾ ಬಂದಿದ್ದು ಸಾರ್ವಜನಿಕರ ಸಹಕಾರ ಇನ್ನು ಮುಂದೆಯೂ ಇದೇ ರೀತಿಯಲ್ಲಿ ಲಭಿಸುವಂತಾಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಮಂಗಳೂರು ವಲಯ ವಿಭಾಗ ಮುಖ್ಯಸ್ಥ ವಿಪಿನ್ ದಾಸ್, ಮಂಗಳೂರು ವಲಯ ಮಾರಾಟ ಪ್ರತಿನಿಧಿ ಭರತ್ ಎಚ್., ಸಂಸ್ಥೆಯ ಮಾಲೀಕ ರಾಜೇಶ್ ಕುಮಾರ್ ಶೆಟ್ಟಿ, ಸಂಸ್ಥೆಯ ವ್ಯವಸ್ಥಾಪಕ ರವೀಂದ್ರ ಶೆಟ್ಟಿ, ಕರ್ನಾಟಕ ರಾಜ್ಯ ಮುಖ್ಯಸ್ಥರು ಪ್ರಕಾಶ್ ಬಿ., ಮಂಗಳೂರು ವಲಯ ಇಂಜಿನಿಯರಿಂಗ್ ವಿಭಾಗ ಮುಖ್ಯಸ್ಥ ರವಿಕುಮಾರ್ ಹಾಗೂ ಮಂಗಳೂರು ವಲಯ ವಿಭಾಗ ಸಂಯೋಜಕರು ಆನಂದ್ ವರ್ಮಾ ಉಪಸ್ಥಿತರಿದ್ದರು.

## ಮಂಗಳೂರು ವಿವಿ ನೂತನ ಕುಲಸಚಿವರಾಗಿ ಸಂತೋಷ್ ಬಿ ಜಗಲಸಾರ ಅಧಿಕಾರ ಸ್ವೀಕಾರ

**ಕೊಣಾಜೆ:** ಮಂಗಳೂರು ವಿಶ್ವವಿದ್ಯಾನಿಲಯದ ನೂತನ ಕುಲಸಚಿವರಾಗಿ ಹಿರಿಯ ಶ್ರೇಣಿಯ ಕೆಎಎಸ್ ಅಧಿಕಾರಿ ಸಂತೋಷ್ ಬಿ ಜಗಲಸಾರ ಅವರು ಸೋಮವಾರ ಅಧಿಕಾರ ಸ್ವೀಕರಿಸಿದರು.



ಈ ಸಂದರ್ಭದಲ್ಲಿ ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್ ಧರ್ಮ, ಪ್ರಭಾರ ಕುಲಸಚಿವರಾಗಿದ್ದ ಪ್ರೊ. ಗಣೇಶ್ ಸಂಜೀವ್ ಮೊದಲಾದವರು ಉಪಸ್ಥಿತರಿದ್ದರು.

ಬಾಗಲಕೋಟೆಯಲ್ಲಿ ಸಹಾಯಕ ಕಮೀಷನರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಅವರನ್ನು ರಾಜ್ಯ ಸರ್ಕಾರವು ಮಂಗಳೂರು ವಿವಿಯ ಕುಲಸಚಿವರಾಗಿ ನಿಯುಕ್ತಿಗೊಳಿಸಿದೆ ಈ ಹಿಂದೆ ಹಿರಿಯ ಪ್ರಾಧ್ಯಾಪಕರಾದ ಪ್ರೊ.ಗಣೇಶ್ ಸಂಜೀವ್ ಅವರು ಪ್ರಭಾರ ಕುಲಸಚಿವರಾಗಿ ಕಾರ್ಯನಿರ್ವಹಿಸಿದ್ದರು.

### ಮುಡಿಪು: ಮಹಿಳೆಯರ ಸ್ವಾವಲಂಬನೆ ಮತ್ತು ಜೀವನೋಪಾಯಕ್ಕಾಗಿ ಸ್ವ–ಉದ್ಯೋಗ ಅವಕಾಶಗಳ ಕುರಿತು ಆಯೋಜಿಸಿದ್ದ ಒಂದು ದಿನದ ತರಬೇತಿ ಕಾರ್ಯಾಗಾರ

# ಮಹಿಳೆಯರೂ ಉದ್ಯಮಿಗಳಾಗಿ ಬೆಳೆಯಬೇಕಿದೆ: ಪ್ರೊ.ಪಿ.ಎಲ್.ಧರ್ಮ

**ಕೊಣಾಜೆ:** ಮಹಿಳೆಯರು ಕೇವಲ ಉದ್ಯೋಗ ಅರಸುವವರಾಗಿರದೆ, ಉದ್ಯೋಗ ಸೃಷ್ಟಿಸುವ ಉದ್ಯಮಿಗಳಾಗಿ ಬೆಳೆಯಬೇಕಾಗಿದೆ. ವಿಶ್ವವಿದ್ಯಾನಿಲಯವು ಸಮಾಜದೊಂದಿಗೆ ಕೈಜೋಡಿಸಿ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ಹಾಗೂ ಸ್ವ–ಉದ್ಯೋಗ ತರಬೇತಿಗಳನ್ನು ನೀಡುವ ಮೂಲಕ ಆತ್ಮನಿರ್ಭರ ಬದುಕಿಗೆ ಪ್ರೇರಣೆ ನೀಡುತ್ತಿದೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಪಿ. ಎಲ್. ಧರ್ಮ ಅಭಿಪ್ರಾಯಪಟ್ಟರು.

ಅವರು ಗುರುವಾರ ಮುಡಿಪು ಜನ ಶಿಕ್ಷಣ ಟ್ರಸ್ಟ್ ಸಭಾಂಗಣದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸಾಮಾಜಿಕ ಒಳಗೊಳ್ಳುವಿಕೆಯ ಅಧ್ಯಯನ ಕೇಂದ್ರ ಹಾಗೂ ಜನ ಶಿಕ್ಷಣ ಟ್ರಸ್ಟ್, ಮುಡಿಪು ಇವರ ಜಂಟಿ ಆಶ್ರಯದಲ್ಲಿ ಮಹಿಳೆಯರ ಸ್ವಾವಲಂಬನೆ ಮತ್ತು ಜೀವನೋಪಾಯಕ್ಕಾಗಿ ಸ್ವ–ಉದ್ಯೋಗ ಅವಕಾಶಗಳ ಕುರಿತು ಆಯೋಜಿಸಿದ್ದ ಒಂದು ದಿನದ ತರಬೇತಿ ಕಾರ್ಯಾಗಾರದಲ್ಲಿ ಅಧ–್ಯಕ್ಷತೆ ವಹಿಸಿ ಮಾತನಾಡಿದರು.

ಮಹಿಳೆಯರ ಸಬಲೀಕರಣವು ಸಮಾಜದ ಅಭಿವೃದ್ಧಿಯ ಮೂಲ ಅಡಿಪಾಯವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಸ್ವ–ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಯೇ ಮಹಿಳೆಯರ ಆರ್ಥಿಕ ಸ್ವಾವಲಂಬನೆಯ ಪ್ರಮುಖ ಮಾರ್ಗವಾಗಿದೆ. ಮಂಗಳೂರು ವಿಶ್ವವಿದ್ಯಾನಿಲಯವು ಸಮಾಜದ ಅಗತ್ಯಗಳಿಗೆ ಸ್ಪಂದಿಸುವ ಇಂತಹ ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುತ್ತಿದ್ದು, ಪ್ರತಿಯೊಬ್ಬ ಮಹಿಳೆಯೂ ಆತ್ಮವಿಶ್ವಾಸದಿಂದ ಉದ್ಯಮಿಯಾಗಿ ಬೆಳೆದು ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕು. ಸರ್ಕಾರದ ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸ್ವಂತ ಉದ್ಯಮ ಆರಂಭಿಸುವ ಮೂಲಕ ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ




ಮಹತ್ವದ್ದಾಗಿದೆ ಎಂದರು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ ಸಂತೋಷ್ ಬಿ. ಜಗಲ್ಸಾರ್ ಅವರು ಮಾತನಾಡಿ, ಗ್ರಾಮೀಣ ಮಹಿಳೆಯರು ಸ್ವಹಾಯ ಸಂಘಗಳ ಮೂಲಕ, ವಿವಿಧ ಸಂಸ್ಥೆಗಳ ಸಹಕಾರದೊಂದಿಗೆ ಇಂತಹ ಸ್ವ ಉದ್ಯೋಗ ತರಬೇತಿಯಲ್ಲಿ ತೊಡಗಿಸಿಕೊಂಡರೆ ಸ್ವಾವಲಂಬಿ ಬದುಕು ಸಾಗಿಸಲು ಸಾಧ್ಯವೆಂದರು.

ಅಣಬೆ ಕೃಷಿ ತಜ್ಞೆ ತುಷಾರ ಪೊಳಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು, ಅಣಬೆ ಕೃಷಿಯ ಮಹತ್ವ, ಕಡಿಮೆ ಬಂಡವಾಳದಲ್ಲಿ ಆರಂಭಿಸಬಹುದಾದ ಉದ್ಯಮ, ಮಾರುಕಟ್ಟೆ ಅವಕಾಶಗಳು ಹಾಗೂ ಆದಾಯ ಗಳಿಕೆಯ ಕುರಿತು ಪ್ರಾಯೋಗಿಕ ಮಾಹಿತಿಯನ್ನು ನೀಡಿದರು.

ದಕ್ಷಿಣ ಕನ್ನಡ ಜಿಲ್ಲೆಯ ನೈರ್ಮಲ್ಯ ರಾಯಭಾರಿ ಎನ್. ಶೀನ ಶೆಟ್ಟಿ ಅವರು ಸ್ವಚ್ಛತೆ, ಆರೋಗ್ಯ ಹಾಗೂ ಮಹಿಳೆಯರ ಸಾಮಾಜಿಕ ಜಾಗೃತಿಯ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸಾಮಾಜಿಕ ಒಳಗೊಳ್ಳುವಿಕೆಯ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ವೈ. ಸಂಗಪ್ಪ, ಜನ ಶಿಕ್ಷಣ ಟ್ರಸ್ಟ್‌ನ ಕೃಷ್ಣ ಮೂಲ್ಯ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಡಾ.ಸಿದ್ಧಲಿಂಗ ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಡಾ. ರಾಮಕೃಷ್ಣ ವಂದಿಸಿದರು.

ಈ ಕಾರ್ಯಾಗಾರದಲ್ಲಿ ಸುತ್ತಮುತ್ತಲಿನ ಸ್ವ–ಸಹಾಯ ಸಂಘಗಳ 80ಕ್ಕೂ ಅಧಿಕ ಮಹಿಳೆಯರು ಉತ್ಸಾಹದಿಂದ ಭಾಗವಹಿಸಿದ್ದರು.

- ■ ಪ್ರತಿಯೊಬ್ಬ ಮಹಿಳೆಯೂ ಆತ್ಮವಿಶ್ವಾಸದಿಂದ ಉದ್ಯಮಿಯಾಗಿ ಬೆಳೆದು ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕು.
- ■ ಸರ್ಕಾರದ ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸ್ವಂತ ಉದ್ಯಮ ಆರಂಭಿಸುವ ಮೂಲಕ ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ

# ಜೆಡಿಎಸ್ ಮಂಗಳೂರು ವಿಧಾನಸಭಾ ಕ್ಷೇತ್ರಕ್ಕೆ ಪ್ರಕಾಶ್ ಶೆಟ್ಟಿ ಅಧ್ಯಕ್ಷ ಅಧಿಕೃತ ಘೋಷಿಸಿದ ಜಿಲ್ಲಾ ಮುಖಂಡರು



**ತೊಕ್ಕೊಟ್ಟು :** ಜನತಾದಳ (ಜಾತ್ಯತೀತ) ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ ಮತ್ತಷ್ಟು ಬಲಪಡಿಸುವ ಹಾಗೂ ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಚಟುವಟಿಕೆಗಳಿಗೆ ಹೊಸ ಚೈತನ್ಯ ತುಂಬುವ ಉದ್ದೇಶದಿಂದ ಪ್ರಕಾಶ್ ಶೆಟ್ಟಿ ಅಸೈಗೋಳಿ ಅವರನ್ನು ಮಂಗಳೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ ಎಂದು ಜೆಡಿಎಸ್ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷ ಜಾಕೆ ಮಾಧವ ಗೌಡ ತಿಳಿಸಿದ್ದಾರೆ.

ಉಳ್ಳಾಲ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ನೇಮಕಾತಿಯನ್ನು ಅಧಿಕೃತವಾಗಿ ಘೋಷಿಸಿದ ಅವರು ಪ್ರಕಾಶ್ ಶೆಟ್ಟಿ ಅಸೈಗೋಳಿ ಅವರು ವಿದ್ಯಾರ್ಥಿ ಜೀವನದಿಂದಲೇ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡಿದ್ದು, ಸರ್ಕಾರಿ ಕಾಲೇಜಿನ ವಿದ್ಯಾರ್ಥಿ ಸಂಘ ಹಾಗೂ ಸರ್ವ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ಹೇಳಿದರು. ಬಳಿಕ ಜೆಡಿಎಸ್ ಪಕ್ಷದ ವತಿಯಿಂದ ಮಂಗಳೂರು ತಾಲೂಕು ಪಂಚಾಯತ್ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿ ಜನಪರ ಆಡಳಿತ ಹಾಗೂ ಸಂಘಟನಾ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅವರ ಸಂಘಟನಾ ಸಾಮರ್ಥ್ಯ, ಆಡಳಿತ ಅನುಭವ, ಪಕ್ಷದ ಮೇಲಿನ ನಿಷ್ಠೆ ಹಾಗೂ ನಾಯಕತ್ವದ ಗುಣಗಳನ್ನು ಪರಿಗಣಿಸಿ ಈ ಜವಾಬ್ದಾರಿ ನೀಡಲಾಗಿದೆ ಎಂದರು.

ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಿಷ್ಠಗೊಳಿಸುವುದು, ಯುವಕರನ್ನು ಹಾಗೂ ಹೊಸ ಸದಸ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷಕ್ಕೆ ಸೇರ್ಪಡೆಗೊಳಿಸುವುದು, ಪಕ್ಷದ ತತ್ವ–ಸಿದ್ಧಾಂತಗಳನ್ನು ಜನರಿಗೆ ಪರಿಣಾಮಕಾರಿಯಾಗಿ ತಲುಪಿಸುವುದು ಹಾಗೂ ಮುಂಬರುವ ಗ್ರಾಮ ಪಂಚಾಯತ್, ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಪಕ್ಷವನ್ನು ಬಲಪಡಿಸುವ ಕಾರ್ಯವನ್ನು ಪ್ರಕಾಶ್ ಶೆಟ್ಟಿ ಸಮರ್ಥವಾಗಿ ನಿರ್ವಹಿಸಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ನೇಮಕಾತಿಯನ್ನು ಸ್ವೀಕರಿಸಿದ ಪ್ರಕಾಶ್ ಶೆಟ್ಟಿ ಅಸೈಗೋಳಿ ಮಾತನಾಡಿ, ಪಕ್ಷದ ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲಾ ನಾಯಕರಿಗೆ ಕೃತಜ್ಞತೆ ಸಲ್ಲಿಸಿದರು. ಪಕ್ಷವು ನನ್ನ ಮೇಲೆ ಇಟ್ಟಿರುವ ವಿಶ್ವಾಸವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮಂಗಳೂರು ವಿಧಾನಸಭಾ ಕ್ಷೇತ್ರದ ಪ್ರತಿಯೊಂದು ವಾರ್ಡ್ ಹಾಗೂ ಬೂತ್ ಮಟ್ಟದಲ್ಲಿ ಸಂಘಟನೆಯನ್ನು ಬಲಪಡಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಹಿರಿಯರು, ಯುವ ಮುಖಂಡರು ಹಾಗೂ ಕಾರ್ಯಕರ್ತರನ್ನು ಒಗ್ಗೂಡಿಸಿಕೊಂಡು ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷವನ್ನು ಮತ್ತಷ್ಟು ಸದೃಢಗೊಳಿಸಲು ಬದ್ಧನಾಗಿದ್ದೇನೆ ಎಂದು ಹೇಳಿದರು.

ಪಕ್ಷದ ವಿವಿಧ ಘಟಕಗಳ ಮುಖಂಡರು ಹಾಗೂ ಕಾರ್ಯಕರ್ತರು ಈ ನೇಮಕಾತಿಯನ್ನು ಸ್ವಾಗತಿಸಿ ಶುಭ ಹಾರೈಸಿದರು.

ಜೆಡಿಎಸ್ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದ ಹೈದರ್ ಪರ್ತಿಪ್ಪಾಡಿ, ಮುಖಂಡರಾದ ಗಂಗಾಧರ ಉಳ್ಳಾಲ್, ಜಿಲ್ಲಾ ಕಾರ್ಯಾಧ್ಯಕ್ಷರಾದ ವಸಂತ ಪೂಜಾರಿ,ಇಕ್ಬಾಲ್ ಅಹಮ್ಮದ್ ಮುಲ್ಕಿ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯೋಗೀಶ್ ಶೆಟ್ಟಿ ಜಪ್ಪು,ಯುವ ಜನತಾದಳದ ಜಿಲ್ಲಾಧ್ಯಕ್ಷ ಅಕ್ಷಿತ್ ಸುವರ್ಣ, ಮೀನುಗಾರ ಘಟಕದ ರಾಜ್ಯಾಧ್ಯಕ್ಷ ರತ್ನಾಕರ್ ಸುವರ್ಣ, ಪ್ರಮುಖರಾದ ನಿಹಾಲ್ ಕೋಡ್ತುಗುಳಿ, ಆಂಜನೇಯ ಉಪಸ್ಥಿತರಿದ್ದರು.

# ಬಗಂಬಿಲ: 19ನೇ ವರ್ಷದ ಶ್ರೀ ಗೌರಿ ಗಣೇಶ ಉತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ



**ಬಗಂಬಿಲ:** ಧರ್ಮ, ಜಾತಿ, ರಾಜಕೀಯ ಅಥವಾ ಅಧಿಕಾರದ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎಲ್ಲರೂ ಒಂದಾಗಿ ಸಾಗಿದಾಗ ಮಾತ್ರ ಊರಿನ ಅಭಿವೃದ್ಧಿ ಸಾಧ್ಯ. ನಮ್ಮ ಉತ್ಸವ ಸಮಿತಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಪ್ರತಿಯೊಬ್ಬರೂ ಪ್ರೋತ್ಸಾಹ ನೀಡಿ ಕೈಜೋಡಿಸಿದರೆ, ಬಗಂಬಿಲ ಇನ್ನಷ್ಟು ಸದೃಢವಾಗಿ ಬೆಳೆಯುತ್ತದೆ ಎಂದು ಚಿತ್ರನಟ ಕುಸಲ್ದರಸೆ ನವೀನ್ ಡಿ ಪಡೀಲ್ ಅಭಿಪ್ರಾಯಪಟ್ಟರು.

ಅವರು ಭಾನುವಾರ ಸಂಜೆ ಬಗಂಬಿಲದ ಶ್ರೀ ಸತ್ಯನಾರಾಯಣ ಸಭಾಭವನದಲ್ಲಿ ಬಗಂಬಿಲದ ಶ್ರೀ ಸತ್ಯನಾರಾಯಣ ಮಂದಿರ (ರಿ) ಹಾಗೂ ಸಾರ್ವಜನಿಕ ಶ್ರೀ ಗೌರಿ ಗಣೇಶ ಉತ್ಸವ ಸಮಿತಿಯ ವತಿಯಿಂದ 19ನೇ ವರ್ಷದ ಶ್ರೀ ಗೌರಿ ಗಣೇಶ ಉತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆಯನ್ನು ನೆರವೇರಿಸಿ ಮಾತನಾಡಿದರು.

ಬಗಂಬಿಲ ಸಂಸ್ಕೃತಿಯ ಊರು. ನಮ್ಮನ್ನು ಪ್ರೀತಿಸುವವರನ್ನು ನಾವು ಪ್ರೀತಿಸೋಣ. ಸಂಕಷ್ಟದಲ್ಲಿ ನೆರವಾದವರನ್ನು ಎಂದಿಗೂ ಮರೆಯಬಾರದು. ಪ್ರತಿಯೊಬ್ಬರೂ ತಮ್ಮ ಕುಟುಂಬದ ಜವಾಬ್ದಾರಿಯ ಜೊತೆಗೆ ಸಮಾಜದ ಜವಾಬ್ದಾರಿಯನ್ನೂ ಅರಿತು ಕೆಲಸ ಮಾಡಿದಾಗ ಉತ್ತಮ ಸಮಾಜ ನಿರ್ಮಾಣವಾಗುತ್ತದೆ.ಒಂದು ಕಾಲದಲ್ಲಿ ಕುಗ್ರಾಮವೆಂದು ಗುರುತಿಸಿಕೊಂಡಿದ್ದ ಈ ಊರು, ಇಂದು ದೈವ–ದೇವರ ಆಶೀರ್ವಾದದಿಂದ ಜಿಲ್ಲೆಯಲ್ಲೇ ಉತ್ತಮ ಹೆಸರು ಗಳಿಸಿದೆ. ಕುಂಪಲ, ಬಗಂಬಿಲ ಇಂದು ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಗುರುತಿಸಿಕೊಂಡಿದೆ ಎಂದರು.

ಮುಖ್ಯ ಅತಿಥಿಯಾಗಿದ್ದ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿ, ಬಗಂಬಿಲ ಸತ್ಯನಾರಾಯಣ ಮಂದಿರ ಸಭಾಂಗಣ ಶೀಘ್ರದಲ್ಲೇ ಪೂರ್ಣಗೊಂಡು, ಸ್ಥಳೀಯರು ಸಹಕರಿಸುವ ಜೊತೆಗೆ ಊರಿನ ಅಭಿವೃದ್ಧಿಯ ಜೊತೆಗೆ ತಾನು ನಿಲ್ಲುತ್ತೇನೆ. ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಕಲಾವಿದರು ಕಾರ್ಯಕ್ರಮವನ್ನು ಉದ್ಘಾಟಿಸುವ ಮೂಲಕ ಅವರ ಗೌರವವನ್ನು ಉಳಿಸುವ ಹಿನ್ನೆಲೆಯಲ್ಲಿ ಶೀಘ್ರವೇ ಕಾಮಗಾರಿಗಳು ಪೂರ್ಣಗೊಂಡು ಲೋಕಾರ್ಪಣೆಗೊಳ್ಳಲಿ.

ಎರಡು ರಾಷ್ಟ್ರೀಯ ಪ್ರಶಸ್ತಿಗಳ ಗೌರವಕ್ಕೆ ಪಾತ್ರರಾಗಿರುವ ಖ್ಯಾತ ಕಲಾವಿದ ನವೀನ್ ಪಡೀಲ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಶುಭಾಶಯಗಳು. ಶೀಘ್ರದಲ್ಲೇ ಬಗಂಬಿಲದ ಸಭಾಂಗಣದ ಕಾರ್ಯಕ್ಕೆ ಸಮಯ ನೀಡಿ ಲೋಕಾರ್ಪಣೆ ನೆರವೇರಿಸಬೇಕಿದೆ. ಇಂದು ಬಗಂಬಿಲವು ಸಾಂಸ್ಕೃತಿಕ ಹಾಗೂ ಧಾರ್ಮಿಕವಾಗಿ ಅಭಿವೃದ್ಧಿಯ ಹಾದಿಯಲ್ಲಿದ್ದು, ಇಂತಹ ಬೆಳವಣಿಗೆಗೆ ನವೀನ್ ಪಡೀಲ್ ಅವರಂತಹ ವ್ಯಕ್ತಿತ್ವಗಳ ಪ್ರೋತ್ಸಾಹವೂ ಮತ್ತಷ್ಟು ಬಲ ತುಂಬಲಿ ಎಂಬುದು ನಮ್ಮ ಆಶಯ ಎಂದರು.

ಈ ಸಂದರ್ಭ ವಕೀಲ ಶರಣ್ ಕುತ್ತಾರ್, ಸೋಮೇಶ್ವರ ಪುರಸಭೆ ಅಧ್ಯಕ್ಷ ರವಿಶಂಕರ್ ಸೋಮೇಶ್ವರ, ಮಂದಿರದ ಮಹಾಪೋಷಕ ದಿವಾಕರ್ ಎಂ. ಬಗಂಬಿಲ, ಪ್ರವೀಣ್ ಎಸ್. ಸುವರ್ಣ, ಉದಯ್ ರಾಜ್ ಶೆಟ್ಟಿ, ಹರೀಶ್ ಬಗಂಬಿಲ ಹಾಗೂ ಪ್ರಶಾಂತ್ ಅಮೃತನಗರ , ಶಿವಪ್ರಸಾದ್ ಬಗಂಬಿಲ, ರವಿಪ್ರಸಾದ್ ಬಗಂಬಿಲ ಉಪಸ್ಥಿತರಿದ್ದರು. ಶಿವ–ಪಾರ್ವತಿಯವರು ಕೈಲಾಸದಿಂದ ಭೂಲೋಕಕ್ಕೆ ಆಗಮಿಸುತ್ತಿರುವ ದಿವ್ಯ ಪರಿಕಲ್ಪನೆಯನ್ನು ಒಳಗೊಂಡ ವಿಶಿಷ್ಟ ವಿನ್ಯಾಸದೊಂದಿಗೆ ಬಿಡುಗಡೆಗೊಳಿಸಲಾಯಿತು. ಧಾರ್ಮಿಕ ಭಾವನೆ, ಸಾಂಸ್ಕೃತಿಕ ವೈಭವ ಮತ್ತು ಕಲಾತ್ಮಕತೆಯನ್ನು ಒಂದೇ ಚಿತ್ರಣದಲ್ಲಿ ಮೂಡಿಸಿರುವ ಈ ಆಮಂತ್ರಣ ಪತ್ರಿಕೆ ಎಲ್ಲರ ಗಮನ ಸೆಳೆಯಿತು. ಶಿವ–ಪಾರ್ವತಿಯ ದಿವ್ಯ ಸಾನ್ನಿಧ್ಯವನ್ನು ಪ್ರತಿಬಿಂಬಿಸುವ ಈ ವಿನ್ಯಾಸವು ಉತ್ಸವದ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿದ್ದು, ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭದ ಪ್ರಮುಖ ಆಕರ್ಷಣೆಯಾಗಿ ಮೂಡಿಬಂದಿತು.

ಈ ಸಂದರ್ಭ ರಾಷ್ಟ್ರಪ್ರಶಸ್ತಿ ವಿಜೇತ ನವೀನ್ ಡಿ ಪಡೀಲ್ ಅವರನ್ನು ಸನ್ಮಾನಿಸಲಾಯಿತು. ಬಗಂಬಿಲ ಸತ್ಯನಾರಾಯಣ ಮಂದಿರದ ಯುಟ್ಯೂಬ್ ಚಾನೆಲ್‌ನ ಬಿಡುಗಡೆಯೂ ನಡೆಯಿತು. ಬಗಂಬಿಲದ ಶ್ರೀ ಸತ್ಯನಾರಾಯಣ ಮಂದಿರ ಹೊಸ ಕಟ್ಟಡ ಸ್ಥಾಪನೆಯಾಗಿ ಈಗ ಹತ್ತು ವರ್ಷಗಳು ಪೂರ್ಣಗೊಂಡಿವೆ. ಈ ಅವಧಿಯಲ್ಲಿ ಮಂದಿರವು ಕೇವಲ ಧಾರ್ಮಿಕ ಕೇಂದ್ರವಾಗಿ ಮಾತ್ರವಲ್ಲದೆ, ಸರ್ಕಾರದ ವಿವಿಧ ಯೋಜನೆಗಳು ಹಾಗೂ ಸೌಲಭ್ಯಗಳನ್ನು ಜನರಿಗೆ ತಲುಪಿಸುವ ಸಾಮಾಜಿಕ ಸೇವಾ ಕೇಂದ್ರವಾಗಿಯೂ ಕಾರ್ಯನಿರ್ವಹಿಸುತ್ತಿದೆ.

ಸುಮಾರು ಎಂಟು ವರ್ಷಗಳ ಹಿಂದೆ ಸಭಾಂಗಣ ನಿರ್ಮಾಣಕ್ಕಾಗಿ ಜಾಗವನ್ನು ಖರೀದಿಸಿ ಶಿಲಾನ್ಯಾಸ ನೆರವೇರಿಸಲಾಗಿತ್ತು. ಆದರೆ ಕೊರೊನಾ ಮಹಾಮಾರಿಯ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಂಡಿತ್ತು. ಇದೀಗ ಕಾಮಗಾರಿ ಪುನರಾರಂಭಗೊಂಡಿದ್ದು, ಸುಮಾರು ಶೇ.50ರಷ್ಟು ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಊರಿನ ಜನರಿಗೆ ಅನುಕೂಲವಾಗುವ ಉದ್ದೇಶದಿಂದ ಆಧುನಿಕ ಸಭಾಂಗಣವನ್ನು ನಿರ್ಮಿಸಲಾಗುತ್ತಿದೆ. ಬಗಂಬಿಲದಿಂದ ಬೈಪಾಸ್‌ವರೆಗಿನ ಪ್ರದೇಶದ ಸಾರ್ವಜನಿಕರು ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಿಗೆ ಈ ಸಭಾಂಗಣವನ್ನು ಬಳಸಿಕೊಳ್ಳಬಹುದಾಗಿದೆ.ಒಂದೇ ಸಮಯದಲ್ಲಿ ಸುಮಾರು 1,000 ಜನರು ಸೇರಬಹುದಾದ ವಿಶಾಲ ಸಭಾಂಗಣವನ್ನು ನಿರ್ಮಿಸಲಾಗುತ್ತಿದ್ದು, ಇದು ಈ ಭಾಗದ ಜನರಿಗೆ ಬಹು ಉಪಯುಕ್ತವಾಗಲಿದೆ. ಪ್ರವೀಣ್ ಐ ಬಗಂಬಿಲ ಉಪಾಧ್ಯಕ್ಷರು ಕೋಟೆಕಾರು ಪಟ್ಟಣ ಪಂಚಾಯತ್

# ನರಿಂಗಾನ: ‘ಇಂದ್ರಿಯ ಆರೋಗ್ಯ ಸಪ್ತಾಹ ‘ಆಯುರ್‌ಗ್ರಾಮ 3.0’ ಯಶಸ್ವಿ ಸಮಾರೋಪ




**ಕೊಣಾಜೆ:** ಯೆನೆಪೋಯ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಸಂಹಿತಾ ಸಿದ್ಧಾಂತ ಹಾಗೂ ಸಂಸ್ಕೃತ ವಿಭಾಗದ ವತಿಯಿಂದ 2026ರ ಜುಲೈ 6 ರಿಂದ 13ರವರೆಗೆ ”ಇಂದ್ರಿಯ ಆರೋಗ್ಯ ಸಪ್ತಾಹ ಆಯುರ್‌ಗ್ರಾಮ 3.0\” ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಯಿತು.

ಇಂದ್ರಿಯಗಳ ಆರೋಗ್ಯ ಸಂರಕ್ಷಣೆ ಹಾಗೂ ಆಯುರ್ವೇದದ ಮೂಲಕ ಆರೋಗ್ಯಕರ ಜೀವನಶೈಲಿಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಆಯೋಜಿಸಲಾದ ಈ ವಾರಪೂರ್ತಿ ಕಾರ್ಯಕ್ರಮದಲ್ಲಿ ತಜ್ಞರ ಉಪನ್ಯಾಸಗಳು, ಆರೋಗ್ಯ ಜಾಗೃತಿ ಕಾರ್ಯಕ್ರಮಗಳು, ದಿನಚರ್ಯೆ, ಋತುಚರ್ಯೆ, ಯೋಗ ಮತ್ತು ಪ್ರಾಣಾಯಾಮ, ಔಷಧ ತಯಾರಿಕೆ, ದ್ರವ್ಯ ಪರಿಚಯ, ಸಾರ್ವಜನಿಕ ಆರೋಗ್ಯ ಜಾಗೃತಿ ಅಭಿಯಾನ, ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆಗಳು ಹಾಗೂ ಪ್ರದರ್ಶನಗಳು ಯಶಸ್ವಿಯಾಗಿ ನಡೆಯಿತು. ಜುಲೈ 13ರಂದು ನಡೆದ ಸಮಾರೋಪ ಸಮಾರಂಭದಲ್ಲಿ ವಾರಾಣಸಿಯ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಆಯುರ್ವೇದ ವಿಭಾಗದ ಕ್ರಿಯಾ ಶರೀರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಕಿಶೋರ್ ಪಟವರ್ಧನ್ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಆಯುರ್ವೇದದ ತತ್ವಗಳನ್ನು ಜನಸಾಮಾನ್ಯರ ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವನ್ನು ತಿಳಿಸಿದರು.ಅತಿಥಿ ಗೌರವವನ್ನು ಆಳ್ವಾಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಮೂಡಬಿದಿರೆಯ ಕಾಯಚಿಕಿತ್ಸಾ ವಿಭಾಗದ ಸಹ ಪ್ರಾಧ್ಯಾಪಕರಾದ ಹಾಗೂ ಆಪ್ತಾಸ್ ಆಯುರ್ವೇದ ಟ್ರಸ್ಟ್‌ನ ದಕ್ಷಿಣ ಕನ್ನಡ ಜಿಲ್ಲಾ ಸಂಯೋಜ–ಕರಾದ ಡಾ. ಕೆ. ಕಿರಣ್ ವಹಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯೆನೆಪೋಯ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಹಾಗೂ ಡೀನ್ ಡಾ. ಗುರುರಾಜ ಎಚ್. ವಹಿಸಿದ್ದರು. ಉಪಪ್ರಾಂಶುಪಾಲೆ ಡಾ. ಶುಭದಾ ವಿ. ಐ. ಉಪಸ್ಥಿತರಿದ್ದರು. ಈ ಕಾರ್ಯಕ್ರಮವನ್ನು ಸಂಹಿತಾ ಸಿದ್ಧಾಂತ ಹಾಗೂ ಸಂಸ್ಕೃತ ವಿಭಾಗದ ಹೆಚ್ಚುವರಿ ಪ್ರಾಧ್ಯಾಪಕಿ ಹಾಗೂ ಆಯುರ್‌ಗ್ರಾಮ 3.0ರ ಮುಖ್ಯ ಸಂಯೋಜಕರಾದ ಡಾ. ದಿವ್ಯಾರಾಣಿ ಅವರ ನೇತೃತ್ವದಲ್ಲಿ ಆಯೋಜಿಸಲಾಗಿದ್ದು, ಶೈಕ್ಷಣಿಕ ಸಂಯೋಜಕರಾದ ಡಾ. ತನುಶ್ರೀ ಎನ್. ನಾಯರ್, ಕಾರ್ಯಕ್ರಮ ಸಂಯೋಜಕರಾದ ಡಾ. ಸೂರ್ಯ ಬೃಜೇಶ್, ವಿವಿಧ ವಿಭಾಗಗಳ ಅಧ್ಯಾಪಕರು, ಸಿಬ್ಬಂದಿ ಸಹಕರಿಸಿದರು.”,

# ಬರುತ್ತಿದ್ದಾಳೆ “ಶ್ರೀಮತಿ ಸತ್ಯಭಾಮ” ಕೊಡಿಯಾಲ್ ಬೈಲ್ ಅವರ

## ಕಲಾಸಂಗಮದ ಹೊಸ ನಾಟಕ

**ಮಂಗಳೂರು:** ಆ ಪೋಸ್ಟರೇ ಹೊಸತನವನ್ನು ತುಂಬಿಕೊಂಡಿದೆ, ತಬ್ಬಿಕೊಂಡಿದೆ. “ಶ್ರೀಮತಿ ಸತ್ಯಭಾಮ” ಟೈಟಲ್ ಅನ್ನೇ ಆಭರಣ, ಸೀರೆಯಿಂದ ಅಲಂಕರಿಸಲಾಗಿದೆ. ಃಾಡಿಟಿ ಣಾ ಖಣಟಜ ಎಂಬ ಅಡಿಬರಹ ಹಾಗೂ ಸತ್ಯಭಾಮ ನಿಂತ ಭಂಗಿಯು ಆಕೆಯ ಪಾತ್ರ ಎಂಥದ್ದು ಎಂಬುದನ್ನೂ ಸೂಚಿಸುತ್ತದೆ. ಅವೆಲ್ಲವುಗಳಿಂದ ಮುಖ್ಯವಾಗಿ – ಕೈಲಾಸ –ವೈಕುಂಠ ತಿರ್ಗ್ದ್ ಕಲಾಸಂಗಮ ಕುಡ ಭೂಲೋಕೊಗು ಎಂಬ ಒಂದು ವಾಕ್ಯದ ಮೂಲಕ ಈ ತಂಡವು ಪೌರಾಣಿಕ ಕಥೆಗಳ ಬಳಿಕ ಮತ್ತೆ ಸಾಮಾಜಿಕ ಕಥೆಗೆ ಹೊರಳಿದೆ ಎಂಬುದನ್ನು ವಿಭಿನ್ನವಾಗಿ ತಿಳಿಸುವ ಪ್ರಯತ್ನ ಮಾಡಿದೆ.




ತುಳು ರಂಗಭೂಮಿಯ ಬದಲಾವಣೆಯ ಹರಿಕಾರ, ಹೊಸತನದ ರೂವಾರಿ ಎಂದೇ ಗುರುತಿಸಿಕೊಂಡಿರುವ ವಿಜಯಕುಮಾರ್ ಕೊಡಿಯಾಲ್ ಬೈಲ್ ಅವರು ಎರಡು ಮೂರು ವರ್ಷಗಳಿಂದ ಪೌರಾಣಿಕ, ಐತಿಹಾಸಿಕ ನಾಟಕಕ್ಕೆ ಹೆಚ್ಚಿನ ಒತ್ತು ನೀಡಿದ್ದು, ಈಗ ಮತ್ತೆ ಸಾಮಾಜಿಕ ನಾಟಕಕ್ಕೆ ಮರಳಿದ್ದಾರೆ. ಈ ಹಿಂದೆಯೂ ಅವರು ಒರಿಯರ್ದೊರಿ ಅಸಲ್, ಮದಿಮೆ, ಕುಟುಂಬ, ಕೋಡೆ – ಇನಿ– ಎಲ್ಲೆ, ಮೈತಿದಿ ಮುಂತಾದ ಸಾಮಾಜಿಕ ನಾಟಕಗಳ ಮೂಲಕ ಜನರ ಮನಸ್ಸು ಗೆದ್ದವರು. ಅದಾದ ಬಳಿಕ ಅವರಿಗೆ “ಶಿವದೂತೆ ಗುಳಿಗೆ” ನಾಟಕವು ಅಪಾರ ಖ್ಯಾತಿ ಮತ್ತು ಜನಪ್ರಿಯತೆಯನ್ನು ತಂದು ಕೊಟ್ಟಿದೆ. ಅದರ ಬೆನ್ನಿಗೆ “ಛತ್ರಪತಿ ಶಿವಾಜಿ” ನಾಟಕದ ಮೂಲಕ ಜನಮನ್ನಣೆ ಗಳಿಸಿದರು. ಈಗ ಈ ಬಾರಿ “ಶ್ರೀಮತಿ ಸತ್ಯಭಾಮ” ಎಂಬ ಸಾಮಾಜಿಕ ನಾಟಕದ ಮೂಲಕ ಜನರ ಮುಂದೆ ಬರಲಿದ್ದಾರೆ. “ಶ್ರೀಮತಿ ಸತ್ಯಭಾಮ” ನಾಟಕದ ಪೋಸ್ಟರ್‌ಗಳು ವಾಟ್ಸಾಪ್ ಗ್ರೂಪ್ ಗಳಲ್ಲಿ ಭರ್ಜ–ರಿಯಾಗಿ ಹರಿದಾಡುತ್ತಿದೆ. ಮುಖ್ಯವಾಗಿ ಸತ್ಯಭಾಮ ಪಾತ್ರಧಾರಿಯ ಬಗ್ಗೆ ಸಾಕಷ್ಟು ಕುತೂಹಲವಿದೆ. ಯಾರು ಮಾಡಿರಬಹುದು ಈ ಪಾತ್ರವನ್ನು ಎಂಬ ಕುತೂಹಲವನ್ನು ತಣಿಸಲು ಸದ್ಯಕ್ಕಂತೂ ಕೊಡಿಯಾಲ್‌ಬೈಲ್ ಸಿದ್ಧರಿಲ್ಲ. ತಂಡದಲ್ಲಿ ಯಾವೆಲ್ಲ ಪ್ರಮುಖ ಕಲಾವಿದರು ಇದ್ದಾರೆ ಎಂಬುದನ್ನೂ ಕಾದು ನೋಡಬೇಕಷ್ಟೆ. ಈ ನಾಟಕದಲ್ಲೂ ಅದ್ದೂರಿ ಸೆಟ್ಟಿಂಗ್, ವಿಶೇಷ ತಾಂತ್ರಿಕತೆ ಬಳಸಲು ಕೊಡಿಯಾಲ್ ಬೈಲ್ ಮುಂದಾಗಿದ್ದಾರೆ. ಅ ದ ್ ದ ೂ ರಿ ತ ್ ನ ್ , ತಾ ಂ ತ್ರಿ ಕ ತೆ ಯಿ ಂ ದ ಲೇ “ಶಿವಧೂತೆ ಗುಳಿಗೆ” ಜನಮಚ್ಚುಗೆ ಪಡೆದಿದೆ. ಆದ್ದ–ರಿಂದ ಹೊಸ ನಾಟಕದಲ್ಲೂ ಅದ್ದೂರಿತನಕ್ಕೆ ಕಿಂಚಿತ್ತೂ ಕೊರತೆಯಾಗಬಾರದು ಎಂದು ಕೊಡಿಯಾಲ್‌ಬೈಲ್ ವಿಶೇಷ ಆಸ್ಥೆ ವಹಿಸಿದ್ದಾರೆ. ಸಂಗೀತದ ವಿಷಯಕ್ಕೆ ಬಂದರೆ ಮತ್ತೆ ಅದೇ ಹೆಮ್ಮೆಯ ಎ. ಕೆ. ವಿಜಯ್ ಕೋಕಿಲಾ ಅವರೇ ಕೆಲಸ ಮಾಡಿದ್ದಾರೆ. ಇವರು ಕಲಾಸಂಗಮದ ಹೆಮ್ಮೆಯ ಮತ್ತು ಖಾಯಂ ಸಂಗೀತ ನಿರ್ದೇಶಕರಾಗಿದ್ದಾರೆ. ಕೊಡಿಯಾಲ್‌ಬೈಲ್ ಅವರ ಎಲ್ಲ ಯಶಸ್ವಿ ನಾಟಕಗಳ ಹಿಂದೆ ಈ ಸಂಗೀತ ನಿರ್ದೇಶಕರ ಕೊಡುಗೆ ಪ್ರಮುಖವಾಗಿದೆ. ಶ್ರೀಮತಿ ಸತ್ಯಭಾಮ ಮೇಕಪ್‌ಗೆ ಕುಳಿತಿದ್ದಾಳೆ. ಸದ್ಯದಲ್ಲೇ ಎದ್ದು ಬರಲಿದ್ದಾಳೆ ನಿಮ್ಮ ಮುಂದೆ. ಸ್ವಾಗತಿಸಲು ಸಿದ್ಧರಾಗಿ. ಃಥ *ನವಂಬರ್ 1ರಂದು ಸುರತ್ಕಲ್ ನಲ್ಲಿ “ಶ್ರೀಮತಿ ಸತ್ಯಭಾಮ”* ವಿಜಯಕುಮಾರ್ ಕೊಡಿಯಾಲ್ ಬೈಲ್ ಯಾವುದೇ ಹೊಸ ನಾಟಕಗಳನ್ನು ಮಾಡುವಾಗ ಅಲ್ಲಿ ಅದ್ದೂರಿತನವನ್ನು

ಭಾವಪೂರ್ಣ ಶ್ರದ್ಧಾಂಜಲಿ



ದಿ| ಭವಾನಿ ತಲಪಾಡಿ

ಮಮತೆಯ ಮೂರ್ತಿಗೆ ನಮನ
ಪ್ರೀತಿಯ ಹಾರೈಕೆಯಾಗಿ, ದಾರಿದೀಪದ ಬೆಳಕಾಗಿ ನಮ್ಮ ಪ್ರತಿ ಹೆಜ್ಜೆಯಲ್ಲೂ ಜೊತೆಯಾಗಿ ನಿಂತು, ಬದುಕಿನ ಉನ್ನತ ಸ್ಥಾನಕ್ಕೇರಲು ಶ್ರಮಿಸಿದ ಅಮ್ಮ... ನೀವು ತೋರಿದ ಪ್ರೀತಿ–ವಾತ್ಸಲ್ಯ, ನೀಡಿದ ಸಂಸ್ಕಾರ ಎಂದಿಗೂ ನಮಗೆ ಮಾರ್ಗದರ್ಶಿ. ಅಗಲಿದ ನಮ್ಮ ಪೂಜ್ಯ ಮಾತೃಶ್ರೀ ದಿ| ಭವಾನಿ ಅವರಿಗೆ ಭಕ್ತಿಪೂರ್ವಕ ಪ್ರಣಾಮಗಳು.

ಕಣ್ಣೀರಿನ ನಮನಗಳೊಂದಿಗೆ:
ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಕುಟುಂಬದವರು

# ತೊಕ್ಕೊಟ್ಟು ವಿ.ಕೆ. ಫರ್ನಿಚರ್ & ಎಲೆಕ್ಟ್ರಾನಿಕ್ಸ್‌ನಲ್ಲಿ ‘ಆಷಾಢ ಪ್ರೈಸ್ ಚಾಲೆಂಜ್ ಸೇಲ್–2026




**ಮಂಗಳೂರು:** ವಿ.ಕೆ. ಫರ್ನಿಚರ್ & ಎಲೆಕ್ಟ್ರಾನಿಕ್ಸ್‌ನ ಯೆಯ್ಯಾಡಿ, ತೊಕ್ಕೊಟ್ಟು, ವಾಮಂಜೂರು, ಲೇಡಿಹಿಲ್ ಹಾಗೂ ಉಡುಪಿಯ ಕುಂಜಿಬೆಟ್ಟು ಮಳಿಗೆಗಳಲ್ಲಿ ‘ಆಷಾಢ ಪ್ರೈಸ್ ಚಾಲೆಂಜ್ ಸೇಲ್ – 2026 ಆರಂಭಗೊಂಡಿದೆ. ಈ ವಿಶೇಷ ಮಾರಾಟ ಮೇಳದಲ್ಲಿ ಆಧುನಿಕ ಫರ್ನಿಚರ್ ಹಾಗೂ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳನ್ನು ಮಂಗಳೂರು ಮತ್ತು ಉಡುಪಿಯಲ್ಲಿಯೇ ಅತ್ಯಂತ ಕಡಿಮೆ ಹಾಗೂ ಸ್ಪರ್ಧಾತ್ಮಕ ಬೆಲೆಯಲ್ಲಿ ಖರೀದಿಸುವ ಅವಕಾಶವನ್ನು ಗ್ರಾಹಕರಿಗೆ ಕಲ್ಪಿಸಲಾಗಿದೆ.ಈ ವಿಶೇಷ ಆಫರ್‌ನಲ್ಲಿ ಆಧುನಿಕ ಸೋಫಾ ಸೆಟ್‌ಗಳು: ಕುಷನ್ ಮತ್ತು ಮರದ ಎಲ್ ಕಾರ್ನರ್ ಸೋಫಾ, 3+2+1, 3+2 ಸೋಫಾ, 6 ಮತ್ತು 4 ಸೀಟಿನ ಡೈನಿಂಗ್ ಟೇಬಲ್‌ಗಳು, 2 ಡೋರ್, 3 ಡೋರ್, 4ಡೋರ್ ವಾರ್ಡ್ರೋಬ್‌ಗಳು, ಸ್ಲೈಡಿಂಗ್ ಮೆಟಲ್ ವಾರ್ಡ್ರೋಬ್, ಬೆಡ್‌ರೂಮ್ ಸೆಟ್‌ಗಳು, ಟಿವಿ ಯುನಿಟ್‌ಗಳು, ಬುಕ್ ಶೆಲ್ಫ್ , ಕ್ರೋಕರಿ ಯೂನಿಟ್, ಡ್ರೆಸ್ಸಿಂಗ್ ಟೇಬಲ್, ದೀವಾನ್, ರಾಕಿಂಗ್ ಚೇರ್, ಸೆಂಟರ್ ಟೇಬಲ್ ಸೇರಿದಂತೆ ವಿವಿಧ ಫರ್ನಿಚರ್‌ಗಳ ಮೇಲೆ ಆಕರ್ಷಕ ರಿಯಾಯಿತಿಗಳನ್ನು ನೀಡಲಾಗುತ್ತಿದೆ. ಮಳಿಗೆಗಳು ರವಿವಾರವೂ ತೆರೆದಿರುತ್ತವೆ.ಮಂಗಳೂರಿನ ಏರ್‌ಪೋರ್ಟ್ ರಸ್ತೆಯ ಯೆಯ್ಯಾಡಿ, ಕಲ್ಲಾಪು–ತೊಕ್ಕೊಟ್ಟು, ಉರ್ವಾ–ಚಿಲಿಂಬಿ ಹಾಗೂ ವಾಮಂಜೂರು ಮತ್ತು ಇತ್ತೀಚೆಗೆ ಉದ್ಘಾಟನೆಗೊಂಡ ಉಡುಪಿಯ ಕುಂಜಿಬೆಟ್ಟುವಿನಲ್ಲಿರುವ ವಿ.ಕೆ. ಫರ್ನಿಚರ್ ಮತ್ತು ಎಲೆಕ್ಟ್ರಾನಿಕ್ಸ್ ಮಳಿಗೆಗಳಿಗೆ ಗ್ರಾಹಕರು ಭೇಟಿ ನೀಡಬಹುದಾಗಿದೆ.

ಹೃತ್ಪೂರ್ವಕ ಧನ್ಯವಾದಗಳು



"ಮಂಗಳೂರು ಟ್ರಾಲ್ ಬೋಟ್ ಮೀನುಗಾರರ ಸಂಘ (ರಿ.) ಇದರ ಅಧ್ಯಕ್ಷರಾಗಿ ನನ್ನನ್ನು ಸರ್ವಾನುಮತದಿಂದ ಆಯ್ಕೆ ಮಾಡಿ, ಈ ಜವಾಬ್ದಾರಿಯ ಹೊಣೆಯನ್ನು ನನ್ನ ಹೆಗಲಿಗೇರಿಸಿದ ಸಂಘದ ಎಲ್ಲಾ ಗೌರವಾನ್ವಿತ ಪದಾಧಿಕಾರಿಗಳಿಗೆ, ಹಿರಿಯ ಸಲಹೆಗಾರರಿಗೆ ಹಾಗೂ ಪ್ರತಿಯೊಬ್ಬ ಮೀನುಗಾರ ಬಂಧುಗಳಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.
ನಿಮ್ಮೆಲ್ಲರ ಈ ಅಪಾರ ವಿಶ್ವಾಸ ಮತ್ತು ನಂಬಿಕೆಯನ್ನು ಉಳಿಸಿಕೊಳ್ಳುವುದು ನನ್ನ ಪ್ರಥಮ ಕರ್ತವ್ಯ. ನನ್ನ ಈ ಅಧಿಕಾರಾವಧಿಯಲ್ಲಿ ಮೀನುಗಾರರ ಹಿತರಕ್ಷಣೆಗಾಗಿ, ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಹಾಗೂ ಸಂಘದ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ, ಬದ್ಧತೆಯಿಂದ ಮತ್ತು ಸತತವಾಗಿ ಶ್ರಮಿಸುತ್ತೇನೆ. ಎಲ್ಲರ ಸಹಕಾರದೊಂದಿಗೆ ನಮ್ಮ ಸಂಘವನ್ನು ಉನ್ನತ ಮಟ್ಟಕ್ಕೇರಿಸಲು ದೃಢಸಂಕಲ್ಪ ಮಾಡಿದ್ದೇನೆ.

ಧನ್ಯವಾದಗಳೊಂದಿಗೆ,
ಶ್ರೀ ರಾಜೇಶ್ ಪುತ್ರನ್ ಉಳ್ಳಾಲ
ಅಧ್ಯಕ್ಷರು, ಮಂಗಳೂರು ಟ್ರಾಲ್ ಬೋಟ್ ಮೀನುಗಾರರ ಸಂಘ(ರಿ.)

# 2026–27ರ ಸಾಲಿನ ನರಿಂಗಾನ ಕಂಬಳೋತ್ಸವ ಪ್ರಯುಕ್ತ ಕರೆ ಮುಹೂರ್ತ

**ಕೊಣಾಜೆ:** 2026–27ನೇ ಸಾಲಿನಲ್ಲಿ ಜಿಲ್ಲಾ ಕಂಬಳ ಸಮಿತಿ ಮಾರ್ಗದರ್ಶನದಲ್ಲಿ ನರಿಂಗಾನ ಕಂಬಳ ಸಮಿತಿ ಅಧ್ಯಕ್ಷ ಯು.ಟಿ. ಖಾದರ್ ಅವರ ಅಧ್ಯಕ್ಷತೆಯಲ್ಲಿ ನರಿಂಗಾನ ಗ್ರಾಮದ ಮೋರ್ಲ ಬೋಳದಲ್ಲಿ ನಡೆಯಲಿರುವ ಐದನೆಯ ವರ್ಷದ ಹೊನಲು ಬೆಳಕಿನ ಲವ–ಕುಶ ಜೋಡುಕರೆ ಕಂಬಳ "ನರಿಂಗಾನ ಕಂಬಳೋತ್ಸವ"ದ ಕಂಬಳ ಕರೆ ಮುಹೂರ್ತ ಭಾನುವಾರ ನಡೆಯಿತು.

ಕಂಬಳ ಸಮಿತಿ ಕಾರ್ಯಾಧ್ಯಕ್ಷ ಪ್ರಶಾಂತ್ ಕಾಜವ ಮಿತ್ತಕೋಡಿ ಅವರು ಐದನೆಯ ವರ್ಷದ ಕಂಬಳ ಸುಸೂತ್ರವಾಗಿ ನಡೆಯಲೆಂದು ಪ್ರಾರ್ಥಿಸಿದರು.

ಪ್ರಧಾನ ಕಾರ್ಯದರ್ಶಿ ನವಾಝ್ ನರಿಂಗಾನ, ಉಪಾಧ್ಯಕ್ಷರುಗಳಾದ ಚಂದ್ರಹಾಸ್ ಶೆಟ್ಟಿ ಮೋರ್ಲ, ಕರುಣಾಕರ ಶೆಟ್ಟಿ ಮೋರ್ಲ, ಮ್ಯಾಕ್ಸಿಂ ಡಿಸೋಜ ರಾಣಿಪುರ, ಪ್ರಧಾನ ಸಂಚಾಲಕ



ಗಿರೀಶ್ ಆಳ್ವ ಮೋರ್ಲ, ಕಾರ್ಯದರ್ಶಿ ಪ್ರವೀಣ್ ಆಳ್ವ ಮಯ್ಯಲ, ಜೋಸೆಫ್ ನರಿಂಗಾನ, ಮುರಲೀಧರ ಶೆಟ್ಟಿ ಮೋರ್ಲ, ಸುಂದರ ಪೂಜಾರಿ ಕೋಡಿಮಜಲು ಮೋರ್ಲ, ಜಗದೀಶ್ ಶೆಟ್ಟಿ ಮೋರ್ಲ, ವಿಜೇಶ್ ನಾಯ್ಕ್ ನಡಿಗುತ್ತು, ಐತಪ್ಪ ಶೆಟ್ಟಿ ದೇವಂದಪಡ್ಪು, ವಿಶ್ವನಾಥ ರೈ ಅಡ್ಕ, ಹರಿಪ್ರಸಾದ್ ರೈ, ನಾಗರಾಜ್

■ **ಯು.ಟಿ. ಖಾದರ್ ಅವರ ಅಧ್ಯಕ್ಷತೆಯಲ್ಲಿ ನರಿಂಗಾನ ಗ್ರಾಮದ ಮೋರ್ಲ ಬೋಳದಲ್ಲಿ ನಡೆಯಲಿರುವ ಐದನೆಯ ವರ್ಷದ ಹೊನಲು ಬೆಳಕಿನ ಲವ–ಕುಶ ಜೋಡುಕರೆ ಕಂಬಳ 'ನರಿಂಗಾನ ಕಂಬಳೋತ್ಸವ'**

ರೈ ಚಾವಡಿಬೈಲು, ರವಿ ಪೂಜಾರಿ ಮುಡಿಮಾರ್, ದಯಾನಂದ ಪಾವೂರು, ಶಿವಪ್ರಸಾದ್ ರೈ ಮೀನಂಕೋಡಿ, ಪ್ರವೀಣ್ ಭಂಡಾರಿ ತಾರಿಪ್ಪಾಡಿ, ಗೋಪಾಲ ಶೆಟ್ಟಿ ಮೀನಂಕೋಡಿ, ಹರೀಶ್ ಕನ್ನಿಗುಳಿ, ರೋಮ್ರಿಕ್ ಡಿಸೋಜ ಬೋಳ, ರಾಕೇಶ್ ಪೂಜಾರಿ ಕೊರಕಟ್ಟ, ಕಂಬಳದ ಕೋಣಗಳ ಯಜಮಾನರುಗಳು, ಕಂಬಳ ಪೋಷಕರು, ಕೋಣಗಳನ್ನು ಓಡಿಸುವವರು, ನರಿಂಗಾನ ಕಂಬಳ ಸಮಿತಿ ಪದಾಧಿಕಾರಿಗಳು, ಸದಸ್ಯರು ಹಾಗೂ ಪಾಲ್ಗೊಂಡಿದ್ದರು.

# ಹೆತ್ತವರು, ಗುರುಗಳ ಹೆಸರಲ್ಲಿ ಗಿಡಗಳನ್ನು ನೆಡಿ: ಮಹಮ್ಮದ್ ತ್ವಾಹ

**ಹಳೇಕೋಟೆ:** ಜೀವನದಲ್ಲಿ ಹೆತ್ತವರ ಜೊತೆ ಗುರುಗಳ ಪಾತ್ರವೂ ಮಹತ್ವದ್ದಾಗಿರುವುದರಿಂದ ಮೂವರ ಹೆಸರಲ್ಲಿ ಗಿಡಗಳನ್ನು ನೆಟ್ಟು ಪೋಷಿಸಿ ಪ್ರಕೃತಿಗೆ ಕೊಡುಗೆ ನೀಡಬೇಕು ಎಂದು ಹಳೆಕೋಟೆ ಮಸ್ಜಿದುಲ್ ಕರೀಂ ಅಧ್ಯಕ್ಷ ಮೊಹಮ್ಮದ್ ತ್ವಾಹ ಹೇಳಿದರು.

ಸಯ್ಯದ್ ಮದನಿ ಚಾರಿಟೇಬಲ್ ಟ್ರಸ್ಟ್ ಅಧೀನದ ಹಳೆಕೋಟೆ ಸಯ್ಯದ್ ಮದನಿ ವಿದ್ಯಾಸಂಸ್ಥೆಯಲ್ಲಿ ನಡೆದ ವನಮಹೋತ್ಸವ, ವಿದ್ಯಾರ್ಥಿ ಸರ್ಕಾರದ ಪದಗ್ರಹಣ, ವಿವಿಧ ಸಂಘಗಳ ಉದ್ಘಾಟನೆ, ಶಿಕ್ಷಕರಿಗೆ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಉಳ್ಳಾಲ ನಗರಸಭಾ ಪೌರಾಯುಕ್ತ ಸಂತೋಷ್ ಎಸ್.ಡಿ. ಮಾತನಾಡಿ, ನಾವಿಂದು ಪ್ರಕೃತಿ ಉಳಿಸುವ ಕಾರ್ಯ ಮಾಡಿದರೆ ಮುಂದಿನ ಪೀಳಿಗೆಯನ್ನು ಪ್ರಕೃತಿ ಉಳಿಸುತ್ತದೆ. ಮುಂದಿನ ಜೀವನ ರೂಪಿಸಿಕೊಳ್ಳಲು ಶಿಕ್ಷಣದಿಂದ ಮಾತ್ರ ಸಾಧ್ಯ. ಕನ್ನಡ ಮಾಧ್ಯಮ ಶಾಲೆಯಲ್ಲಿ ಕಲಿತವರು ಇಂದು ಉನ್ನತ ಸ್ಥಾನದಲ್ಲಿದ್ದಾರೆ ಎಂದು ತಿಳಿಸಿದರು.

ಯೂನಿಯನ್ ಬ್ಯಾಂಕ್ ಮುಖ್ಯ ಕಚೇರಿಯ ಮಾರುಕಟ್ಟೆ ವ್ಯವಸ್ಥಾಪಕಿ ಗ್ರೇಸಿ ಲೋಬೋ,



ಫಳ್ನೀರ್ ಶಾಖಾ ವ್ಯವಸ್ಥಾಪಕ ಅಭಿಲಾಷ್ ಟಿ., ಸಯ್ಯದ್ ಮದನಿ ಚಾರಿಟೇಬಲ್ ಟ್ರಸ್ಟ್ ಕೋಶಾಧಿಕಾರಿ ಅಬೂಬಕ್ಕರ್, ಪರಿಸರ ಪ್ರೇಮಿ ಮಾಧವ ಉಳ್ಳಾಲ್, ಕ್ಷೇತ್ರ ಶಿಕ್ಷಣ ಸಂಪನ್ಮೂಲ ವ್ಯಕ್ತಿ ಮೋಹನ್ ಕುಮಾರ್, ಎನ್‌ಎಸ್ ಯುಐ ಪ್ರಧಾನ ಕಾರ್ಯದರ್ಶಿ ಯು.ಟಿ.ಫರೀದ್, ಶಾಲಾ ಸಂಚಾಲಕ ಇಸ್ಮಾಯಿಲ್ ಹಾಜಬ್ಬ, ಶಿಕ್ಷಣ ಪ್ರೇಮಿ ಝೈನುದ್ದೀನ್, ಎಂ.ಎಚ್.ಇಬ್ರಾಹಿಂ, ಹಳೆವಿದ್ಯಾರ್ಥಿ ಶುಕೂರ್ ಮೊದಲಾದವರು ಉಪಸ್ಥಿತರಿದ್ದರು.

ಸಂಸ್ಥೆಯ ಮುಖ್ಯಶಿಕ್ಷಕ ಕೆಎಂಕೆ ಮಂಜನಾಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಶಿಕ್ಷಕಿಯರಾದ ಸಪ್ನಾ ವಂದಿಸಿದರು. ದಾಮಿನಿ ಕಾರ್ಯಕ್ರಮ ನಿರೂಪಿಸಿದರು.

## ನಿಧನ ಸುದ್ದಿ

### ಬಿಜೆಪಿ ಹಿರಿಯ ಮುಖಂಡ ಸಂಜೀವ ಶೆಟ್ಟಿ ಅಂಬ್ಲಮೊಗರು ನಿಧನ

**ಅಂಬ್ಲಮೊಗರು** : ಬಿಜೆಪಿ ಹಿರಿಯ ಮುಖಂಡ, ಜನಸಂಘದ ಸಕ್ರಿಯ ಕಾರ್ಯಕರ್ತ ಹಾಗೂ ಹಿಂದೂ ಧಾರ್ಮಿಕ ಮತ್ತು ಸಾಮಾಜಿಕ



ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಸಂಜೀವ ಶೆಟ್ಟಿ ಅಂಬ್ಲಮೊಗರು (70) ಅವರು ನಿಧನರಾದರು. ಸಂಜೀವ ಶೆಟ್ಟಿ ಅವರು ಅಂಬ್ಲಮೊಗರು ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಲ್ಲದೆ, ಮಂಗಳೂರು ಭೂ ನ್ಯಾಯ ಮಂಡಳಿಯ ಮಾಜಿ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಸಾರ್ವಜನಿಕ ಬದುಕಿನಲ್ಲಿ ಸರಳತೆ, ಸಂಘಟನಾ ನಿಷ್ಠೆ ಮತ್ತು ಸಮಾಜಮುಖಿ ಸೇವೆಯ ಮೂಲಕ ಜನಮನ್ನಣೆ ಗಳಿಸಿದ್ದ ಅವರು, ಬಿಜೆಪಿ ಸಂಘಟನೆಯ ಬಲವರ್ಧನೆಗೆ ಹಾಗೂ ವಿವಿಧ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಗಮನಾರ್ಹ ಸೇವೆ ಸಲ್ಲಿಸಿದ್ದರು. ಹಾಗೂ ಸಾರ್ವಜನಿಕರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಅವರ ಅಗಲಿಕೆಯಿಂದ ಸಂಘಟನೆ ಹಾಗೂ ಸಮಾಜಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಶೋಕ ವ್ಯಕ್ತಪಡಿಸಿದ್ದಾರೆ.

### ಕಿಶೋರ್ ಗಟ್ಟಿ ಶರವು

**ಉಳ್ಳಾಲ** : ಶರವು ನಿವಾಸಿ ದಿ.ಜನಾರ್ದನ ಗಟ್ಟಿ, ದಿ.ಗಿರಿಜಾ ಗಟ್ಟಿ ದಂಪತಿ ಪುತ್ರ ಸೋಮೇಶ್ವರ ಪಂಚಾಯತ್ ಮಾಜಿ ಸದಸ್ಯೆ ಶ್ವೇತ ಗಟ್ಟಿ ಇವರ ಪತಿ ಕಿಶೋರ್ ಗಟ್ಟಿ (50) ಅಲ್ಪಕಾಲದ ಅಸೌಖ್ಯದಿಂದ ಇಂದು ನಿಧನ ಹೊಂದಿದರು. ನಾಳೆ ಬೆಳಿಗ್ಗೆ ಅಂತಿಮ ವಿಧಿ ವಿಧಾನಗಳು ಕುತ್ತಾರು ಮುಂಡೋಳಿ ಮನೆಯಿಂದ ನಡೆಯಲಿದೆ. ಏನೆಪೋಯ ಸಂಸ್ಥೆಯ ಮಾಜಿ ಉದ್ಯೋಗಿಯಾಗಿದ್ದರು. ಸೋಮೇಶ್ವರ ವಲಯ –1 ಕಾಂಗ್ರೆಸ್ ಅಧ್ಯಕ್ಷರಾಗಿಯೂ , ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದುಕೊಂಡು ಹಲವು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಇವರು ಪತ್ನಿ, ಓರ್ವ ಪುತ್ರಿ , ಪುತ್ರನನ್ನು ಅಗಲಿದ್ದಾರೆ.

### ಕಾರು ಢಿಕ್ಕಿ, ಪಾದಚಾರಿ ಮೃತ್ಯು

**ಉಳ್ಳಾಲ:** ಮುಡಿಪು ಬಳಿ ರಸ್ತೆ ದಾಟುತ್ತಿದ್ದ ವೇಳೆ ಕಾರು ಢಿಕ್ಕಿ ಯಾಗಿ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಪಾದಚಾರಿ ವ್ಯಕ್ತಿ ಯೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಘಟನೆ ಗುರುವಾರ ರಾತ್ರಿ ವರದಿಯಾಗಿದೆ. ಅಳೇಕಲ ನಿವಾಸಿ ಅಬ್ದುಲ್ ಖಾದರ್ (66) ಮೃತ ಪಟ್ಟವರು.



ಅವರು ಗುರುವಾರ ಸಂಜೆ ವೇಳೆ ಮುಡಿಪು ಬಳಿ ರಸ್ತೆ ದಾಟುತ್ತಿದ್ದರು ಇದೇ ವೇಳೆ ಕಾರು ಢಿಕ್ಕಿ ಹೊಡೆದಿತ್ತು. ಇದರಿಂದ ಗಂಭೀರ ಗಾಯಗೊಂಡಿದ್ದ ಅವರನ್ನು ಕಾರು ಚಾಲಕ ದೇರಳಕಟ್ಟೆ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಅವರು ಚಿಕಿತ್ಸೆ ಫಲಕಾರಿಯಾಗದೆ ಅದೇ ದಿನ ರಾತ್ರಿ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಮಂಗಳೂರು ದಕ್ಷಿಣ ಸಂಚಾರ ಪೊಲೀಸ್ ಠಾಣೆಯಲ್ಲಿ ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದ್ದು, ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮೃತರು ಪತ್ನಿ, ಮೂರು ಗಂಡು,ಎರಡು ಹೆಣ್ಣು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಕರ್ನಾಟಕ ಜಾನಪದ ಪರಿಷತ್ ಉಳ್ಳಾಲ ತಾಲೂಕು ಘಟಕದ ಪದಗ್ರಹಣ, ಮಹಿಳೆಯರ ಜಿಲ್ಲಾ ಮಟ್ಟದ ಜಾನಪದ ಸಮೂಹ ಗಾಯನ ಸ್ಪರ್ಧೆ

**ಉಳ್ಳಾಲ:** ಜಾನಪದ ಕಲೆ,ಸಂಸ್ಕೃತಿಯನ್ನ ಮುಂದಿನ ಪೀಳಿಗೆಗೂ ಪಸರಿಸುವ ಕಾರ್ಯ ನಮ್ಮದಾಗಿದೆ. ಪಾಶ್ಚಾತ್ಯ ಸಂಸ್ಕೃತಿಗಳ ತೀವ್ರ ಪ್ರಭಾವದ ಎಡೆಯಲ್ಲೂ ದೇಶೀಯ ಜಾನಪದ ಸಂಸ್ಕೃತಿಯನ್ನ ಉಳಿಸಿ ಬೆಳೆಸುವ ನಿಟ್ಟನಲ್ಲಿ ಜಾನಪದ ಪರಿಷತ್ ಉಳ್ಳಾಲ ತಾಲೂಕು ಘಟಕದ ಉಗಮವಾಗಿರುವುದು ಹೆಮ್ಮೆಯ ಸಂಗತಿಯೆಂದು

ಒಡಿಯೂರು ಸಂಸ್ಥಾನದ ಸಾಧ್ವಿ ಶ್ರೀ ಮಾತಾ ಅಮೃತಾನಂದಮಯಿ ಅವರು ಆಶಿಸಿದರು.

ನೂತನವಾಗಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ಜಾನಪದ ಪರಿಷತ್ ಉಳ್ಳಾಲ ತಾಲೂಕು ಘಟಕದ ವತಿಯಿಂದ ಕೊಲ್ಯದ ಶ್ರೀ ಶಾರದಾ ಮಂದಿರದ ಸಭಾಂಗಣದಲ್ಲಿ ಭಾನುವಾರದಂದು ನಡೆದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ಹದಿನೆಂಟು ವರ್ಷ ಮೇಲ್ಪಟ್ಟ ಮಹಿಳೆಯರ ಜಿಲ್ಲಾ ಮಟ್ಟದ "ಪದ ಪನ್ಕ–2026" ಜಾನಪದ ಸಮೂಹ ಗಾಯನ ಸ್ಪರ್ಧೆಯನ್ನ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.



ಜಾನಪದ ಕಲೆ,ಸಂಸ್ಕೃತಿಯೆಂಬುದು ಜನರ ಬಾಯಿಂದ ಬಾಯಿಗೆ ಪಸರಿಸಿದ ಮೌಖಿಕ ಜ್ಞಾನವಾಗಿದೆ. ಹಳ್ಳಿಗಾಡಿನ ಜನರ ಜೀವನ ಪದ್ಧತಿ ಹಾಗೂ ಜೀವಿತಾವಧಿಯ ಅನುಭವಗಳು ಜಾನಪದ ಹಾಡುಗಳಲ್ಲಿ ಅಡಕವಾಗಿದೆ.ಆ ನಿಟ್ಟನಲ್ಲಿ ಜಾನಪದ ಹಾಡುಗಳು ಭಾವನೆಗಳ ಮತ್ತೊಂದು ರೂಪವಾಗಿದ್ದು ಅದರಲ್ಲಿ, ಸಿಹಿ–ಕಹಿಯ ಹೂರಣಗಳಿವೆ. ಇಲ್ಲಿನ ಸಂಸ್ಕೃತಿಯು ನಶಿಸಿದರೆ ದೇಶವೇ ನಾಶವಾಗುವುದೆಂದು ಭಾರತಕ್ಕೆ ದಾಳಿ ನಡೆಸಿದ್ದ ಪರಕೀಯರು ಯೋಚಿಸಿದ್ದರು. ಹಾಗಾಗಿ ನಮ್ಮ ಸಂಸ್ಕೃತಿಯನ್ನ ಉಳಿಸಿ ದೇಶವನ್ನ ಸದೃಢಗೊಳಿಸುವ ಕಾರ್ಯ ನಮ್ಮಿಂದಲೇ ಆಗಬೇಕಿದೆಯೆಂದರು.

ಬಿಜೆಪಿ ಜಿಲ್ಲಾಧ್ಯಕ್ಷರಾದ ಸತೀಶ್ ಕುಂಪಲ ಮಾತನಾಡಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಜಾನಪದ ಪರಿಷತ್ ಉಳ್ಳಾಲ ತಾಲೂಕು ಘಟಕದ ಮೂಲಕ ಜಾನಪದ ಲೋಕವನ್ನ ಸಮೃದ್ಧವಾಗಿ ಬೆಳೆಸುವ

■ **ಹಳ್ಳಿಗಾಡಿನ ಜನರ ಜೀವನ ಪದ್ಧತಿ ಹಾಗೂ ಜೀವಿತಾವಧಿಯ ಅನುಭವಗಳು ಜಾನಪದ ಹಾಡುಗಳಲ್ಲಿ ಅಡಕವಾಗಿದೆ.**

■ **ಜಾನಪದ ಹಾಡುಗಳು ಭಾವನೆಗಳ ಮತ್ತೊಂದು ರೂಪವಾಗಿದ್ದು ಅದರಲ್ಲಿ, ಸಿಹಿ–ಕಹಿಯ ಹೂರಣಗಳಿವೆ.**

■ **ಹಾಗಾಗಿ ನಮ್ಮ ಸಂಸ್ಕೃತಿಯನ್ನ ಉಳಿಸಿ ದೇಶವನ್ನ ಸಧೃಡಗೊಳಿಸುವ ಕಾರ್ಯ ನಮ್ಮಿಂದಲೇ ಆಗಬೇಕಿದೆ**

ಕಾರ್ಯ ನಡೆಸಬೇಕಿದೆಯೆಂದರು.

ಸಹ್ಯಾದ್ರಿ ಕೋ–ಅಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಕೆ.ಟಿ.ಸುವರ್ಣ ಅಧ್ಯಕ್ಷತೆ ವಹಿಸಿದ್ದರು. ಉಳ್ಳಾಲ ಶ್ರೀ ಚೀರುಂಭ ಭಗವತಿ ಕ್ಷೇತ್ರದ ಅಧ್ಯಕ್ಷರಾದ ಸುರೇಶ್ ಭಟ್ನಗರ,ಪ್ರಗತಿಪರ ಕೃಷಿಕರಾದ ಮೀನಾಕ್ಷಿ ಸೀತಾರಾಮ ಶೆಟ್ಟಿ ಪಿಲಾರು ಮೇಗಿನಮನೆ,ಕೊಲ್ಯ ಶ್ರೀ ಮೂಕಾಂಬಿಕಾ ಕ್ಷೇತ್ರದ ಅಧ್ಯಕ್ಷರಾದ ಚಂದ್ರಹಾಸ್ ಪಂಡಿತ್ ಹೌಸ್, ಉದ್ಯಮಿ ಪ್ರಕಾಶ್ ಅನ್ವಿತ್, ಜಾನಪದ ಪರಿಷತ್ ನ ಜಿಲ್ಲಾಧ್ಯಕ್ಷರಾದ ಪ್ರವೀಣ್ (ಪಮ್ಮಿ) ಕೊಡಿಯಾಲ್ ಬೈಲ್, ಕೊಲ್ಯ ಶಾರದಾ ಸೇವಾ ಟ್ರಸ್ಟ್ ಅಧ್ಯಕ್ಷರಾದ ಮೋಹನ್ ಶೆಟ್ಟಿ ಕುಂಪಲ, ಕರ್ನಾಟಕ ಜಾನಪದ ಪರಿಷತ್ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಸ್ಕೈಲಾರ್ಕ್, ಉಳ್ಳಾಲ ತಾಲೂಕು ಘಟಕದ ಪದಾಧಿಕಾರಿಗಳಾದ ಮೋಹನ್ ಶಿರ್ಲಾಲ್, ಜಯಪ್ರಕಾಶ್ ಜೋಗಿ, ಗೋಪಿನಾಥ್ ಬಗಂಬಿಲ,ಸಮೃದ್ಧ್ ಭಂಡಾರಿ, ನಮಿತ್ ಕುತ್ತಾರು, ಗಣೇಶ್ ಪಂಡಿತ್ ಮುಳಿಹಿತ್ಲು , ಮೋಹನ್ ಗಟ್ಟಿ ಕುತ್ತಾರು ಮೊದಲಾದವರು ಉಪಸ್ಥಿತರಿದ್ದರು.

ಜಾನಪದ ಪರಿಷತ್ ಉಳ್ಳಾಲ ತಾಲೂಕು ಘಟಕದ ಅಧ್ಯಕ್ಷ ಪ್ರವೀಣ್ ಎಸ್.ಕುಂಪಲ ಸ್ವಾಗತಿಸಿದರು.ಪ್ರಧಾನ ಕಾರ್ಯದರ್ಶಿ ವಿಜೇತ್ ಶೆಟ್ಟಿ ಮಂಜನಾಡಿ ಮತ್ತು ಸಾಂಸ್ಕೃತಿಕ ಕಾರ್ಯದರ್ಶಿ ವಿಜಯಲಕ್ಷ್ಮಿ ಕಟೀಲು ನಿರೂಪಿಸಿದರು.ಸಂಘಟನಾ ಕಾರ್ಯದರ್ಶಿ ಕಿರಣ್ ಕೊಲ್ಯ ವಂದಿಸಿದರು.

# ಶ್ರೀಕೃಷ್ಣ ಸಾಂಸ್ಕೃತಿಕ ಮಹೋತ್ಸವ ಸಮಿತಿ ಕುತ್ತಾರು ಅಧ್ಯಕ್ಷರಾಗಿ ರವಿ ರೈ ಪಜೀರು ಆಯ್ಕೆ

**ಕುತ್ತಾರು:** ಶ್ರೀಕೃಷ್ಣ ಸಾಂಸ್ಕೃತಿಕ ಮಹೋತ್ಸವ ಸಮಿತಿ ಕುತ್ತಾರು ಇದರ ಅಧ್ಯಕ್ಷರಾಗಿ ರವಿ ರೈ ಫಜೀರು ಶೃತಿ ಲಯ ಕಲಾ ಕೇಂದ್ರ ಕುತ್ತಾರು ಮುಂದಾಳತ್ವದಲ್ಲಿ ಕುತ್ತಾರು ಶ್ರೀ ರಾಜರಾಜೇಶ್ವರಿ ಸಿದ್ಧಿವಿನಾಯಕ ದೇವಸ್ಥಾನ ಸಭಾಂಗಣದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ನಡೆಯಲಿರುವ ನಾಲ್ಕನೇ ವರ್ಷದ ಕುತ್ತಾರು ಮುದ್ದುಕೃಷ್ಣ ಸ್ಪರ್ಧಾ ಕಾರ್ಯಕ್ರಮಕ್ಕೆ ಶ್ರೀ ಕೃಷ್ಣ ಸಾಂಸ್ಕೃತಿಕ ಮಹೋತ್ಸವ ಸಮಿತಿಯನ್ನು ಅಧ್ಯಕ್ಷರಾದ ಹರೀಶ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು.



ಅಧ್ಯಕ್ಷರಾಗಿ ರವಿ ರೈ ಫಜೀರು ಗೌರವ ಅಧ್ಯಕ್ಷರಾಗಿ ಪ್ರಕಾಶ್ ಸಿಂಪೋನಿ ಗೌರವ ಸಲಹೆಗಾರರು ನರೇಶ್ ಕುಮಾರ್ ಬಬ್ಬುಕಟ್ಟೆ ನಿರ್ದೇಶಕರಾಗಿ ಭಾಸ್ಕರ್ ಕುತ್ತಾರ್, ಪ್ರಧಾನ ಕಾರ್ಯದರ್ಶಿ ತ್ಯಾಗಮ್ ಹರೇಕಳ, ಕೋಶಾಧಿಕಾರಿ ನವೀನ್ ಕುತ್ತಾರ್ ಉಪಾಧ್ಯಕ್ಷರುಗಳಾಗಿ ಭೋಜಾನಂದ ಬಾಳೆಪುಣಿ ಶಿವಕುಮಾರ್ ಟಿ ಹರೇಕಳ, ಶ್ರೀದೇವಿ ರೈ ಬರಿಕೆ, ಭಾರತಿ ಶೆಟ್ಟಿ ಬಿಕರ್ನಕಟ್ಟೆ, ಸದಾನಂದ ಬಾಳೆಪುಣಿ, ಚಂದ್ರಕಲಾ ಟೀಚರ್,ಪೂಜಾ ಶೆಟ್ಟಿ,ನಾಗವೇಣಿ ಶೆಟ್ಟಿ ಅಸೈಗೋಳಿ, ರಶ್ಮಿ , ಸೋನಿ ರೈ, ಚಂದ್ರಕಲಾ ಶೆಟ್ಟಿ ಜೊತೆ ಕಾರ್ಯದರ್ಶಿ ಅಭಿಷೇಕ್ ಬೇಕಲ್, ಸಂಘಟನ ಕಾರ್ಯದರ್ಶಿ ಅಮರನಾಥ್ ಬೇಕಲ್ ಸಂಚಾಲಕರು ರಾಜೇಶ್ ಆಚಾರ್ಯ , ದೇವಿಪ್ರಸಾದ್ ರೈ ಪೆಲತ್ತಾಡಿ , ಆಕಾಂಕ್ಷ ಬಿ ಶೆಟ್ಟಿ ಬಬ್ಬುಕಟ್ಟೆ , ವೇದಿಕೆ ಸಮಿತಿ ಸಂಚಾಲಕರು,ರೋಶಲ್ ಪ್ರಕಾಶ್ , ಸೌಮ್ಯ, ಸಾಂಸ್ಕೃತಿಕ ಸಮಿತಿ ಸಂಚಾಲಕರು ಅಂಜನಾ ಅಭಿಷೇಕ್ , ಮೇಘಶ್ರೀ ರಾವ್ ಮಂಜೇಶ್ವರ, ಅತಿಥಿ ಸತ್ಕಾರ ಸಮಿತಿ ಸಂಚಾಲಕರು ಶುಭಲತಾ, ವಿಜಯಲಕ್ಷ್ಮಿ ನೋಂದಣಿ ಸಮಿತಿ ಸಂಚಾಲಕರು ರಶ್ಮಿ , ವಿನುತ ಭಾಸ್ಕರ್ ,ಗ್ರೀನ್ ರೂಮ್ ಸಮಿತಿ ಸಂಚಾಲಕರು,ಬಿಂದ್ಯಾ ಕುಲಾಲ್ , ದೀಪಶ್ರೀ ಕೊಂಡಾಣ , ಸ್ಪರ್ಧಾ ಸಮಿತಿ ಸಂಚಾಲಕರು ಶರ್ಮಿತ ಅಸೈಗೋಳಿ, ಸುವರ್ಣ ಕೊಣಾಜೆ , ಅರ್ಪಿತಾ ,ಊಟ ಉಪಹಾರ ಸಮಿತಿ ಸಂಚಾಲಕರು , ಸುಜಿತ್ ಮಾಡೂರು ,ಸುನಿಲ್ ಮಾಡೂರು ಸ್ವಾಗತ ಸಮಿತಿ ಸದಸ್ಯರಾಗಿ ನಯನ ಅಸೈಗೋಳಿ , ಗೀತಾ ಶೆಟ್ಟಿ ನಾರ್ಯಗುತ್ತು, ಅನುಶ್ರೀ ಬಾಳೆಪುಣಿ, ನಯನ, ಶೃಜನ್ , ಸುಜಿತ್ ಬೀರಿ, ಅಕ್ಷರ ಆರ್ ಆಚಾರ್ಯ,ಕು.ಹರ್ಷಿತಾ ಆಚಾರ್ಯ,ತನ್ವಿ, ಅಶ್ವಿತಾ, ಸುನಿಲ್ ಮಾಡೂರು, ಶಮನ್ ಆಚಾರ್ಯ ದೇರಳಕಟ್ಟೆ, ಮಾಲವಿಕ, ಗೌತಮಿ ಉಳ್ಳಾಲ,ಅಂಕಿತ ಸಂತೋಷ್ ನಗರ, ಸ್ಪರ್ಧಾ ಸಮಿತಿ ಸದಸ್ಯರು ರೇಖಾ, ಪ್ರೇಮಲತಾ ಟೀಚರ್ , ಕುಸುಮ ಉಡುಪ, ಮಂಜುಳಾ ಮಂಜೇಶ್ವರ , ಕು. ಹಂಶಿಣಿ, ನಿಶಾ ಕರ್ಕೇರ, ಶ್ರೀ ನಿತೇಶ್, ರಮ್ಯ ಬೇಕಲ್,ಲತಾ, ಶ್ರೀಮತಿ ಕೆ ಸುನೀತಾ ಟೈಲರ್ ಮುಡಿಪು, ದೇವಿಕಾ ಶೆಟ್ಟಿ ಪಿಲಾರು ನಯನ ಬಬ್ಬುಕಟ್ಟೆ ನೋಂದಣಿ ಸಮಿತಿ ಸದಸ್ಯರು ಕಾವ್ಯ ಶ್ರೀ, ರೇಖಾ ವಿಶ್ವನಾಥ್, ಕು. ವಂದಿತಾ ರಾವ್, ಸಾವಿತ್ರಿ ಪಂಡಿತ್ ಹೌಸ್ , ಅಂಕಿತ, ದಿಷಿತ ಪ್ರಕಾಶ್ ನಗರ, ಗೌತಮಿ ಸಂತೋಷ್ ನಗರ, ಪ್ರತ್ವಿಕ ಚೆಂಬುಗುಡ್ಡೆ , ಊಟ ಉಪಹಾರ ಸಮಿತಿ ಸದಸ್ಯರು ಶ್ರೀಮತಿ ಶರ್ಮಿಳಾ ಶೆಟ್ಟಿ ಪೆಲತ್ತಾಡಿ, ಪ್ರಾಂಜನ್ ಶೆಟ್ಟಿ , ಅಭಿಷೇಕ್ ಶೆಟ್ಟಿ ಕಂಬ್ಳಪದವು , ಶ್ರೀಮತಿ ರಮ್ಯ ದೇರಳಕಟ್ಟೆ, ಶಮನ್ ಆಚಾರ್ಯ ದೇರಳಕಟ್ಟೆ, ಯಶಸ್ ರೈ, ಪದ್ಮಶ್ರೀ ಅಸೈಗೋಳಿ, ಸವಿತಾ ಅಸೈಗೋಳಿ, ತೃಷಾ ಅಸೈಗೋಳಿ ಮಾನ್ಯ ಪ್ರಕಾಶ್ ನಗರ, ಭಾರತಿ ರೈ ಅಸೈಗೋಳಿ, ಇಶಾನಿ ದೇರಳಕಟ್ಟೆ ಮುಂತಾದವರು ಆಯ್ಕೆಯಾದರು. ಶೃತಿ ಲಯ ಮಹಿಳಾ ಕಲಾ ಕೇಂದ್ರದ ಅಧ್ಯಕ್ಷರು ಶೋಭಾ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು

# ಉಳ್ಳಾಲ ನಗರಸಭೆ: ಮತದಾರರ ವಿಶೇಷ ಪರಿಷ್ಕರಣೆಯ ದಿಜಿಟಲೈಶೇಷನ್



**ಉಳ್ಳಾಲ:** ತಾಲೂಕು ವ್ಯಾಪ್ತಿಯ ಎಸ್ ಐಆರ್ ಮತದಾರರ ವಿಶೇಷ ಪರಿಷ್ಕರಣೆ ಇದರ ದಿಜಿಟಲೈಶೇಷನ್ ಮಾಡುವ ಕಾರ್ಯವು ನಗರ ಸಭೆ ಕಾರ್ಯಾಲಯದಲ್ಲಿ ಆರಂಭಿಸ ಲಾಯಿತು. ತಹಶೀಲ್ದಾರ್ ಪ್ರಶಾಂತ್ ಅವರು ಈ ಕಾರ್ಯ ಕ್ರಮದ ನೇತೃತ್ವ ವಹಿಸಿದ್ದರು. ಮಾಹಿತಿ ಹಂಚಿದ ಅವರು ಈ ತಿಂಗಳ ಅಂತ್ಯದ ವರೆಗೆ ಮತದಾರರ ವಿಶೇಷ ಪರಿಷ್ಕರಣೆ ಇದರ ದಿಜಿಟಲೈಶೇಷನ್ ಗೆ ಅವಕಾಶ ಇದೆ. ಈ ಕಾರ್ಯ ನಡೆಯುತ್ತಿದ್ದು, ಉಳ್ಳಾಲ ನಗರ ಸಭೆ ವ್ಯಾಪ್ತಿಯಲ್ಲಿ 42, ತಾಲೂಕು ವ್ಯಾಪ್ತಿಯಲ್ಲಿ 210 ಬಿಎಲ್‌ಒ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ತಿಂಗಳ 25 ರ ಒಳಗೆ ಮತದಾರರ ವಿಶೇಷ ಪರಿಷ್ಕರಣೆ ಕಾರ್ಯ ಮುಗಿಸುತ್ತೇವೆ ಎಂದು ಹೇಳಿದರು. ನಗರ ಸಭೆ ಪೌರಾಯುಕ್ತ ಸಂತೋಷ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

**ಸೋನಿಯಾ, ರಾಹುಲ್ ಗಾಂಧಿಯವರೇ ಭ್ರಷ್ಟಾಚಾರ ಪ್ರಕರಣದಲ್ಲಿ ಜಾಮೀನಿನಲ್ಲಿ ಹೊರಗಿದ್ದಾರೆ**

# ಕಳಂಕವಿಲ್ಲದ ಮೋದಿಜಿಯನ್ನ ಅಯೋಧ್ಯೆ ವಿಚಾರದಲ್ಲಿ ಎಳೆತರಲು ಪ್ರಯತ್ನ: ಬಿಜೆಪಿ ಆಕ್ರೋಶ

**ಉಳ್ಳಾಲ:** ಕಾಂಗ್ರೆಸ್ ನ ವರಿಷ್ಠ ನಾಯಕರಾದ ಸೋನಿಯಗಾಂಧಿ ಮತ್ತು ರಾಹುಲ್ ಗಾಂಧಿಯವರೇ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಭ್ರಷ್ಟಾಚಾರ ಪ್ರಕರಣದ ಆರೋಪಿಗಳಾಗಿದ್ದು ನ್ಯಾಯಾಲಯದ ಜಾಮೀನಿನಲ್ಲಿ ಹೊರಗಿದ್ದಾರೆ. ರಾಮ ಮಂದಿರ ನಿರ್ಮಾಣಕ್ಕೆ ಪ್ರಧಾನಿ ಮೋದಿ ಸಹಕಾರ ಕೊಟ್ಟಿದ್ದಾರೆ. ಟ್ರಸ್ಟಲ್ಲಿ ಆದ ಅವ್ಯವಹಾರಕ್ಕೂ ಅವರಿಗೂ ಎತ್ತಣ ಸಂಬಂಧ? ಮೋದಿಯವರ ವಿರುದ್ಧ ಯಾವುದೇ ಭ್ರಷ್ಟಾಚಾರದ ಅಸ್ತ್ರ ಸಿಗದ ಕಾರಣ ಅಯೋಧ್ಯೆ ವಿಚಾರದಲ್ಲಿ ಸುಖಾ ಸುಮ್ಮನೆ ಅವರ ಹೆಸರನ್ನ ಎಳೆ ತರಲು ಪ್ರಯತ್ನಿಸಲಾಗುತ್ತಿದೆಯೆಂದು ಬಿಜೆಪಿ ಮಂಗಳೂರು ಮಂಡಲದ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್.ಕೆ ಆರ್ ಹೇಳಿದರು.

ಅಯೋಧ್ಯೆಯ ರಾಮ ಮಂದಿರದಲ್ಲಿ ಕೋಟ್ಯಂತರ ರೂ. ಹಗರಣಗಳಾದರೂ ಪ್ರಧಾನಿ ಮೋದಿ ಹಾಗೂ ಹಿಂದೂ ಸಂಘಟನೆಗಳು ಮೌನವಹಿಸಿರುವುದು ಯಾಕೆಂದು ಕಾಂಗ್ರೆಸ್ ಮುಖಂಡ ಅಭಿಷೇಕ್ ಉಳ್ಳಾಲ್ ಕೇಳಿರುವ ಪ್ರಶ್ನೆಗೆ ಪ್ರತಿಯಾಗಿ ತೊಕ್ಕೊಟ್ಟಿನ ಉಳ್ಳಾಲ ಪ್ರೆಸ್ ಕ್ಲಬ್ಬಲ್ಲಿ ನಡೆದ ಪತ್ರಿಕಾಗೋಷ್ಟಿಯನ್ನುದ್ಧೇಶಿಸಿ ಅವರು ಮಾತನಾಡಿದರು.

ಅಯೋಧ್ಯೆಯ ರಾಮಮಂದಿರದ ಅವ್ಯವಹಾರ ವಿಚಾರದಲ್ಲಿ ನಮಗೂ ವಿಷಾದವಿದೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ದಿಟ್ಟ ಹೆಜ್ಜೆಯಿಟ್ಟು ಪ್ರಕರಣದ ತನಿಖೆಗಾಗಿ ಎಸ್ ಐಟಿ ರಚಿಸಿ ತಪ್ಪಿತಸ್ಥರನ್ನ ಬಂಧಿಸಿ ವಿಚಾರಣೆ ನಡೆಸಿ ರಿಕವರಿ ಪ್ರಕ್ರಿಯೆ ನಡೆಸುತ್ತಿರುವುದು ಅಭಿನಂದನೀಯ.ಯೋಗಿಗೆ ಯಾವಾಗ ಎಲ್ಲಿ ಬುಲ್ಡೋಜರ್ ಹರಿಸಬೇಕೆಂದು ಗೊತ್ತಿದೆ.ಕಾಂಗ್ರೆಸಿಗರ ಬಿಟ್ಟಿ ಸಲಹೆ ಅವರಿಗೆ ಬೇಕಿಲ್ಲ.ಅಯೋಧ್ಯೆ ಪ್ರಕರಣವು ಎಸ್ ಐಟಿ ತನಿಖಾ ಹಂತದಲ್ಲಿರುವ ಸಂದರ್ಭದಲ್ಲಿ ಪ್ರಧಾನಿ ಅಥವಾ ಯಾವುದೇ ನಾಯಕರು ಮಧ್ಯಪ್ರವೇಶಿಸಿ ಮಾತನಾಡುವುದು ಕಾನೂನು ರೀತಿಯಲ್ಲಿ ಸಮಂಜಸವಲ್ಲವೆಂಬುದನ್ನ ಕಾಂಗ್ರೆಸಿಗರು ಅರ್ಥೈಸಬೇಕು.

ನಕಲಿ ಖಾತೆಗಳಿಗೆ ಹಣ ಜಮೆ ಆಗುವ ಮೂಲಕ ರಾಜ್ಯ ಸರಕಾರದ ಗೃಹಲಕ್ಷ್ಮಿ ಯೋಜನೆಯಲ್ಲಿ 5 ಸಾವಿರ ಕೋ. ರೂ. ಹಗರಣ ಆಗಿದೆ. ಇದರ ಬಗ್ಗೆ ಕಾಂಗ್ರೆಸ್ ಮುಖಂಡರು ಯಾಕೆ ಮೌನವಾಗಿದ್ದೀರಿ.ಹಗರಣದ ಸಮಗ್ರ ತನಿಖೆ ನಡೆಸಲು ಎಸ್ ಐಟಿ ರಚಿಸಲು ಮುಖ್ಯಮಂತ್ರಿ, ಮಂತ್ರಿಗಳನ್ನ ಆಗ್ರಹ ಮಾಡಿಯೆಂದರು.

ಬಿಜೆಪಿ ಮಂಗಳೂರು ಮಂಡಲದ ಪ್ರಧಾನ ಕಾರ್ಯದರ್ಶಿ ದಯಾನಂದ ತೊಕ್ಕೊಟ್ಟು, ಯುವ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷರಾದ ನಿಶಾನ್ ಪೂಜಾರಿ, ಮಂಡಲ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶರಣ್ ಶೆಟ್ಟಿ,ಸಾಮಾಜಿಕ ಜಾಲತಾಣ ಸಂಚಾಲಕ ಗಣೇಶ್ ನಡಾರ್ ಪತ್ರಿಕಾಗೋಷ್ಟಿಯಲ್ಲಿ ಉಪಸ್ಥಿತರಿದ್ದರು.




### ಮೂಡ ಭ್ರಷ್ಟಾಚಾರದ ಬಗ್ಗೆ ತಮ್ಮ ತಂದೆಯನ್ನ ಪ್ರಶ್ನಿಸಲಿ

ಮೋದಿ ಪ್ರೆಸ್ ಮೀಟ್ ಕರೆಯದೆ ಯಾಕೆ ಮೌನವಾಗಿದ್ದಾರೆಂದು ಕೇಳಿರುವ ಕಾಂಗ್ರೆಸ್ ಮುಖಂಡ ಅಭಿಷೇಕ್ ಅವರ ತಂದೆ ಸದಾಶಿವ ಉಳ್ಳಾಲ್ ಅವರು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ.ಪ್ರಾಧಿಕಾರದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದ್ದರೂ ಸಹ ಯಾಕೆ ಮೌನವಾಗಿದ್ದೀರೆಂದು ಅಭಿಷೇಕ್ ಅವರು ಮೊದಲು ತಮ್ಮ ತಂದೆಯವರನ್ನ ಸಿಕ್ಕ ಸಿಕ್ಕಲ್ಲಿ ಪ್ರಶ್ನಿಸಬೇಕಿದೆ.ಸ್ಥಳೀಯ ಶಾಸಕ,ಸಚಿವರಾದ ಯು.ಟಿ ಖಾದರ್ ಅವರು ಮರೆಯಲ್ಲಿ ನಿಂತು ಕಾಂಗ್ರೆಸ್ಸಿನ ಕೆಲ ಹಿಂದೂ ನಾಯಕರನ್ನ ಛೂ ಬಿಟ್ಟು , ಉಳ್ಳಾಲದ ಹಿಂದೂಗಳ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆಂದು ಮೋಹನ್ ರಾಜ್ ಆರೋಪಿಸಿದರು.

### ಕಾಂಗ್ರೆಸ್ ಶ್ರೀರಾಮನ ವಿರುದ್ಧವೇ ಇತ್ತು

ಕಾಂಗ್ರೆಸ್ ಮುಖಂಡ ಅಭಿಷೇಕ್ ಅವರು ಕಾಂಗ್ರೆಸ್ ರಾಮ ಮಂದಿರದ ವಿರುದ್ಧ ಹೋಗಿಲ್ಲವೆಂದು ಹೇಳಿದ್ದಾರೆ. ಹಾಗಾದರೆ ಕಾಂಗ್ರೆಸ್ ಯಾವಾಗ ರಾಮ ಮಂದಿರದ ಪರವಾಗಿತ್ತೆಂದು ಪ್ರಶ್ನಿಸಿದರು.2017 ರಲ್ಲಿ ಸುನ್ನೀ ವಕ್ಫ್ ಬೋರ್ಡ್ ಪರವಾಗಿ ಹಾಗೂ ರಾಮ ಮಂದಿರ ನಿರ್ಮಾಣ ಟ್ರಸ್ಟ್ ವಿರುದ್ಧವಾಗಿ ಹಿರಿಯ ಕಾಂಗ್ರೆಸಿಗ ಕಪಿಲ್ ಸಿಬಲ್ ನ್ಯಾಯಾಲಯದಲ್ಲಿ ವಾದಿಸಿದ್ದರು.ಅದಕ್ಕೂ ಹಿಂದೆ ರಾಮಾಯಣ ಕಾಲ್ಪನಿಕ,ರಾಮ ಎಂಬ ಪಾತ್ರವೇ ಇಲ್ಲವೆಂದು ಕಾಂಗ್ರೆಸಿಗರು ಕೋರ್ಟಲ್ಲಿ ಅಫಿದವಿತ್ ಹಾಕಿದ್ದರು.ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರವು ರಾಮೇಶ್ವರದ ರಾಮ ಸೇತುವನ್ನೇ ಒಡೆದು ಹಾಕಲು ಪ್ರಯತ್ನಿಸಿತ್ತು.ಪ್ರತೀ ಸಂದರ್ಭದಲ್ಲೂ ಶ್ರೀರಾಮನ ವಿರುದ್ಧವೇ ಇದ್ದ ಕಾಂಗ್ರೆಸಿಗರು ಕೊನೆಗೆ ಅಯೋಧ್ಯೆಯಲ್ಲಿ ನಡೆದ ಶ್ರೀರಾಮ ದೇವರ ಪ್ರಾಣ ಪ್ರತಿಷ್ಟೆಗೂ ಬಂದಿರಲಿಲ್ಲ.ರಾಮನ ಶಾಪದಿಂದಲೇ ಹಿಂದೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ಇಂದು ವಿಪಕ್ಷ ಸ್ಥಾನಕ್ಕೂ ಲಾಯಕ್ಕಿಲ್ಲದಂತಾಗಿದೆ.ರಾಮ ಮಂದಿರ, ಸೋಮನಾಥ ದೇವಸ್ಥಾನಗಳನ್ನ ಧ್ವಂಸ ಮಾಡಿದವರು ಯಾರೆಂದು ಹೇಳಲು ಧೈರ್ಯವಿಲ್ಲದ ಕಾಂಗ್ರೆಸಿಗರು ರಾಮ ಮಂದಿರದ ವಿಚಾರದಲ್ಲಿ ರಾಜಕೀಯ ಬೇಳೆ ಬೇಯಿಸಲು ಹೊರಟಿರುವುದು ಹಾಸ್ಯಾಸ್ಪದ.

■ ಜೀವನ್ ಕುಮಾರ್ ತೊಕ್ಕೊಟ್ಟು, ಬಿಜೆಪಿ ಜಿಲ್ಲಾ ವಕ್ತಾರ

# ಅತ್ಯುತ್ತಮ ಸೇವೆ ಸಲ್ಲಿಸಿದ ಪೊಲೀಸ್ ಅಧಿಕಾರಿಗಳು–ಸಿಬ್ಬಂದಿಗೆ ಪ್ರಶಂಸನಾ ಪತ್ರ, ನಗದು ಬಹುಮಾನ

**ಮಂಗಳೂರು:** ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಕಳೆದ ಆರು ತಿಂಗಳ ಅವಧಿಯಲ್ಲಿ ವಿವಿಧ ಠಾಣೆಗಳ ಅಪರಾಧ ಪ್ರಕರಣಗಳ ಪತ್ತೆ ಕಾರ್ಯ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸಿ ಕಾರ್ಯದಕ್ಷತೆಯನ್ನು ಮೆರೆದ 29 ಪೊಲೀಸ್ ಅಧಿಕಾರಿಗಳು ಮತ್ತು 118 ಸಿಬ್ಬಂದಿಯನ್ನು ಗುರುತಿಸಿ ಸೋಮವಾರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ನಗದು ಬಹುಮಾನ ಮತ್ತು ಪ್ರಶಂಸನಾ ಪತ್ರ ನೀಡಿ ಗೌರವಿಸಿದರು.24 ಎಲ್‌ಪಿಸಿ ಪ್ರಕರಣಗಳ ಮತ್ತು ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದ ಎನ್‌ಬಿಡಬ್ಲ್ಯು ವಾರಂಟ್ ಹೊಂದಿದ್ದ ಆರೋಪಿಗಳನ್ನು ಪತ್ತೆಹಚ್ಚಲಾಗಿದೆ. 2026ನೇ ಸಾಲಿನಲ್ಲಿ ಸೊತ್ತು ಕಳವುಗಳ ಪೈಕಿ 88 ಪ್ರಕರಣಗಳ ಆರೋಪಿಗಳನ್ನು ಬಂಧಿಸಿ 1.20 ಕೋ.ರೂ. ಮೌಲ್ಯದ ಕಳವಾದ ಸೊತ್ತುಗಳನ್ನು ವಶಪಡಿಸಲಾಗಿದೆ.

ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಟದಲ್ಲಿ ತೊಡಗಿದ್ದ ಪೆಡ್ಲರ್‌ಗಳ ವಿರುದ್ಧ 84 ಪ್ರಕರಣಗಳನ್ನು ದಾಖಲಿಸಿ, 142 ಆರೋಪಿಗಳನ್ನು ಬಂಧಿಸಿ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಮಾದಕ ವಸ್ತು ಸೇವನೆಗೆ ಸಂಬಂಧಿಸಿದಂತೆ 346 ಪ್ರಕರಣಗಳನ್ನು ದಾಖಲಿಸಿ 443 ಆರೋಪಿಗಳನ್ನು ವಶಕ್ಕೆ ಪಡೆದು ಅವರಿಂದ ಪೆಡ್ಲರ್‌ಗಳ ಕುರಿತು ಮಾಹಿತಿ ಸಂಗ್ರಹಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ. ಸೈಬರ್ ಅಪರಾಧಗಳು ನಡೆಯದಂತೆ ನಗರ ವ್ಯಾಪ್ತಿಯಲ್ಲಿ ಜಾಗೃತಿ ಹಾಗೂ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದರ ಪರಿಣಾಮ ಸಾರ್ವಜನಿಕರಲ್ಲಿ ಜಾಗೃತಿ ಮೂಡಿದ್ದು, ಪ್ರಸಕ್ತ ಸಾಲಿನಲ್ಲಿ ಸೈಬರ್ ವಂಚನೆ ಪ್ರಕರಣಗಳ ಪ್ರಮಾಣದಲ್ಲಿ ಇಳಿಕೆ ಕಂಡು ಬಂದಿದೆ. ಸೈಬರ್ ವಂಚನೆ ನಡೆದ ತಕ್ಷಣ 1930 ಸಹಾಯ ವಾಣಿಗೆ ಕರೆ ಮಾಡುವ ಮೂಲಕ ತ್ವರಿತ ಕ್ರಮ ಕೈಗೊಂಡು, ವಂಚನೆಗೊಳಗಾದ ಹಣವನ್ನು ಮರುಪಡೆಯಲು ಅಗತ್ಯ ಕ್ರಮಗಳನ್ನು ಕೈಗೊಂಡಿರುವ ಪೊಲೀಸ್ ಅಧಿಕಾರಿ/




- **ನೇಪಾಳದಿಂದ ಕಾರ್ಯನಿರ್ವಹಿಸುತ್ತಿದ್ದ ಜಾಲವನ್ನು ಭೇದಿಸಿ ದೇಶದಾದ್ಯಂತ ವಿವಿಧ ರಾಜ್ಯಗಳಲ್ಲಿ ಸೈಬರ್ ಅಪರಾಧ ಮಾಡಿದ ಆರೋಪಿಗಳನ್ನು ಯಶಸ್ವಿಯಾಗಿ ಪತ್ತೆ ಹಚ್ಚಲು ಸಹಕರಿಸಿದ್ದರು.**
- **ಸಾಮಾಜಿಕ ಜಾಲತಾಣಗಳ ಮೇಲೆ ಇಲಾಖೆಯು ನಿರಂತರ ನಿಗಾ ವಹಿಸಿದ್ದು, ದ್ವೇಷ ಭಾಷಣ, ಅಪಪ್ರಚಾರ ಹಾಗೂ ಪ್ರಚೋದನಕಾರಿ ಸಂದೇಶಗಳನ್ನು ಹರಡುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಂಡಿರುತ್ತಾರೆ.**

ಸಿಬ್ಬಂದಿಗಳನ್ನು ಕೂಡ ಗೌರವಿಸಲಾಯಿತು. ಸೈಬರ್ ಅಪರಾಧಗಳ ಪತ್ತೆ ಕಾರ್ಯದಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದ್ದ ಅಧಿಕಾರಿ/ಸಿಬ್ಬಂದಿಗಳನ್ನು ಗೌರವಿಸಲಾಯಿತು.

ಮುಖ್ಯವಾಗಿ ನೇಪಾಳದಿಂದ ಕಾರ್ಯನಿರ್ವಹಿಸುತ್ತಿದ್ದ ಜಾಲವನ್ನು ಭೇದಿಸಿ ದೇಶದಾದ್ಯಂತ ವಿವಿಧ ರಾಜ್ಯಗಳಲ್ಲಿ ಸೈಬರ್ ಅಪರಾಧ ಮಾಡಿದ ಆರೋಪಿಗಳನ್ನು ಯಶಸ್ವಿಯಾಗಿ ಪತ್ತೆ ಹಚ್ಚಲು ಸಹಕರಿಸಿದ್ದರು. ಸಾಮಾಜಿಕಜಾಲತಾಣಗಳಮೇಲೆಇಲಾಖೆಯು ನಿರಂತರ ನಿಗಾ ವಹಿಸಿದ್ದು, ದ್ವೇಷ ಭಾಷಣ, ಅಪಪ್ರಚಾರ ಹಾಗೂ ಪ್ರಚೋದನಕಾರಿ ಸಂದೇಶಗಳನ್ನು ಹರಡುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಪರಿಣಾಮಕಾರಿ ಅಧಿಕಾರಿ/ಸಿಬ್ಬಂದಿಗಳು ಕ್ರಮ ಕೈಗೊಂಡಿರುತ್ತಾರೆ. ಪ್ರಮುಖ ಪ್ರಕರಣಗಳಲ್ಲಿ ತನಿಖಾಧಿಕಾರಿಗಳಾಗಿ, ತನಿಖಾ ಸಹಾಯಕರಾಗಿ ಹಾಗೂ ನ್ಯಾಯಾಲಯದ ಕರ್ತವ್ಯಗಳಲ್ಲಿ ಉತ್ತಮ ಸೇವೆ ಸಲ್ಲಿಸಿ ಗುಣಮಟ್ಟದ ತನಿಖೆ ನಡೆಸುವ ಮೂಲಕ ಆರೋಪಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆಯಾಗುವಂತೆ ಶ್ರಮಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನೂ ಗೌರವಿಸಲಾಯಿತು.

ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿವಿಧ ಪ್ರಮುಖ ಬಂದೋಬಸ್ತುಗಳನ್ನು ಯಾವುದೇ ಅಹಿತ ಕರ ಘಟನೆಗಳು ಸಂಭವಿಸದಂತೆ ಯಶಸ್ವಿಯಾಗಿ ನಿರ್ವಹಿಸುವಲ್ಲಿ ಹಾಗೂ 112 ತುರ್ತು ಸ್ಪಂದನೆ ಸಹಾಯ ವಾಣಿಯ ಮೂಲಕ ಸಾರ್ವಜನಿಕರಿಗೆ ತ್ವರಿತ ಸೇವೆ ಒದಗಿಸುವಲ್ಲಿ ಅತ್ಯುತ್ತಮ ಕಾರ್ಯನಿರ್ವಹಿಸಿದ ನಗರದ ನಿಸ್ತಂತು ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು ಎಂದು ಪೊಲೀಸ್ ಆಯುಕ್ತಾಲಯ ಪ್ರಕಟನೆಯಲ್ಲಿ ತಿಳಿಸಿದೆ.







Ullalavani, Published by Ravi Bangera, Printed at DIGANTA MUDRANA LTD 5-184/185 NEAR INDUSTRIAL AREA YEYYADI MANGALARE, DAKSHINA KANNADA, KARNATAKA - 575008. News Editor: Mohan Kuthar.
Editorial Office at : Appachi Complex, Kuthar, Munnur Post, Someshwar Village, Ullal Tq - 575 017, Call : 9972528110. RNI:KNKAN/26/A0422. Email: ullalavani@gmail.com